ಶ್ರೀಮತಿ ಉಮಾಶ್ರೀ ಅವರು ಕನ್ನಡ ರಂಗಭೂಮಿ ಹಾಗೂ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಉತ್ತಮ ಅಭಿನಯ ಸಾಮರ್ಥ್ಯವನ್ನು ರುಜುವಾತು ಪಡಿಸಿ, ಪ್ರಸ್ತುತ ಕನ್ನಡ ಚಿತ್ರವಾದ "ಗುಲಾಬಿ ಟಾಕೀಸ್"ನಲ್ಲಿ ಅತ್ಯುತ್ತಮ ನಟನೆಗಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಾದ ಅತ್ಯುತ್ತಮ ನಟಿ ಪ್ರಶಸ್ತಿಗೆ ಭಾಜನರಾಗಿರುವುದು ಹಾಗೂ ಕನ್ನಡದ ಈ ಚಲನಚಿತ್ರವು ಅತ್ಯುತ್ತಮ ಚಲನಚಿತ್ರಕ್ಕೆ ಆಯ್ಕೆಯಾಗಿರುವುದು ಸಂತೋಷದ ವಿಷಯವಾಗಿದೆ. ಆದುದರಿಂದ ಈ ಸದನವು ಶ್ರೀಮತಿ ಉಮಾಶ್ರೀಯವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಮುಂದುವರಿದಂತೆ, ಕನ್ನಡ ನಾಡಿನಲ್ಲಿ ಹುಟ್ಟಿ, ಬೆಳೆದು, ಕನ್ನಡ ಚಲನಚಿತ್ರದಲ್ಲಿ ಉತ್ತಮ ಅಭಿನಯಕ್ಕೆ ಖ್ಯಾತಿ ಪಡೆದು, ಪ್ರಸ್ತುತ ತಮಿಳು ಚಿತ್ರರಂಗದಲ್ಲಿ ಹೆಸರುಗಳಿಸಿರುವ ಶ್ರೀ ಪ್ರಕಾಶ್ ರೈ ಅವರು "ಕಾಂಚೀವರಂ" ಚಲನಚಿತ್ರದಲ್ಲಿ ನೀಡಿರುವ ಅಮೋಘ ಹಾಗೂ ಅದ್ಭುತ ನಟನೆಗಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಾದ "ಅತ್ಯುತ್ತಮ ನಟ" ಪ್ರಶಸ್ತಿಗೆ ಆಯ್ಕೆಯಾಗಿರುವುದು ಸಹ ಸಂತೋಷದ ವಿಷಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಸದನವು ಶ್ರೀ ಪ್ರಕಾಶ್ ರೈ ಅವರಿಗೂ ಸಹ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ ಹಾಗೂ ಅಭಿನಂದನೆಗಳಿಗೆ ಪಾತ್ರರಾದ ಮೂವರೂ ಸಹ ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲೆಂದು ಈ ಸದನವು ಆಶಿಸುತ್ತದೆ.

ಈ ನಿರ್ಣಯವನ್ನು ಅಭಿನಂದಿತ ಗಣ್ಯರುಗಳಿಗೆ ಕಳುಹಿಸಿ ಕೊಡಲಾಗುವುದು.

9. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮುಂದುವರೆದ ಚರ್ಚೆ :

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಒಂದು ವಿಶೇಷವಾದ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಸದನವನ್ನು ಮುಂದುವರೆದ ಸದನವನ್ನಾಗಿ ಇಂದು ಕರೆದಿದ್ದಾರೆ. ಬಹುಶಃ ಇದಕ್ಕೆ ಮೂಲ ಕಾರಣ ಏನೆಂದರೆ, ಹಿಂದಿನ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ಯಾವುದೋ ಒಂದು ಸಂದರ್ಭದಲ್ಲಿ ನಾನು ಈ ರಾಜ್ಯದಲ್ಲಿ ಆಗಿರುವ ಎಲ್ಲಾ ಅವ್ಯವಹಾರಗಳನ್ನು ತೆಗೆಯುವುದಕ್ಕಾಗಿ ವಿಶೇಷವಾದ ಅಧಿವೇಶನ ಕರೆಯುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆಗ ಮಾರನೇ ದಿವಸ ಪತ್ರಿಕೆಯಲ್ಲಿ ಏನು ಬಂತು ಎಂದರೆ, ವಿಶೇಷವಾದ ಸದನ ಕರೆದಿರುವಂಥ

ನಿದರ್ಶನಗಳು ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಬಹಳ ತಾಕತ್ತು ತೋರಿಸಿದ್ದಾರೆ ಎನ್ನುವ ರೀತಿಯಲ್ಲಿ ವ್ಯಾಖ್ಯಾನಗಳು ಬಂದವು. ಎಲ್ಲೋ ಒಂದು ಕಡೆಗೆ ಮೆಚ್ಚುಗೆ ಕೂಡ ಬಂತು. ನಮಗೆ ಒಂದು ರೀತಿಯಲ್ಲಿ ಶಕ್ತಿ ಬಂತು. ಪರವಾಗಿಲ್ಲ ಮುಖ್ಯಮಂತ್ರಿಗಳು ಹಗರಣಗಳ ಬಗ್ಗೆ ಮಾತನಾಡುವುದಕ್ಕೆ ವಿಶೇಷವಾದ ಅಧಿವೇಶನ ಕರೆದು ಅವಕಾಶ ಕೊಡುತ್ತಾರೆ ಹೀಗಾಗಿ ನಾವು ಸ್ವಲ್ಪ ತಯಾರಾಗಬೇಕೆಂದು ಯೋಚಿಸುತ್ತಿದ್ದೆವು. ಅಷ್ಟರಲ್ಲಿ ಶುರುವಾಯಿತು. ಅದ್ಯಾಕೋ ಆದನ್ನು ಕೈಬಿಟ್ಟು ಗ್ರಾಮೀಣ ಮತ್ತು ಕೃಷಿಯ ಬಗ್ಗೆ ಚರ್ಚಿಸಬೇಕೆಂದು ಶುರುವಾಯಿತು. ಅದು ಏನೇ ಇರಲಿ, ತಂದಿರತಕ್ಕಂಥ ವಿಚಾರ ಅತ್ಯಂತ ಗಹನವಾದ ವಿಚಾರ. ಅದರ ಬಗ್ಗೆ ನನ್ನ ಆಕ್ಷೇಪವಿಲ್ಲ. ಇಡೀ ರಾಜ್ಯದ ಇಡೀ ದೇಶದ ನೂರಕ್ಕೆ 72 ರಷ್ಟು ಜನ ಇವತ್ತು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರು ನಂಬಿರತಕ್ಕಂಥ ಚಟುವಟಿಕೆ ಕೃಷಿ ಇವತ್ತು ಯಾವ ಮಟ್ಟದಲ್ಲಿ ಇದೆ? ರೈತರ ಪರಿಸ್ಥಿತಿ ಏನಾಗಿದೆ ಎನ್ನುವುದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕಾಗಿರುವುದು ನಿಜ. ಹಿಂದಿನ ಸದನಗಳಲ್ಲಿ ಡಿಮ್ಯಾಂಡ್ಸ್ ಚರ್ಚೆಯಾಗದೇ ಗಿಲೋಟಿನ್ ಹಾಕಿ ಬಜೆಟ್ ಪಾಸ್ ಮಾಡಿರುವಂಥದ್ದು ಇದೆ. ಅದಕ್ಕೆ ಸಂದರ್ಭಗಳು ಏನೇ ಇರಲಿ. ಆದರೆ, ನಿಜವಾಗಲೂ ಕೂಡ ಆ ವಿಚಾರದಲ್ಲಿ ಚರ್ಚೆಯಾಗಬೇಕಾಗಿತ್ತು. ಆ ಚರ್ಚೆ ಆವತ್ತು ಆಗಲಿಲ್ಲ. ಅನ್ನುವ ಕಾರಣಕ್ಕೋ ಏನು ಕತೆಯೋ ಇವತ್ತು ಯಾವುದೋ ಒಂದು ಸನ್ನಿವೇಶದ ಹಿನ್ನಲೆಯಲ್ಲಿ ಇದನ್ನು ತಂದಿದ್ದಾರೆ. ನಿಜ ಇದರ ಬಗ್ಗೆ ಚರ್ಚೆಯಾಗಬೇಕು. ನಾವು ಸಂಪೂರ್ಣವಾಗಿ ಸರಕಾರದ ಜೊತೆಗೆ ಈ ವಿಚಾರದಲ್ಲಿ ಸ್ಪಂದಿಸುವುದಕ್ಕೆ ತಯಾರಿದ್ದೇವೆ. ಆದರೆ ಬೆಳಗ್ಗೆ ಕೊಟ್ಟಂಥ ದಾಖಲೆ, ಇದು ಸರಕಾರದ ದಾಖಲೆ. ಮಾನ್ಯ ಮುಖ್ಯಮಂತ್ರಿಗಳು ಆಯ್ಕೆಯಾಗಿದ್ದಂಥ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ನಾನು ರೈತರ ಪರ, ರೈತರ ಪ್ರತಿನಿಧಿ, ಎಂದು ಹೇಳುವ ನಿಟ್ಟಿನಲ್ಲಿ ಏನು ತೋರ್ಪಡಿಸಿದರು ಆ ಸಂದರ್ಭದಲ್ಲಿ ಸದನ ಪ್ರಾರಂಭವಾಗುವ ಪ್ರಾರಂಭದಲ್ಲಿ ಇಂಥ ವಿಚಾರ ನೀವು ಮಂಡನೆ ಮಾಡಿದ್ದರೆ ಅದಕ್ಕೊಂದು ಅರ್ಥ ಬರುತ್ತಿತ್ತು, ಮೆಚ್ಚುಗೆ ಬರುತ್ತಿತ್ತು. ಹೌದು ಜನಗಳ ಆಶೀರ್ವಾದ ಪಡೆದು ರೈತರ ಆಶೀರ್ವಾದದಿಂದ ಅಧಿಕಾರಕ್ಕೆ ಬಂದಿರತಕ್ಕಂಥ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾ ಗಿದ್ದಾರೆ, ರೈತರ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದಾರೆ, ಗ್ರಾಮೀಣ ಕಲ್ಪನೆ ಇಟ್ಟುಕೊಂಡಿದ್ದಾರೆ, ಮಹಾತ್ಮ ಗಾಂಧೀಜಿಯರು ಹೇಳಿದ ಸ್ವರಾಜ್ಯದ ಬಗ್ಗೆ

ಕಲ್ಪನೆ ಇಟ್ಟುಕೊಂಡಿದ್ದಾರೆ ಎನ್ನುವ ರೀತಿಯಲ್ಲಿ ನಾವು ವ್ಯಾಖ್ಯಾನ ಮಾಡಬಹುದಾಗಿತ್ತು. ಈಗ ತಾವು ಅಧಿಕಾರದ ಗದ್ದುಗೆಯನ್ನು ಏರಿ ಒಂದೂವರೆ ವರ್ಷವಾಗಿದೆ. ಈಗಾಗಲೇ ಸದನದ ಮುಂದೆ 2008-09ರ action taken report ಅನ್ನು ಸದನದ ಮುಂದೆ ಮಂಡಿಸಿದ್ದೀರಿ. ಬಹುಶಃ ತಾವು ಅದನ್ನು ಯಾರಾದರೂ ಸೂಕ್ಷ್ಮವಾಗಿ ಯೋಚನೆ ಮಾಡಿದರೆ, ನೀವು ಹೇಳಿದ ಹಾಗೆ, ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಂಥವರು. ನೀವು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ನೀವೇ ಹೇಳಿದ ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ನಿಮ್ಮ action taken report ಹೇಳುತ್ತದೆ. ಒಂದೂವರೆ ವರ್ಷವಾದ ನಂತರ ನಿಮಗೆ ಎಲ್ಲೋ ಒಂದು ರೀತಿಯಲ್ಲಿ ಜ್ಞಾನೋದಯ ವಾಗಿದೆಯೆ? ಎಲ್ಲೋ ಒಂದು ಕಡೆಗೆ ನಾನು ರೈತರನ್ನು ಮರೆತನೆ? ಎನ್ನುವ ಭ್ರಮೆಯೂ ಬಂದಿರಬಹುದು. ಬಂದರೂ ತಪ್ಪೇನಿಲ್ಲ. ನಿಮ್ಮ ಕಾಲಾವಧಿಯಲ್ಲಿ ರೈತರ ಬಗ್ಗೆ ಚಿಂತನೆ ಮಾಡುವ ನಿಟ್ಟಿನಲ್ಲಿ ವಿಶೇಷವಾಗಿ ಸದನ ಕರೆದಿದ್ದೀರಿ. ನೀವು ಕೇವಲ ಇಂಥ ವಿಚಾರದಲ್ಲಿ ಸದನ ಕರೆದಿದ್ದೇನೆಂದು ಹೇಳಿದ್ದರೆ ನಾನೇನು ಹೆಚ್ಚಿಗೆ ಹೇಳುತ್ತಿರಲಿಲ್ಲ. ಆದರೆ ನೀವು ಕೊಟ್ಟಂಥ ದಾಖಲೆಯನ್ನು ನೋಡಿದಾಗ, ನಾನು ಇದನ್ನು ಸಂಪೂರ್ಣವಾಗಿ ಓದುವುದಕ್ಕೆ ಆಗಿಲ್ಲ. ಸ್ವಲ್ಪ ಮಟ್ಟಿಗೆ ಗ್ಲಾನ್ಸ್ ಮಾಡಿದ್ದೇನೆ. ಇದರಲ್ಲಿ ನೀವು ಎಲ್ಲಿಂದ ಪ್ರಾರಂಭ ಮಾಡಿ ಎಲ್ಲಿಗೋ ಹೋಗಿ ಎಲ್ಲಿಗೋ ವಿಚಾರವನ್ನು ತರುತ್ತಿದ್ದೀರಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಹೇಳುವುದಾದರೆ.

ಶ್ರೀ ಟಿ.ಬಿ. ಜಯಚಂದ್ರ : ದಯಮಾಡಿ ಬೇಡಿ. ನಾನು ಇನ್ನು ಪ್ರಾರಂಭಿಸಿಲ್ಲ.

ಅಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ : ನಾನು ಇನ್ನು ಪ್ರಾರಂಭ ಮಾಡಿಲ್ಲ. ದಯಮಾಡಿ ನಾನು ಒಂದು ಮಾತನ್ನು ಹೇಳುತ್ತೇನೆ. ನಾವು ಮಾತನಾಡುವಂಥ ಸಂದರ್ಭದಲ್ಲಿ ನಾನು ಹೇಳಿದ ಹಾಗೆ, ತಾವು ಅಧಿಕಾರದ ಗದ್ದುಗೆ ಏರಿದ ತಕ್ಷಣ ತಾವು ಈ ಮಾತನ್ನು ಹೇಳಿದ್ದರೆ ನಾವ್ಯಾರೂ ಕೂಡ ಟೀಕೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ಒಂದೂವರೆ ವರ್ಷ ಕಳೆದಿದೆ, ಒಂದೂವರೆ ವರ್ಷದಲ್ಲಿ ನಿಮ್ಮ ಯೋಜನೆಗಳು ಎಷ್ಟರಮಟ್ಟಿಗೆ ಅನುಷ್ಠಾನವಾಗಿವೆ, ಈ

ರಾಜ್ಯದ ಹಣಕಾಸಿನ ಪರಿಸ್ಥಿತಿ ಎಷ್ಟರ ಮಟ್ಟಿಗೆ ಇದೆ, ನೀವು ಸಂಪನ್ಮೂಲಗಳನ್ನು ಕ್ರೋಡೀಕರಿಸುವದಕ್ಕೆ ಸಾಧ್ಯವಿಲ್ಲದೆ ಸಾಲದ ಮೊರೆ ಹೋಗಿರುವುದು ಎಲ್ಲರಿಗೂ ಗೊತ್ತಿದೆ. ಇಂಥ ಸನ್ನಿವೇಶದಲ್ಲಿ ಭಾಷಣ ಸರಕಾರಿ ದಾಖಲೆಯಲ್ಲಿ ಇರಬೇಕಾದರೆ, ಸರಕಾರದ ಕ್ರಮ ಆಗಬೇಕಾದಾಗ, ಎಷ್ಟರ ಮಟ್ಟಿಗೆ ಜನ ನಂಬುತ್ತಾರೆ? ಆನ ನಂಬಲಿ ಬಿಡಲಿ, ಯಾರಾದರೂ ಶಾಸಕರಿಗಾದರೂ ನಂಬಿಕೆ ಬರುತ್ತದೆಯೆ? ನಾನು ಈ ಮಾತನ್ನು ಟೀಕೆ ಮಾಡುವುದಕ್ಕೆ ಹೇಳುತ್ತಿಲ್ಲ. ಇದು ಒಂದು ಮುಖ್ಯವಾದ ವಿಚಾರವನ್ನು ನೀವು ಪ್ರಸ್ತಾಪ ಮಾಡಿದ್ದೀರಿ. ನಿಮ್ಮ ಕಳಕಳಿಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ನಿಮಗೆ ಕಳಕಳಿ ಇರಬಹುದು, ನೀವು ರೈತಪರ ಹೋರಾಟದ ಹಿನ್ನೆಲೆಯಲ್ಲಿ ಬಂದಂಥವರು. ನಿಮಗೆ ಆ ಕಳಕಳಿ ಇದೆ. ನಾನು ನೀವು ಇದನ್ನು ಸಾಧನೆ ಮಾಡಬೇಕೆಂದು ಹೇಳುವ ಹಿನ್ನಲೆಯಲ್ಲಿ, ಇದು ಒಂದು ರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿರತಕ್ಕಂತದ್ದು, ಎಂದಾದರೂ ಒಂದು ದಿವಸ ಮಾನ್ಯ ಯಡಿಯೂರಪ್ಪನವರೆ ನಾನು ತಮಗೊಂದು ಕಿವಿ ಮಾತನ್ನು ಹೇಳುತ್ತೇನೆ, ನೀವು ಇವತ್ತು ಈ ಸಭೆಗೆ ವಿಶೇಷವಾಗಿ ವಿಶೇಷವಾದ ಚರ್ಚೆಯನ್ನು ಮಾಡುವ ಸಂದರ್ಭದಲ್ಲಿ ನೀವು ಏನಾದರೂ ನಿರ್ಣಯ ತೆಗೆದುಕೊಂಡು ಅನುಷ್ಠಾನ ಮಾಡದೇ ಇದ್ದರೆ ಏನಾಗುತ್ತದೆ ಎನ್ನುವುದರ ಬಗ್ಗೆ ಯೋಚಿಸಬೇಕಾಗುತ್ತದೆ. It is a risky proposition and risky decision. ಏಕೆಂದರೆ ಎಲ್ಲರಿಗೂ ಗೊತ್ತಿರುವ ಹಾಗೆ ಈ ವ್ಯವಸಾಯ ಎಂದರೆ, ವ್ಯವಸಾಯದ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಂಡಂತೆ, ವ್ಯವಸಾಯ ಎಂದರೆ, ಮನೆ ಮಂದಿ ಎಲ್ಲಾ ಸಾಯ ಅಂತ. ಇದು ಇವತ್ತಿನಿಂದ ಅಲ್ಲ ಇದು ಅನಾಧಿಕಾಲದಿಂದಲೂ ನಡೆದುಕೊಂಡು ಬಂದಿರುವುದು. ಇದು ಈ ರಾಜ್ಯಕ್ಕೆ, ದೇಶಕ್ಕೆ ಸೀಮಿತವಾಗಿಲ್ಲ. ಇಡೀ ಪ್ರಪಂಚದ ವ್ಯವಸ್ಥೆಯಾಗಿದೆ. ಯಾವ ದೇಶದಲ್ಲೂ ಕೂಡ ಕೃಷಿಕನಾಗಿರುವವನು, ನಾನು ನೆಮ್ಮದಿಯಿಂದ ಇದ್ದೇನೆ, ನನಗೆ ಕೃಷಿ ಲಾಭದಾಯಕವಾದ ಉದ್ದಿಮೆಯಾಗಿದೆ, ನಾನು ಸುಖವಾಗಿದ್ದೇನೆಂದು ಹೇಳುವ ರೈತರ ಇಡೀ ಪ್ರಪಂಚದಲ್ಲಿ ಒಬ್ಬರೂ ಇಲ್ಲ. ಇವತ್ತು ಇನ್‌ಕಂ ಟ್ಯಾಕ್ಸ್ ಕೊಡುತ್ತಿರುವವರು, ವ್ಯಾಪಾರಿಗಳು, ಕೈಗಾರಿಕೋದ್ಯಮದವರು, ದಲ್ಲಾಳಿಗಳು. ಆದರೆ ಇನ್‌ಕಂ ಟ್ಯಾಕ್ಸ್ ಕೊಡುತ್ತಿರುವ ರೈತರು ಎಷ್ಟು ಜನರು ಇದ್ದಾರೆ? ತಾವು ಹೇಳುವುದು ನಿಜ, ಇವತ್ತು ಈ ರೀತಿಯಲ್ಲಿ ಇರುವ ಕೃಷಿಗೆ ಒಂದು ಅರ್ಥ ಬರಬೇಕು. ಇದೊಂದು ಲಾಭಾದಾಯಕವಾದ ಉದ್ದೆಯಾಗಬೇಕು. ನಮ್ಮ ರಾಜ್ಯ ಮತ್ತು ನಮ್ಮ ದೇಶದಲ್ಲಿ ಏನಾಗಿದೆ

ಎಂದರೆ, ನಮ್ಮ ಒಟ್ಟಾರೆ ಮುಕ್ಕಾಲು ಭಾಗ ಜನಸಂಖ್ಯೆ ಇರತಕ್ಕಂಥದ್ದು ಹಳ್ಳಿಗಳಲ್ಲಿ ಕೃಷಿಯನ್ನು ನಂಬಿರತಕ್ಕಂಥವರು. ನಾವು ಇವತ್ತು ಕೃಷಿಯನ್ನು ಅಭಿವೃದ್ಧಿ ಮಾಡದೇ ಇದ್ದರೆ, ಕೃಷಿಗೆ ಒತ್ತು ಕೊಡದೇ ಹೋದರೆ, ಬಹುಶಃ ನಮ್ಮ ಜನ ನೆಮ್ಮದಿಯಿಂದ ಬದುಕುವುದಕ್ಕೆ ಸಾಧ್ಯವಿಲ್ಲ. ನಾವು ಇವತ್ತು ರೈತರನ್ನು ಬಹಳ ರೀತಿಯಾಗಿ ಹಾಡುತ್ತೇವೆ, ಹೊಗಳುತ್ತೇವೆ, ನೇಗಿಲು ಯೋಗಿ, ಅನ್ನದಾತ ಎಂದು ಕರೆಯುತ್ತೇವೆ. ಅವನ ಪರಿಸ್ಥಿತಿ ಏನಾಗಿದೆ ಎಂದರೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾವು ಒಂದು ಮಾತನ್ನು ಜ್ಞಾಪಕ ಇಟ್ಟುಕೊಳ್ಳಬೇಕಾಗುತ್ತದೆ. ಈ ದೇಶದಲ್ಲಿ ಇದ್ದ ಜನಸಂಖ್ಯೆ ಕೇವಲ 33 ಕೋಟಿ. 33 ಕೋಟಿ ಜನಸಂಖ್ಯೆ ಇದ್ದಂಥ ಸಂದರ್ಭದಲ್ಲಿ 1947 ರಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗ 1964–65 ರಲ್ಲಿ ನಮ್ಮ ಪರಿಸ್ಥಿತಿ ಏನಾಗಿತ್ತು? ನಮ್ಮಲ್ಲಿ ತಿನ್ನುವುದಕ್ಕೆ ಅನ್ನ ಇಲ್ಲದೆ ಇರುವ ಪರಿಸ್ಥಿತಿ ಇತ್ತು. ನಾವು ಬೇರೆ ದೇಶದ ಮುಂದೆ ಹೋಗಿ ಕೈ ಚಾಚಿ ಅನ್ನವನ್ನು ಕೊಡಿ ಎಂದು ಕೇಳುವ ಪರಿಸ್ಥಿತಿ ಇತ್ತು.

(4-00 PM)

ಆ ಪ್ರಶ್ನೆ ಆಯಿತು. ಆಗ ಕೇಂದ್ರದ ಕೃಷಿ ಸಚಿವರಾಗಿ ಮಾನ್ಯ ಸುಬ್ರಮಣ್ಯಂರವರು ಇದ್ದರು. ಅಂದಿನ ಪ್ರಧಾನ ಮಂತ್ರಿಗಳಾಗಿದ್ದಂತ ಇಂದಿರಾಗಾಂಧಿಯವರು ಮತ್ತು ಇವತ್ತು ಸ್ವಾಮಿನಾಥನ್‌ರವರು National Farmers Forumನ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಕೇಂದ್ರ ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದಾರೆ. ಅವರು ಈ ದೇಶದ ಬಗ್ಗೆ ಇವತ್ತು ಚಿಂತನೆಯನ್ನು ಮಾಡಿ ನಾವು ಇವತ್ತು ಬೇರೆ ದೇಶದ ಮುಂದೆ ಕೈಬೇಡುವ ಪರಿಸ್ಥಿತಿ ಹೋಗಬೇಕು. ನಾವು ಸರ್ವಸ್ವತಂತ್ರವಾಗಿ ನಮಗೆ ಬೇಕಾದಂಥ ಆಹಾರ ಧಾನ್ಯಗಳನ್ನು ಬೆಳೆಯುವಂಥ ಪರಿಸ್ಥಿತಿ ಆಗಬೇಕು ಎಂದಾಗ ಅವರು ಮಾಡಿದ್ದು ಏನೆಂದರೆ, ಒಂದು ಹಸಿರುಕ್ರಾಂತಿಯ ಹಿನ್ನೆಲೆಯಲ್ಲಿ ಮಾಡಿದಂಥ ಹೊಸ ಹೊಸ ಅವಿಷ್ಕಾರಗಳು ಏನಿವೆ? ಈ ದೇಶದಲ್ಲಿ ಇರಲಿಲ್ಲ. ಪ್ರಪಚಂದಲ್ಲಿದ್ದಂಥ ಅವಿಷ್ಕಾರಗಳನ್ನು ಸಂಶೋಧನೆಯಿಂದ ಹಿಡಿದುಕೊಂಡು ಈ ವಿಸ್ತರಣೆ ಯವರೆಗೆ ಇವತ್ತು ನಾವು ಕೃಷಿ ವಿಜ್ಞಾನಿಗಳ ಸಲಹೆಯನ್ನು ಪಡೆದುಕೊಂಡು ಆ ಕೃಷಿಯಲ್ಲಿ ಕ್ರಾಂತಿಯನ್ನು ಮಾಡುವಂಥ ಒಂದು ಪ್ರಯತ್ನ ಆಯಿತು. 1965 ರಿಂದ ಇಲ್ಲಿಯವರೆಗೆ 45 ವರ್ಷದವರೆಗೆ ನಾವು ಇನ್ನೊಬ್ಬರ ಮುಂದೆ ಹೋಗುವಂಥ ಅವಶ್ಯಕತೆ ಇಲ್ಲ. ಆದರೂ ಕೂಡ ನಮ್ಮ ಉತ್ಪಾದನೆ ಪರಿಪೂರ್ಣವಾಗಿ ಇಲ್ಲ. ನಾವು ಎಲ್ಲೋ ಒಂದು ಕಡೆಗೆ ನಮ್ಮ

ಕಾಲಮೇಲೆ ನಾವು ನಿಲ್ಲತಕ್ಕಂಥ ಒಂದು ವಿಶ್ವಾಸ ನಮಗೆ ಬಂತು. ಆದರೆ ಅವತ್ತಿನ ಪರಿಸ್ಥಿತಿ ಹಸಿರುಕ್ರಾಂತಿಯ ಹೆಸರಿನಲ್ಲಿ ಕೃಷಿಯನ್ನು ನಾವು ದುಪ್ಪಟ್ಟು ಮಾಡಬೇಕೆನ್ನುವ ಹಿನ್ನಲೆಯಲ್ಲಿ ಅನಾಹುತಗಳು ಆಗಿವೆ, ಅನರ್ಥವು ಕೂಡ ಆಗಿದೆ. ಅದರ ಪರಿಣಾಮವನ್ನು ನಾವು ಇವತ್ತು ಎದುರಿಸುತ್ತಿದ್ದೇವೆ. ಏನಾಗಿದೆ ಎಂದರೆ, ಇವತ್ತು ಸಾರಾಸಗಟಾಗಿ ರಾಸಾಯನಿಕವಾಗಿರತಕ್ಕಂಥ ಗೊಬ್ಬರವನ್ನು ಉಪಯೋಗಿಸುವಂಥ ಕೆಲಸವನ್ನು ಮಾಡಿದಿರಿ. ಕಳೆದ 40–45 ವರ್ಷಗಳಲ್ಲಿ ನಾವು ಉಪಯೋಗಿಸಿದ ಗೊಬ್ಬರದ ಪರಿಣಾಮ ಏನಾಗಿದೆ, ಅದರಿಂದ ಉತ್ಪಾದನೆ ಕುಂಠಿತವಾಗಿದೆ. ಆ ಉತ್ಪಾದನೆಯನ್ನು ನಾವು ಜಾಸ್ತಿ ಮಾಡಬೇಕಾದಾಗ ನಾವು ಏನು ಮಾಡಬೇಕು. ನಾವು ಇವತ್ತು ವಾಪಸ್ಸು ಸಾವಯವ ಕೃಷಿಗೆ ಅಂದರೆ ಸಾಂಪ್ರದಾಯಿಕವಾಗಿರತಕ್ಕಂಥ ಪದ್ಧತಿ ಇತ್ತು, ಇವತ್ತು ಆ ಪದ್ಧತಿಯನ್ನು ನಾವು ಅನುಷ್ಠಾನ ಮಾಡುವುದಕ್ಕೆ ಹೊರಟಿದ್ದೇವೆ. ಕೃಷಿ ಅಂದರೆ ಏನು ಹೇಳುತ್ತೇನೆಂದರೆ, ಇದು ಒಂದು ವರ್ಷದ ಒಂದು ದಿನದ ಬದುಕು ಅಲ್ಲ. ಪ್ರತಿನಿತ್ಯವೂ ಕೂಡ, ಹೋದ ವರ್ಷ ಹೀಗೆ ಇತ್ತು, ಈ ವರ್ಷ ಹೀಗೆ ಅಲ್ಲ ಎನ್ನುವ ಪ್ರಶ್ನೆ ಅಲ್ಲ. ನಾವು ಒಂದೊಂದು ವರ್ಷಕ್ಕೂ ಕೂಡ ಒಂದೊಂದು ಸಂದರ್ಭದಲ್ಲಿಯೂ ಕೂಡ ಕೃಷಿಗೆ ವಿಶೇಷವಾದ ಕಾಳಜಿಯನ್ನು ವಹಿಸಬೇಕಾಗುತ್ತದೆ. ನಾವು ಹೋದವರ್ಷ ಒಳ್ಳೆಯ ಯೋಜನೆಯನ್ನು ಕೊಟ್ಟಿದ್ದೇವೆ, ಬಜೆಟ್‌ನ್ನು ಕೊಟ್ಟಿದ್ದೇವೆ. ಆದರೆ ಈ ವರ್ಷ ಏನು ಬೇಕಿಲ್ಲ ಎನ್ನುವ ಪ್ರಶ್ನೆ ಬೇಕಿಲ್ಲ. ಇದು ಪ್ರತಿನಿತ್ಯ ಕೂಡ ನಾವು ಬೆಳಗ್ಗೆಯಿಂದ ಸಾಯಂಕಾಲದವರೆಗೆ ಮೂರು–ನಾಲ್ಕು ಸಲ ತಿನ್ನುತ್ತೇವೆಯೋ ಹಾಗೆ ಕೃಷಿಯಲ್ಲಿಯೂ ಕೂಡ ನಾವು ಹೊಸ ಹೊಸ ವಿಚಾರಗಳನ್ನು ಆಯಾ ಸಂದರ್ಭಕ್ಕೆ ಆವತ್ತಿನ ರಾಜಕೀಯ ಸನ್ನಿವೇಶಗಳಲ್ಲಿ ನಾವು ಬದಲಾವಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಏನು ಬೇಕಾದರೂ ಕಾಯಬಹುದು. ಆದರೆ ಕೃಷಿ ಮಾತ್ರ ಕಾಯುವುದಿಲ್ಲ. ಇಂತಹ ಸನ್ನಿವೇಶದಲ್ಲಿ ನೀವು ಇವತ್ತು ಈ ವಿಚಾರವನ್ನು ತಂದಿದ್ದೀರಿ. ಎಲ್ಲೋ ಒಂದು ಕಡೆ ಏನು ಬರುತ್ತದೆಂದರೆ, ನಿಮ್ಮ ಪುಸ್ತಕದಲ್ಲಿ ಯಾವತ್ತು ಕೂಡ ಕಳೆದ 63 ವರ್ಷಗಳಲ್ಲಿ ಈ ಸಾಧನೆ ಆಗಿಯೆ ಇಲ್ಲ. ಈ ಪ್ರಯತ್ನಗಳು ಆಗಿದ್ದರೂ ಕೂಡ ಅದು ಪ್ರಯೋಜನವಾಗಿಲ್ಲ. ಇವತ್ತು ಇದರ ಬಗ್ಗೆ ದೀರ್ಘವಾದಂಥ ಚರ್ಚೆಯಾಗಬೇಕು. ನಿಜ, ಚರ್ಚೆಗೆ ನನ್ನ ವಿರೋಧವಿಲ್ಲ, ಚರ್ಚೆ ಆಗಬೇಕು. ಇದಕ್ಕೆ ಸಮಸ್ಯೆಗಳ ಬಗ್ಗೆ ಪರಿಹಾರವನ್ನು ಮಾಡಬೇಕು. ಅದಕ್ಕೆ ಇರುವ ಪರ್ಯಾಯವಾದ ಮಾರ್ಗಗಳನ್ನು ಕಂಡು ಹಿಡಿಯಬೇಕು

ಎನ್ನತಕ್ಕಂಥದ್ದು ಬಹಳ ಮುಖ್ಯವಾದಂಥ ವಿಚಾರ. ನಿರ್ಧಿಷ್ಟವಾಗಿರುವಂಥ ಒಂದು ಈ ವಿಚಾರದಲ್ಲಿ ಯೋಜನೆಗಳು ಇಟ್ಟು ಇವತ್ತು ನಾವು ಮಾತನಾಡುತ್ತಿಲ್ಲ. ಇದೊಂದು ದೊಡ್ಡದಾದ ಡಾಕ್ಯೂಮೆಂಟ್, ಇದರ ಬಗ್ಗೆ ಏನು ಬೇಕಾದರೂ ಮಾತನಾಡಬಹುದು, ಏನು ಬೇಕಾದರೂ ಸಲಹೆಗಳನ್ನು ಕೊಡಬಹುದು ಎನ್ನತಕ್ಕಂಥ ರೀತಿಯಲ್ಲಿ, ಬಹುಶ ನಾನು ಆ ರೀತಿಯಲ್ಲಿ ಇವತ್ತು ಅವಕಾಶ ಸಿಕ್ಕಿದೆ ಏನೋ ಮಾತನಾಡಬೇಕು ಎನ್ನುವಂಥ ದೃಷ್ಟಿಯಲ್ಲಿ ನಾನು ಮಾತನಾಡತಕ್ಕವನು ಅಲ್ಲ. ಏಕೆಂದರೆ, ನಾನು ಕೂಡ ಗ್ರಾಮೀಣ ಪ್ರದೇಶದ ಹಿನ್ನಲೆಯಿಂದ ಬಂದಿರತಕ್ಕಂಥವನು. ನನಗೆ ಕೃಷಿ ಸ್ವತಃ ಕಸುಬು ಆಗಿರತಕ್ಕಂಥ ಹಿನ್ನಲೆಯಲ್ಲಿ ನನಗೆ ವಿಶೇಷವಾದಂಥ ಕಾಳಜಿಯೂ ಇದೆ, ಆಸಕ್ತಿಯೂ ಇದೆ, ನನಗೆ ಅನುಭವಗಳು ಕೂಡ ಆಗಿದೆ. ಹಾಗಾಗಿ ನಾನು ಸಲಹೆಗಳ ಮೂಲಕ ಕೊಡುತ್ತೇನೆ. ನಿಜ, ಇವತ್ತು ಕೃಷಿಯ ಪರಿಸ್ಥಿತಿ ಯಾವ ರೀತಿಯಾಗಿದೆ ಎಂದರೆ, ನಮ್ಮಲ್ಲಿ ಶೇಕಡ –70 ರಷ್ಟು ಇವತ್ತು ಮಳೆಯನ್ನು ಆಧರಿಸಿ ಕೃಷಿಯನ್ನು ಅವಲಂಬಿಸಿರುವಂಥ ಒಂದು ರಾಜ್ಯ. ಈ ರಾಜ್ಯದ ಹಣೇಬರಹ ಏನೆಂದರೆ, ಇಡೀ ದೇಶದಲ್ಲಿ ಪಶ್ವಿಮ ಬಂಗಾಳ, ರಾಜಸ್ಥಾನ ಬಿಟ್ಟರೆ ಇವತ್ತು ಕರ್ನಾಟಕ. ಮಳೆಯನ್ನು ನಂಬಿರುವಂಥ ಇಂತಹ ಪರಿಸ್ಥಿತಿ ಯಲ್ಲಿ ನಾವು ಯಾವುದೇ ರೀತಿಯಾದಂಥ ಹೊಸ ಹೊಸ ಅವಿಷ್ಕಾರಗಳನ್ನು, ವಿಚಾರಗಳನ್ನು, ಸಂಶೋಧನೆಗಳನ್ನು ಮತ್ತು ಪ್ರೋಗ್ರಾಮ್ಸ್‌ಗಳನ್ನು ಕೊಟ್ಟರೂ ಕೂಡ ಏನಾಗುತ್ತದೆ, ಏನು ಆಗುವುದಿಲ್ಲ. ಇದರಿಂದ ಏನಾದರೂ ಪರಿಹಾರ ಇದೆಯೆ? ಪರಿಹಾರ ಏನು ಎನ್ನುವುದನ್ನು ನಾನು ಕೊನೆಗೆ ಹೇಳುತ್ತೇನೆ. ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಹೌದು, ಹೋದ ವರ್ಷ ನೀವು ಒಳ್ಳೆಯ ಕೆಲಸವನ್ನು ಮಾಡಿದಿರಿ. ಒಳ್ಳೆಯ ಭಿತ್ತನೆ ಬೀಜವನ್ನು ಕೊಡಿಸುವ ಕೆಲಸವನ್ನು ಮಾಡಿದಿರಿ. ನಮ್ಮ ಭಾಗದಲ್ಲಿ ಶೇಂಗಾ ಬೀಜವನ್ನು ಕೊಡಿಸುವ ಕೆಲಸವನ್ನು ಮಾಡಿದಿರಿ. 11,000 ಕ್ವಿಂಟಲ್ ಶಿರಾದಲ್ಲಿ ಒಂದೆ ತಾಲ್ಲೂಕಿನಲ್ಲಿ ಬಿತ್ತನೆ ಬೀಜವನ್ನು ಕೊಡಿಸತಕ್ಕಂಥ ಕೆಲಸವನ್ನು ಮಾಡಿದಿರಿ. ಹೋದ ವರ್ಷ ಮಳೆ ಬಂತು, ಬೆಳೆ ಬರಲಿಲ್ಲ. ರೈತ ಕಂಗಾಲಾಗಿದ್ದ. ಈ ವರ್ಷ ಭರಣಿ ಮಳೆ ಬಂತು, ಧರಣಿ ಎಲ್ಲಾ ಮಳೆ ಆಗುತ್ತದೆಂದು ಆಸೆ ಪಟ್ಟು ಇವತ್ತು ಬಿತ್ತನೆ ಬೀಜ ಕೊಂಡುಕೊಳ್ಳುವುದಕ್ಕೆ ಸಾಲಸೋಲ ಮಾಡಿದ ಬಿತ್ತನೆ ಕಾರ್ಯಕ್ರಮ ನಡೆಯಿತು. ಶಿರಾ ಒಂದೇ ತಾಲ್ಲೂಕು ಅಲ್ಲ ಇಡೀ ರಾಜ್ಯದಲ್ಲಿ ನಡೆಯಿತು. ಇವತ್ತು ನಮಗೆ ಸುಮಾರು 80 ರಷ್ಟು ಮುಂಗಾರನ್ನು ನಂಬಿರತಕ್ಕಂಥ ಈ ರಾಜ್ಯದಲ್ಲಿ ಇವತ್ತು ಬಿತ್ತನೆ ಕಾರ್ಯಕ್ರಮ ನಡೆಯಿತು. ಬಿತ್ತನೆ ಆಗಿ ನಮಗೆ

ಸಿಕ್ಕಿದ್ದಾದರೂ ಏನು? ಇವತ್ತು ಮಳೆಯನ್ನು ನಂಬಿರತಕ್ಕಂಥ ರಾಜ್ಯಗಳ ಪರಿಸ್ಥಿತಿ ಏನಾಗುತ್ತದೆನ್ನುವುದಕ್ಕೆ ಇದೆ ಉದಾಹರಣೆ. ಇತ್ತೀಚಿನ ಮಳೆಗಳನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಒಂದು ಊರಿನಲ್ಲಿ ಮಳೆ ಬರುತ್ತದೆ ಇನ್ನೊಂದು ಊರಿನಲ್ಲಿ ಮಳೆ ಬರುವುದಿಲ್ಲ. ಮಾನ್ಯ ರವೀಂದ್ರನಾಥ್‌ರವರಿಗೆ ಹೇಳಬೇಕೆಂದರೆ, ತುಮಕೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಂದು ತೊಟ್ಟು ಮಳೆ ಬಂದಿಲ್ಲ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಬಂತು. ಬಹುಶಃ ಕೃಷಿ ಮಂತ್ರಿಗಳು ಆ ಜಿಲ್ಲೆಗೆ ಹತ್ತಿರದಲ್ಲಿ ಇದ್ದಾರೆಂದು ಮಳೆ ಬಂತೋ ಏನೋ ನನಗೆ ಗೊತ್ತಿಲ್ಲ. ಹಿರಿಯೂರಿನಲ್ಲಿ ಮಳೆ ಬರುತ್ತದೆ, ಶಿರಾ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯಲ್ಲಿ ಎಲ್ಲೂ ಮಳೆ ಇಲ್ಲ. ಕೋಲಾರ ಮತ್ತು ಬೆಂಗಳೂರಿನಲ್ಲಿ ಮಳೆ ಇಲ್ಲ. ಇದೇ ಹವಾಮಾನದ ವೈಪರಿತ್ಯ. ಇದನ್ನು ಅರ್ಥಮಾಡಿಕೊಳ್ಳುವವರು ಯಾರು? ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ಪರಿಸರ ನಾಶವಾಗಿರುವುದೆ ಕಾರಣವೆಂದು ಹೇಳಬಹುದು. ಆದರೆ ಅದಕ್ಕೆ ಪರಿಹಾರ ಏನು ಎನ್ನತಕ್ಕದ್ದನ್ನು ನಾವು ಹುಡುಕಲೇ ಬೇಕಾಗುತ್ತದೆ. ಆ ಪರಿಹಾರ ಯಾವ ರೀತಿಯಾಗಿ ಹುಡುಕಬೇಕು, ಹೇಗೆ ಮಾಡಬೇಕು ಎನ್ನತಕ್ಕದ್ದನ್ನು ನಾನು ಒಂದೊಂದೆ ಅಂಕಿ ಅಂಶಗಳನ್ನು ಕೊಡತಕ್ಕಂಥ ಹಿನ್ನಲೆಯಲ್ಲಿ ಕೊಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತೇನೆ. ಇವತ್ತು ನಮಗೆ ಈ ವರ್ಷಕ್ಕೆ ಏನಾಗಿದೆ? ಮುಂಗಾರು ಮಳೆ ಬಹಳ ಚೆನ್ನಾಗಿ ಆಯಿತು. ಆಗ ಬಿತ್ತನೆಯ ಬೀಜ ಹುಟ್ಟಲಿಲ್ಲ. ರೈತರು ಕಂಗಾಲಾದರು. ಇವತ್ತು ನಾನು ಹೇಳಬೇಕೆಂದರೆ, 2–3% ಕೂಡ ಬಿತ್ತನೆ ಆಗಲಿಲ್ಲ. ಇದು ಒಂದು ಕಡೆ. ಈಗ ಏನಾಯಿತು? ಈಗ ಸ್ವಲ್ಪ ಮಟ್ಟಿಗೆ ಮಳೆ ಆಗುವುದಕ್ಕೆ ಶುರು ಆಗಿದೆ. ಅಂದರೆ, ಮುಂಗಾರಿನ ಹಂಗಾಮು ಸಂಪೂರ್ಣ ವಾಗಿ ವಿಫಲವಾಯಿತು. ಮುಂಗಾರನ್ನು ನಂಬಿರತಕ್ಕಂಥ ನಮ್ಮ ರೈತರು ಇವತ್ತು ಕಂಗಾಲಾದರು. ಆ ಮುಂಗಾರಿನಿಂದಾಗಿ ಇವತ್ತು ನಾವು ಯಾವ ರೀತಿಯಾಗಿ ಚೇತರಿಸಿಕೊಳ್ಳಬಹುದು ಎನ್ನತಕ್ಕಂಥದ್ದು ಬಹಳ ಮುಖ್ಯವಾದ ಪ್ರಶ್ನೆ. ನಮಗೆ ಅಗ್ರಿಕಲ್ಚರ್ ಏನು ಲಾಸಾಗಿದೆ. ಪ್ರೊಡಕ್ಷನ್ ಏನು ಲಾಸಾಗಿದೆ. ಆ ಲಾಸನ್ನು ನಾವು ಯಾವ ರೀತಿಯಾಗಿ ಮೇಕಪ್ ಮಾಡುತ್ತೇವೆ ಎನ್ನುತಕ್ಕಂಥದ್ದು. ಇವತ್ತು ಪ್ರಕೃತಿಯ ಸಹಾಯದಿಂದ ಸ್ವಲ್ಪ ಮಳೆಯಾಗುತ್ತಿದೆ. ಟ್ಯಾಂಕ್‌ಗಳು ತುಂಬುತ್ತಿವೆ, ನಮಗೆ 32 ಲಕ್ಷ ಎಕರೆ ಮಾತ್ರ ಇರಿಗೇಶನ್ ಆಗುತ್ತಿರುವುದು ಮಾತ್ರ. ಆ 32 ಲಕ್ಷ ಎಕರೆಯಲ್ಲಿ ನಾವು ಆಹಾರಧಾನ್ಯದ ಉತ್ಪಾದನೆಯನ್ನು ಯಾವರೀತಿಯಾಗಿ ಇವತ್ತು ದ್ವಿಗುಣಗೊಳಿಸಬಹುದು

ಎನ್ನತಕ್ಕಂಥದ್ದರ ಬಗ್ಗೆ ಏನಾದರೂ ಪ್ಲಾನ್ ಮಾಡಿದ್ದೀರಾ? ಇವೆಲ್ಲದಕ್ಕಿಂಥ ಹೆಚ್ಚಾಗಿ ಬಿತ್ತನೆ ಬೀಜ ಇಲ್ಲವೆನ್ನುವ ಕಾರಣಕ್ಕಾಗಿ ಬೇರೆ ಬೇರೆ ರಾಜ್ಯದಿಂದ ಬಿತ್ತನೆ ಬೀಜವನ್ನು ತರಿಸುತ್ತಿದ್ದೆವು. ಗುಜರಾತ್, ಅಹ್ಮದಾಬಾದ್‌ದಿಂದ ಬೀಜವನ್ನು ತರಿಸಿದೆವು. ಆದರೆ ಈಗ ನಾವು ಸ್ವಾವಲಂಬಿಗಳು ಆಗಬೇಕು. ಈಗ ಎಚ್ಚೆತ್ತುಕೊಳ್ಳಬೇಕು. ನಮಗೆ ಮುಂದಿನ ವರ್ಷಕ್ಕೆ ಬೇಕಾಗಿರುವ ಬೀಜ ಎಷ್ಟು ಪ್ರಮಾಣದಲ್ಲಿ ಬೇಕು ಎನ್ನತಕ್ಕಂಥದ್ದನ್ನು, ಅದರಲ್ಲಿಯೂ ವಿಶೇಷವಾಗಿ oil seeds ಏನು ಮಾಡುವುದಕ್ಕೆ ಸಾಧ್ಯ ಎನ್ನುವುದರ ಬಗ್ಗೆ ನಿಮ್ಮದೆ ಆದ ಒಂದು ಪ್ಲಾನ್ ಇರಬೇಕು. ದಯಮಾಡಿ ನೀವು ಭತ್ತ ಬೆಳೆಯತಕ್ಕಂಥ ಪ್ರದೇಶದಲ್ಲಿ ಭತ್ತವನ್ನು ಬೆಳೆಯುತ್ತಾರೆ? ಭತ್ತವನ್ನು ಬೆಳೆಯುವುದರ ಜೊತೆಗೆ ನಿಮ್ಮ tail end ಜಾಗಗಳು ಇರುತ್ತವೆ ಅಲ್ಲವೆ? ಅಲ್ಲಿ ನೀರು ಬರುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕಂಥ ಮಾತು ಇರುತ್ತದಲ್ಲವೆ ಅಲ್ಲಿ ನೀವು ಏನಾದರೂ ಕೂಡ ಎಣ್ಣೆ ಕಾಳುಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ನಿಮಗೆ ಈ ರಾಜ್ಯದಲ್ಲಿ ಬಹಳಷ್ಟು ಶೇಂಗಾ ಬೇಕು. ಬಿತ್ತನೆ ಮಾಡುವುದಕ್ಕೆ ರೈತರ ಕೈಯಲ್ಲಿ ಬೀಜ ಇಲ್ಲ. ಇವತ್ತು ಇಟ್ಟಿರುವುದನ್ನು ಕೂಡ ಅವರು ಮಾರಿ ಬಿಟ್ಟರು. ಅಂತಹ ಸಂದರ್ಭದಲ್ಲಿ ಮುಂದೆ ಬಿತ್ತನೆ ಮಾಡುವ ಸಂದರ್ಭದಲ್ಲಿ ಬೇರೆ ರಾಜ್ಯದ ಮುಂದೆ ಹೋಗಬಾರದು. ನಮ್ಮ ರಾಜ್ಯದಲ್ಲಿ ಬೆಳೆಸುವುದರ ಬಗ್ಗೆ ಚಿಂತನೆ ಮಾಡಬೇಕು. ಅಲ್ಲಿ ಇಲ್ಲಿ ಸ್ವಲ್ಪ ಮಳೆಯಾಗಿದೆಯೋ ಅಂತಹ ಕಡೆಗಳಲ್ಲಿ ರೈತರನ್ನು ಗುರುತಿಸಿ ಬಿತ್ತನೆ ಬೀಜಗಳನ್ನು ಬೆಳೆಸತಕ್ಕಂಥ ಕೆಲಸವನ್ನು ಇಲಾಖೆ ಮಾಡಬೇಕಾಗುತ್ತದೆ. ನಾನು ಒಂದು ಮಾತನ್ನು ಹೇಳುತ್ತೇನೆ. ಪ್ರಾಮಾಣಿಕ ವಾದಂತಹ ಬಿತ್ತನೆ ಬೀಜಗಳನ್ನು ರೈತರಿಗೆ ಕೊಟ್ಟು ಇವತ್ತು ಉತ್ತಮ ವಾದಂತಹ ಬೆಳೆಯನ್ನು ಮಾಡಬೇಕೆನ್ನುವಂತಹ ಉದ್ದೇಶ ಇಟ್ಟುಕೊಂಡು ಹೊರಟಿರುವಂತಹ ಸರ್ಕಾರದ ಉದ್ದೇಶ ತಪ್ಪಲ್ಲ. ಈ ಬಿತ್ತನೆ ಬೀಜವನ್ನು ಸರ್ಕಾರವೇ ಕೊಡಬೇಕು. ಆದರೆ ಇವತ್ತು ಏನಾಗಿದೆ ಎಂದರೆ, ಸರ್ಕಾರಕ್ಕೆ ಎಲ್ಲೋ ಒಂದು ಕಡೆಗೆ, ನಾವು ಏತಕ್ಕಾಗಿ ಇಟ್ಟುಕೊಳ್ಳಬೇಕು. ನಾವು ಏಕೆ ಬೆಳೆಯಬೇಕು ಎನ್ನುವಂತಹ ಮನೋಭಾವ ಬಂದಿದೆ. ಅದು ಬಹಳ ತಪ್ಪಿನ ಕೆಲಸವಾಗಿದೆ. ಎಲ್ಲೋ ಒಂದು ಕಡೆ ರೈತ ಬೀಜವನ್ನು ಬೆಳೆಯದೇ ಇಟ್ಟುಕೊಂಡಿರದ ಬಗ್ಗೆ ಅವನು ಸ್ವಾವಲಂಬಿಯಾಗುವಂತಹ ರೀತಿಯಲ್ಲಿ ಒಂದು ಪರ್ಯಾಯ ಮಾರ್ಗಗಳನ್ನು, ಕಾರ್ಯಸೂಚಿಯನ್ನು ಇಲಾಖೆಯು

ಮುಖೇನ ಕೊಡುವಂತಹ ಕೆಲಸವನ್ನು ನೀವು ಮಾಡಬೇಕು. ಇದಕ್ಕೆ ತಾವು ಸಬ್ಸಿಡಿಯನ್ನು ಕೊಡಬೇಕು. ಸಬ್ಸಿಡಿಯನ್ನು ಕೊಟ್ಟು, ಇವತ್ತು ನಾವು ಅದನ್ನು ಕೊಡುವುದರಲ್ಲಿ ಅರ್ಥವಿಲ್ಲ. ರೈತ ಸ್ವತಃ ಅವನೇ ಬೀಜಗಳನ್ನು ಉತ್ಪಾದನೆಯನ್ನು ಮಾಡಿ ತಾನು ಬೆಳೆದಂತಹ ಬೀಜದಿಂದ ಇವತ್ತು ಭೂಮಿಯಲ್ಲಿ ಬೆಳೆಯುವಂತಹ ರೀತಿಯಲ್ಲಿ ಆಗಬೇಕು. ಮೊದಲು ಯಾವುದೇ ಸಂದರ್ಭದಲ್ಲಿಯಾದರೂ ಕೂಡ ಮಳೆ ಬರಲಿ, ಬರ ಇರಲಿ ಏನೇ ಆದರೂ ಕೂಡ ರೈತ ತಮಗೆ ಬಿತ್ತನೆಗೆ ಬೇಕಾಗಿರುವಂತಹ ಬೀಜವನ್ನು ಇಡುತ್ತಿದ್ದ. ಇವತ್ತು ಅವನು ಬೀಜವನ್ನು ಇಡುವುದಿಲ್ಲ. ಸರ್ಕಾರವು ಅವನಿಗೆ ಬಿತ್ತನೆ ಬೀಜವನ್ನು ಕೊಡುತ್ತದೆ. ಸರ್ಕಾರವೇ ಬಿತ್ತನೆ ಬೀಜವನ್ನು ತಂದು ಕೊಡಲಿ ಎಂದು ಇದ್ದಾನೆ. ಹಾಗಾಗಿ ನೀವು ಸಬ್ಸಿಡಿಯನ್ನು ಕೊಡುತ್ತಿರೋ ಅಥವಾ ಬಿಡುತ್ತೀರೋ ಇವತ್ತು ಅಂಗಡಿಗಳ ಮುಂದೆ ಕೃಷಿ ಸಂಪರ್ಕ ಕೇಂದ್ರಗಳ ಮುಂದೆ ಜನರು ಸಾಲುಸಾಲಾಗಿ ನಿಂತುಕೊಂಡು ಬಿತ್ತನೆ ಬೀಜಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅದರ ಎಷ್ಟರಮಟ್ಟಿಗೆ ಅದು ಒಳ್ಳೆಯದೋ, ಕೆಟ್ಟದ್ದೋ ಅಮೇಲೆ ಅದರ ಬಗ್ಗೆ ಮಾತನಾಡೋಣ. ಅದರ ಬಗ್ಗೆ ಈಗ ಮಾತನಾಡುವುದು ಬೇಡ. ಆದರೆ ಈ ರೀತಿಯಾದಂತಹ ಒಂದು ಪ್ಲಾನ್‌ನ್ನು ನೀವು ಮಾಡಬೇಕಾಗುತ್ತದೆ ಎಲ್ಲೋ ಒಂದು ಕಡೆಯಲ್ಲಿ ಕಾರಿಫ್‌ನಿಂದ ಆಗಿರುವಂತಹ ಲಾಸ್‌ನ್ನು ನೀವು ತುಂಬಿಕೊಡಬೇಕು. ಅದು ರಬಿ ಇರಬಹುದು, ರಬಿಯಲ್ಲಿ ನಿಮ್ಮ ಕಡೆಯಲ್ಲಿ ಉತ್ತಮವಾದಂತಹ ಮಳೆಯಾಗಿದೆ, ರಬಿಯಲ್ಲಿ ಇವತ್ತು ಜೋಳ ಬೆಂಗಾಲ್‌ಗ್ರಾಮ್ ಏನೆಲ್ಲಾ ಹಾಕುತ್ತೀರಿ, ನೆಡಬಹುದು ಎಂದು ಹೇಳಿ ಅದರಲ್ಲಿ ಸ್ವಲ್ಪ ಆಶಾದಾಯಕವಾಗಿದೆ. ಭತ್ತಕ್ಕೂ ಕೂಡ ಏನು ತೊಂದರೆಯಾಗಲಾರದು ಎಂದು ನಮ್ಮ ನಂಬಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ನೀವು agricultural productionನ್ನು ಜಾಸ್ತಿ ಮಾಡುವಂತಹ ರೀತಿಯಲ್ಲಿ, ಅದರಲ್ಲೂ ಕೂಡ ನಿಮ್ಮ varieties, ಇವತ್ತು ಯಾವುದು? ಇವತ್ತು ನಮ್ಮಲ್ಲಿ ಏನು ಹೇಳುತ್ತಾರೆಂದರೆ, ನಮ್ಮಲ್ಲಿರತಕ್ಕಂತಹದ್ದೆಲ್ಲಾ ಸಾರಾಸಗಟಾಗಿ ಯಾವುದೋ ಒಂದು high yielding vatieties ಬೇಕಾದಷ್ಟು ಇದ್ದರೂ ಕೂಡ ಇದನ್ನು region specific, location specific, ಆ ರೀತಿಯಾದಂತಹ ಬೀಜಗಳನ್ನು ಪ್ರಾಮಾಣಿಕ ಬೀಜಗಳನ್ನು ನೀವು ಕೊಡುವುದರ ಮುಖೇನ ಉತ್ಪಾದನೆಯನ್ನು ನೀವು ಜಾಸ್ತಿ ಮಾಡುವಂತಹ ಕೆಲಸವನ್ನು ಮಾಡಬೇಕು. ಇವತ್ತು ನಾವು

ಉತ್ಪಾದನೆಯ ಮಟ್ಟದಲ್ಲಿ ಎಲ್ಲಿದ್ದೇವೆಂದರೆ ಅದರ ವಿಚಾರದಲ್ಲಿ ಅದರ ಬಗ್ಗೆ ಸೂಕ್ಷ್ಮವಾದಂತಹ ವಿಚಾರವನ್ನು ನಾನು ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು ಚೈನಾ ದೇಶಕ್ಕೆ ಹೋಗಿ ಬಂದಿದ್ದಾರೆ ಬಹಳ ಸಂತೋಷ. ಮುಖ್ಯಮಂತ್ರಿಗಳಾಗಿರುವವರು, ಎಲ್ಲೋ ಒಂದು ಕಡೆಗೆ ನಮಗೆ confidence ಬರಬೇಕಾದಾಗ ನಾವು ಒಂದು challenging task ಮಾಡಬೇಕಾದಾಗ ನಾವು ಹೊರದೇಶವನ್ನು ನೋಡಬೇಕಾಗುತ್ತದೆ. ಹೊರ ದೇಶಕ್ಕೆ ಹೋಗಿ 7 ದಿವಸಕ್ಕೆ ಅಧ್ಯಯನ ಮಾಡಿ ಬಂದು ಬಿಟ್ಟಿದ್ದಾರೆಂದು ಎನ್ನತಕ್ಕಂತಹ ಮಾತನ್ನು ನಾನು ಹೇಳುವುದಿಲ್ಲ. ನಾನಾದರೂ ಕೂಡ ಮಾಡುವುದಕ್ಕಾಗುವುದಿಲ್ಲ, ಅದನ್ನು ಯಾರು ಕೂಡ ಮಾಡುವುದಕ್ಕಾಗು ವುದಿಲ್ಲ. ಆದರೆ ನೋಡಬೇಕು, ಆ ಪರಿಸ್ಥಿತಿಯಲ್ಲಿ ಕೇವಲ 20-25 ವರ್ಷದಲ್ಲಿ ನಮ್ಮ ಹಾಗೆ ಇದ್ದಂತಹ ದೇಶ ಇವತ್ತು ಎಷ್ಟರಮಟ್ಟಿಗೆ ಮಾರ್ಪಾಟಾಗಿದೆ ಎನ್ನುವುದು. ಅಲ್ಲಿ ಎಷ್ಟು ರೀತಿಯಾಗಿ ಮೂಲಭೂತ ಸೌಕರ್ಯಗಳನ್ನು ಹಳ್ಳಿಗಳಲ್ಲಿ ಕೊಡುವಂತಹ ಕೆಲಸಗಳು ಆಗಿದೆ ಅದನ್ನು ನಾವು ನೋಡಬೇಕಾಗುತ್ತದೆ. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು food security ಎನ್ನುವಂತಹದ್ದು ಬಹಳ important. ನಾನು ಚೈನಾ ದೇಶಕ್ಕೆ ಹೋಗಿ ನೋಡಿದ್ದೇನೆ. ನಾನು ಬಹಳ ದೇಶಗಳಿಗೆ ಹೋಗಿ ನೋಡಿದ್ದೇನೆ. ನಾನು ಚೈನಾ ದೇಶದಲ್ಲಿ ನೋಡಿದ್ದು ಏನೆಂದರೆ, ನಾವು ಯಾವುದೋ star hotelನಲ್ಲಿ ಕುಳಿತು ಆಹಾರವನ್ನು ತಿನ್ನುತ್ತಿದ್ದೆವು, ಯಾವ ರೀತಿಯಾದಂತಹ grainsನ್ನು ತಿನ್ನುತ್ತಿದ್ದೆವೋ ಯಾವ ರೀತಿಯಾದಂತಹ ಧಾನ್ಯಗಳನ್ನು ಸೇವಿಸುತ್ತಿದ್ದೇವೋ, ಅದೇ ಒಬ್ಬ ಬಡವನ ಮನೆಯಲ್ಲಿಯೂ ಕೂಡ ನಾವು ತಿನ್ನುವುದನ್ನು ನೋಡುತ್ತಿದ್ದೇವೆ. ನಮ್ಮ ಹಾಗೆ ಆಶ್ರಯ ಮನೆಗಳು ಇವೆ, ನಾನು ಹಳ್ಳಿಗಳಿಗೆ ಹೋಗಿ ನೋಡಿದೆ. ಆ ಮನೆಗಳಿಗೆ ಹೋದಾಗ ಅಲ್ಲಿ ಇಂಡಿಯಾದಿಂದ ಯಾರೋ ಬಂದಿದ್ದಾರೆ ಎಂದು ಹೇಳುವಂತಹ ಸಂದರ್ಭದಲ್ಲಿ ಹೋದಾಗ ಅವರು ಕೊಡುತ್ತಿದ್ದಂತಹ food ಅಡಿಗೆ ಮನೆಯಲ್ಲಿ ಮಾಡುತ್ತಿರುವುದನ್ನು ನೋಡಿದರೆ ನಾನು star hotelನಲ್ಲಿ ಏನು ತಿನ್ನುತ್ತಿದ್ದೆನೋ ಅದು ಇಲ್ಲೆ ಇದೆಯಲ್ಲಾ ಎಂದು ನನಗೆ ಅನಿಸಿತು. ಅಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ಇದೆಯೇ? ಆ ದೇಶವು ಹೇಗೆ ಬದಲಾವಣೆಯಾಯಿತು? ಬಹುಶಃ ಇವರು ವಿದೇಶದ ಯಾತ್ರೆಯನ್ನು ಮಾಡಿದ್ದಾರಲ್ಲಾ ಅವರು ಒಂದು ಮಾತನ್ನು

ಅರ್ಥಮಾಡಿಕೊಂಡರೆ ಸಾಕಾಗುತ್ತದೆ. ನಮಗೂ ಚೈನಾ ದೇಶಕ್ಕೂ ಇರುವ ವ್ಯತ್ಯಾಸ ಏನೆಂದರೆ ನಮ್ಮ political system. ಇಲ್ಲಿರುವಂತಹದ್ದು, ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವದಲ್ಲಿ ಏನೆಂದರೆ, ಮಾತಿನಲ್ಲಿ ಏನಾದರೂ ಸಾಧನೆಯನ್ನು ಮಾಡುವಂತಹ ಶೂರರು ನಾವು. ಚೈನಾ ದೇಶದಲ್ಲಿ ಮಾತನಾಡುತ್ತಾರಾ? ಅಲ್ಲಿ ಯಾರು ಮಾತನಾಡುವುದೇ ಇಲ್ಲ, ಅವರು 8 ರಿಂದ 14 ಗಂಟೆಗಳ ಕಾಲ ಕೆಲಸವನ್ನು ಮಾಡುತ್ತಾರೆ. ನೀವು ಬೀಜಿಂಗ್‌ಗೆ ಹೋದಾಗ ನಿಮಗೆ ಅನುಭವವಾಗಿರಬಹುದು. ಬೀಜಿಂಗ್‌ಗೆ ಹೋಗಬೇಕಾದಾಗ ನೀವು Indian embassyಗೆ ಏನಾದರೂ ನೀವು ಹೋಗಿದ್ದರೆ ಅಲ್ಲಿ ಯಾವುದೇ building ಹತ್ತಿರ ಹೋಗಿ ಅಲ್ಲಿ ಒಂದು ಜೋರು ಗಲಾಟೆ ಇರುವುದಿಲ್ಲ. ಚೈನಾದಲ್ಲಿ ನಿಶ್ಯಬ್ದ ಇರುತ್ತದೆ. ಆದರೆ ಯಾವುದೇ ಒಂದು buildingನಲ್ಲಿ ಗಲಾಟೆ ಎಂದು ಕಾಣುತ್ತಿದ್ದರೆ ಅದನ್ನು ನೀವು ಕಣ್ಮುಚ್ಚಿಕೊಂಡು ಹೇಳಬಹುದು ಅದನ್ನು ನೀವು Indian embassy ಎಂದು ಹೇಳಬಹುದು. ಮಾತನಾಡುವುದನ್ನು ಬಿಟ್ಟರೆ ಚೈನಾಕ್ಕೆ ಹೋಗಿದ್ದರೂ ಕೂಡ ಅಲ್ಲಿ ನಮ್ಮ ಪರಂಪರೆಯನ್ನು ಬಿಟ್ಟಿರುವುದಿಲ್ಲ. ನಾವು ಬರೀ ಮಾತನಾಡುವರೆ ವಿನಃ ನಾವು ಸಾಧನೆಯನ್ನು ಮಾಡತಕ್ಕಂತಹವರು ಅಲ್ಲ. ಇದನ್ನು ನಮ್ಮ ಪ್ರಜಾಪ್ರಭುತ್ವದಲ್ಲಿ ಆಗಿರುವಂತಹದ್ದು ಏನೆಂದರೆ ನಾವು ಕರ್ತವ್ಯದ ಬಗ್ಗೆ ಮಾತನಾಡುತ್ತೇವೆ ವಿನಃ ನಾವು ಜವಾಬ್ದಾರಿಕೆಯ ಬಗ್ಗೆ ಮಾತನಾಡುವುದಿಲ್ಲ. ಬಹುಶಃ ಎಲ್ಲಿಯವರೆಗೆ ಕೂಡ ನಮ್ಮ ಜವಾಬ್ದಾರಿಕೆಯ ಬಗ್ಗೆ ನಾವು ಅರ್ಥಮಾಡಿಕೊಳ್ಳುವುದಿಲ್ಲ. ಅಲ್ಲಿಯವರೆಗೂ ಕೂಡ ಈ ಭಾಷಣಗಳು ಭಾಷಣಗಳಾಗಿಯೇ ಉಳಿಯುತ್ತದೆಯೇ ವಿನಃ ಇವತ್ತು ಅದು ನಿಜವಾಗುವುದಕ್ಕೆ ಸಾಧ್ಯವಾಗಿರುವುದಿಲ್ಲ ಎನ್ನುವುದನ್ನು ತಾವು ಅರ್ಥಮಾಡಿ ಕೊಳ್ಳಬೇಕು. ಇವತ್ತು ನಮ್ಮಲ್ಲಿ ಕೊರತೆ ಇದೆ, ಅದರ ಬಗ್ಗೆ ನಾವು ಹೇಳಬೇಕಾಗುತ್ತದೆ. ಹೈಬ್ರಿಡ್ ರೈಸ್, ಇದು ಒಂದು ಹೊಸ ಶೈಲಿಯಿಂದ ಮಾಡಿರುವಂತಹದ್ದು. ಅದು ನಮ್ಮ ದೇಶದಲ್ಲಿಯೇ ಮಾಡಿರುವುದು. Rockfeeler Foundationನ ವತಿಯಿಂದ ಮಾಡಿರುವಂತಹ ಹೈಬ್ರಿಡ್ ರೈಸ್, I must cherish with all competence. ಬಹಳ ಸಂತೋಷದಿಂದ ಹೇಳಬೇಕು. ಕರ್ನಾಟಕ ರಾಜ್ಯದಲ್ಲಿ ಇವತ್ತು ನಮ್ಮ ಇಲಾಖೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಇವತ್ತು ಕೆಆರ್‌ಹೆಚ್-2ನ್ನು ಬಿಡುಗಡೆ ಮಾಡಿ ಸಾಕಷ್ಟು ನಿಟ್ಟಿನಲ್ಲಿ ಇವತ್ತು ಸಂಶೋಧನೆಯನ್ನು ಮಾಡಿರುವುದು.

ಕೆಆರ್‌ಹೆಚ್-2 ಎನ್ನುವುದರ ಬಗ್ಗೆ ಯಾರಾದರೂ ರೈತರಿಗೆ ಗೊತ್ತಿದೆಯಾ ಸ್ವಾಮಿ, ಇದು ಈಗಾಗಲೇ 10 ವರ್ಷದಿಂದ ಕೆಆರ್‌ಹೆಚ್-2 ಬಳಕೆಯಲ್ಲಿದೆ. ಇದರ ಬಗ್ಗೆ ನನಗೆ ಅನುಭವವಾಗಿರುವಂತಹದ್ದು ಒಂದು ಎಕರೆಗೆ 60 ಕ್ವಿಂಟಾಲ್ ಬೆಳೆಯುವುದಕ್ಕೆ ಅವಕಾಶವಿದೆ. ಕೆಆರ್‌ಹೆಚ್-2 ಏನೋ ಬಹಳ ಸಾಧನೆ ಮಾಡಿದ್ದೇವೆಂದು ಚೈನಾಕ್ಕೆ ಹೋಗಿ ನೋಡಿದರೆ ಅಲ್ಲಿ ಹೈಬ್ರಿಡ್ ಬಗ್ಗೆ ಕೇಳಿದರೆ ಅವರು Super Hybrid ಎಂದು ಹೇಳುತ್ತಾರೆ. ಎಂದರೆ ಒಂದು ಎಕರೆಗೆ 100 ಕ್ವಿಂಟಾಲ್ ಉತ್ಪಾದನೆಯಾಗುತ್ತದೆ. ಈ ಬಗ್ಗೆ ಸಂತೋಷ ವಾಗುತ್ತದೆ ಎಂದು ಹೇಳಿದರು. ಹೈಬ್ರಿಡ್ ರೈಸ್ ನಮ್ಮದು ಇನ್ನು laboratory ಯಲ್ಲಿದೆ. ನಮ್ಮ agriculture farmನಲ್ಲಿದೆ. ಯಾರೋ ಒಬ್ಬ ಕೃಷಿಯ ಬಗ್ಗೆ ತಿಳಿದುಕೊಂಡಿರುವಂತಹ ಪ್ರಗತಿಪರ ರೈತನ ಹತ್ತಿರ ಇದೆ. ಅದು ಜನಸಾಮಾನ್ಯರ ಕೈಯಲ್ಲಿ ಸಿಕ್ಕಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : 100 ಕ್ವಿಂಟಾಲ್ per acre?

ಶ್ರೀ ಟಿ.ಬಿ. ಜಯಚಂದ್ರ : per acre. ಇದರ ಬಗ್ಗೆ ನಾನು ಹೇಳುತ್ತೇನೆ ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರೆ ಕುಳಿತುಕೊಳ್ಳಿ. ನೋಡಿ ನೀವು ಯಾವ ದೇಶಕ್ಕಾದರೂ ಅಪಹಾಸ್ಯ ಮಾಡಿ. ಆದರೆ ಚೈನಾಕ್ಕೆ ಮಾಡುವಹಾಗಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅಲ್ಲ, ನಾನು ಅಪಹಾಸ್ಯ ಮಾಡಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಕೇಳಿ ಸ್ವಾಮಿ ನಾನು ಹೇಳುತ್ತೇನೆ. ನಮ್ಮ ನೆರೆ ರಾಷ್ಟ್ರವಾಗಿರುವಂತಹದ್ದು ನಾವು ಅವರ ಹತ್ತಿರ ಪಾಠ ಕಲಿಯುವಂತಹ ಪರಿಸ್ಥಿತಿಯಾಗಿದೆ. ನಮಗಿಂತ ಅವರು worst ಆಗಿರುವಂತಹದ್ದು. ಇಡೀ ಚೈನಾ ದೇಶದಲ್ಲಿ ಅದು ಇಂಡಿಯಾ ದೇಶಕ್ಕಿಂತ 4 ರಷ್ಟು ದೊಡ್ಡದಾಗಿರುವಂತಹ ದೇಶವಾಗಿದೆ. ಅವರದು ವ್ಯವಸಾಯಕ್ಕೆ ಯೋಗ್ಯವಾಗಿರುವಂತಹ ಜಮೀನು ಎಷ್ಟು ಸ್ವಾಮಿ ಅದು ನಮಗಿಂತ ಕಡಿಮೆ ಇದೆ. ಬರೀ ಬೆಟ್ಟ, ಗುಡ್ಡ ಅದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲದಿರುವಂತಹ ಜಮೀನುಗಳು ಆಗಿದೆ. ಅವರ ಜಮೀನು ನಮಗಿಂತ ಕಡಿಮೆ ಇದೆ. ಈ ದೇಶದ ಆಹಾರದ ಉತ್ಪಾದನೆ ಎಷ್ಟು ಗೊತ್ತೇ? ನನಗೆ ಅಂಕಿಅಂಶದ ಬಗ್ಗೆ ನಾನು ತಲೆಯನ್ನು ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅದು ನಮ್ಮ 3 ರಷ್ಟು ಉತ್ಪಾದನೆ ಇದೆ. ಅಷ್ಟು ಉತ್ಪಾದನೆ ಇದೆ ಎಂದರೆ ಸುಮಾರು 800

ಮಿಲಿಯನ್ ಟನ್ ಉತ್ಪಾದನೆಯನ್ನು ಮಾಡುತ್ತಾರೆ. ನಾವು ಇನ್ನು ಕೇವಲ 100ರ ಹತ್ತಿರದಲ್ಲಿದ್ದೇವೆ. ಅಂದರೆ ಹೈಬ್ರಡ್ ರೈಸ್ 100 ಕ್ವಿಂಟಾಲ್ ಬರದೇ ಇದ್ದರೆ ಆ ಪ್ರಮಾಣದಲ್ಲಿ ಸಾಧನೆಯನ್ನು ಮಾಡುವುದಕ್ಕಾಗುತ್ತಿತ್ತಾ? ದಯವಿಟ್ಟು ತಾವು ಯೋಚನೆಯನ್ನು ಮಾಡಿ. ಮಾನ್ಯ ನಾಯ್ಡುರವರೆ, ನೀವು 8 ದಿವಸ ಅಲ್ಲ ಅಲ್ಲಿ 25 ದಿವಸಗಳ ಕಾಲ ಇದ್ದರೆ ನಿಮಗೆ ಗೊತ್ತಾಗುತ್ತಿತ್ತು. ಅವರು ನೋಡುವುದಕ್ಕೆ infrastructureನಲ್ಲಿ ಏನು ಮಾಡಿದ್ದಾರೋ ಕೃಷಿಯಲ್ಲಿಯೂ ಕೂಡ ಅಂತಹ ಒಂದು ಸಂಶೋಧನೆಯನ್ನು ಮಾಡಿದ್ದಾರೆ. ಆ ಸಂಶೋಧನೆ ಯನ್ನು ನಾವು ನೋಡಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಹೈಬ್ರಿಡ್ ರೈಸ್ ಬಿಡುಗಡೆಯಾಗಿ 10 ವರ್ಷಗಳಾಯಿತು. ಇವತ್ತಿನವರೆಗೂ ರೈತರಿಗೆ ಸಿಗಲಿಲ್ಲ, ಒಬ್ಬರಿಗೂ ಗೊತ್ತಾಗಲಿಲ್ಲ. ನಾನು ನನ್ನ ಕ್ಷೇತ್ರಕ್ಕೆ ತಾವು ಬನ್ನಿ ತೋರಿಸುತ್ತೇನೆ. 60–65 ಕ್ವಿಂಟಾಲ್ ಇವತ್ತು ಬೆಳೆಯುತ್ತಿದ್ದಾರೆ. ಮಂಡ್ಯದ ಕೆಲವು ಭಾಗದಲ್ಲಿ ಬೆಳೆಯುತ್ತಿದ್ದಾರೆ. ಆದರೆ ವ್ಯಾಪಕವಾದಂತಹ ಪ್ರಚಾರವು ಕೂಡ ಆಗಲಿಲ್ಲ. ಅದೆ ನೀವು ಚೈನಾಕ್ಕೆ ಹೋಗಿ 100 ಕ್ಕೆ 80 ರಿಂದ 90 ರಷ್ಟು ಇವತ್ತು ಹೈಬ್ರಿಡ್ ರೈಸ್‌ನ್ನು ಬೆಳೆಯುತ್ತಾರೆ. ಒಂದು ತರಹ ಹೈಬ್ರಿಡ್ ರೈಸ್ ಅಲ್ಲ, ನಾನಾ ತರಹ ಹೈಬ್ರಿಡ್‌ನ್ನು ಬಿಡುಗಡೆ ಮಾಡಿದರು. ಈಗಾಗಲೆ ಖಾಸಗಿ ಕಂಪನಿಯವರು ಬಂದು ಅದೇ ಹೈಬ್ರಿಡ್ ರೈಸ್‌ನ್ನು ಬೆಳೆಯುವಂತಹ ಮಟ್ಟಕ್ಕೆ ಮಾಡಿದ್ದಾರೆ. ನೀವು ಅವರ ಸಹಾಯವನ್ನು ಪಡೆಯಿರಿ. ನಾನು ಇದ್ದಂತಹ ಕಾಲದಲ್ಲಿ ಅವರಿಗೆ ಸಬ್ಸಿಡಿಯನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದೆವು. ಇವತ್ತು ಅದಕ್ಕೆ ಸಬ್ಸಿಡಿಯನ್ನು ಕೊಟ್ಟು ರೈತರಿಗೆ ಹಂಚತಕ್ಕಂತಹ ಕೆಲಸವನ್ನು ಮಾಡಿ. ನಿಮ್ಮ production ಜಾಸ್ತಿ ಮಾಡುವಂತಹ ಕೆಲಸ ಮಾಡಿ. ನಿಮಗೆ ಇರತಕ್ಕಂಥ ಈ cropped area ಏನಿದೆ, ಅದರಲ್ಲಿ ನಿಮಗೆ 35 ಎಂದರೆ ಎರಡು ಬೆಳೆ ಬೆಳೆಯಬೇಕಾದರೆ 70.00 ಲಕ್ಷದವರೆಗೆ ಆಗುತ್ತದೆ. ಬಹುಶಃ ನೀವು ಈ ಪ್ಲಾನ್ ಮಾಡಿದರೆ ಆಹಾರದ ಕೊರತೆ ನೀಗಿಸುವುದಕ್ಕೆ ಸಾಧ್ಯ. ಮುಂಗಾರಿನಲ್ಲಿ ಹಾಳಾಗಿರುವ ಬೆಳೆಯನ್ನು ಸಂಪಾದಿಸುವುದಕ್ಕೆ ಸಾಧ್ಯ. ಇವೆಲ್ಲವನ್ನೂ ಕೂಡ ಯೋಚನೆ ಮಾಡಬೇಕು. ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಚೈನಾದಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ನೀವು ಅಲ್ಲಿಗೆ ಹೋಗಿ ಬಂದಿದ್ದೀರಿ. ನಾನು ಆ ಮಾತನ್ನು ಹೇಳಬೇಕಾಗುತ್ತದೆ, ಅವರ ಸಾಧನೆಯನ್ನು ನಾವು ಅನುಕರಣೆ ಮಾಡಬೇಕು. ನಮ್ಮ

ಜವಾಬ್ದಾರಿಕೆಗಳನ್ನು ಅರ್ಥ ಮಾಡಿಕೊಳ್ಳಬೇಕು, ಮಾತು ಕಡಿಮೆ ಮಾಡಿ ಕೆಲಸ ಮಾಡುವುದನ್ನು ಜಾಸ್ತಿ ಮಾಡಬೇಕು. ಕೆಲಸ ಎಷ್ಟರಮಟ್ಟಿಗೆ ಆಗುತ್ತದೆಂಬುದನ್ನು ನಾವು ನೋಡಬೇಕು ಕೆಲಸ ಆಗಲಿ ಎಂಬ ಕಾರಣ ಕ್ಕೋಸ್ಕರವೇ ನಾನು ಸಲಹೆಗಳನ್ನು ಕೊಡುವುದಕ್ಕೆ ಕೂಡ ಇಷ್ಟಪಡುತ್ತೇನೆ. ನಮ್ಮಲ್ಲಿ ಈ ನೌಕರರ ಇಲಾಖೆ ಎಷ್ಟು effective ಆಗಿದೆ ಎಂದು ಹೇಳಿದರೆ ಸುಮಾರು ನೂರು ವರ್ಷಗಳಿಗೂ ಹೆಚ್ಚು ಇತಿಹಾಸ ಇರುವ ಕೃಷಿ ಇಲಾಖೆ. ಬಹಳ ಸ್ವಾಭಿಮಾನದಿಂದ ಹೇಳಬಹುದು, ಈ ಇಲಾಖೆಗೆ ಬಹಳ ಹಿನ್ನೆಲೆ ಇದೆ, ಶಕ್ತಿ ಇದೆ ಒಳ್ಳೆಯ ತಜ್ಞರು ಇದ್ದರು ಎಂಬ ಮಾತನ್ನು ಬಹಳ ಹೆಮ್ಮೆಯಿಂದ ಹೇಳಬಹುದು, ಆದರೆ ಈಗ ಏನಾಗಿದೆ ಎಂದರೆ ನೀವೇನಾದರೂ ಸಾಧನೆ ಮಾಡಬೇಕಾದರೆ ನಿಮ್ಮ ಇಲಾಖೆಗಳು ಇರಬೇಕೆ? ನಿಮ್ಮಲ್ಲಿ ಇಲಾಖೆಗಳು ಯಾವ ಮಟ್ಟಿಗೆ ಇದೆಯೆಂದರೆ ಈಗ ಯಾವುದಾದರೂ ಒಂದು ಕೆಲಸಕ್ಕೆ ಸೇರಬೇಕಾದರೆ ನಿಮ್ಮಗೆ entry point ಕೇವಲ Agriculture Officers, B.S.c.(Ag.,), M.S.c.(Ag.,), Phd.(Ag.,) ಮಾಡಿರುತ್ತಾರೆ. ಅವರು Agriculture Officers ಆಗಿರುತ್ತಾರೆ. ಅವರಲ್ಲಿ ಯಾರಾದರೂ ಕೂಡ ಇವತ್ತು policies, programmes, books, ಇವೆಲ್ಲವನ್ನು ನೋಡಿದರೆ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಹಿಂದೆ ಈ ಗ್ರಾಮ ಸೇವಕರು ಇರುತ್ತಿದ್ದರು. ಅವರು SSLC, PUC ಮಾಡಿಕೊಂಡು ಬಂದಿರುವವರು, ಕೃಷಿ ಬಗ್ಗೆ ತರಬೇತಿ ಪಡೆದು ಹಳ್ಳಿ ಹಳ್ಳಿಗಳಿಗೆ ಹೋಗಿ ಇಂಥದ್ದೇ ತಳಿಗಳನ್ನು ಹಾಕಿ, ಇಂಥದ್ದನ್ನೇ ಬಿತ್ತನೆ ಮಾಡಿ ಎಂದು ಸಲಹೆ ಕೊಡುತ್ತಿದ್ದರು, ಆದರೆ ನಿಮ್ಮಲ್ಲಿ ಇವತ್ತು ಅಂಥ staff ಇಲ್ಲ. Agricultural Assistants ಎಲ್ಲರೂ ಕೂಡ retired ಆಗಿದ್ದಾರೆ. ನಿಮ್ಮ ಹತ್ತಿರ staff ಇಲ್ಲ, ಇದ್ದರೂ ಕೂಡ ಅವರಲ್ಲಿ ಅಷ್ಟು efficiency ಇಲ್ಲ. ನಿವೃತ್ತಿ ವಯಸ್ಸು 60 ವರ್ಷ ಆಗಿರುವುದರಿಂದ ಕೆಲವರು ಇದ್ದಾರೆ, ಇಲ್ಲದಿದ್ದರೆ ಯಾರೂ ಇಲ್ಲ, ನಿಮ್ಮಲ್ಲಿ A.Os, A.H.Os younger generation ಇದ್ದಾರೆ, ಅವರಿಗೆ work ಮಾಡಬೇಕೆಂದು zeal ಇದೆ, ಆದರೆ ಅವರು fieldಗೆ ಹೋಗಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಆ ಕಾರಣಕ್ಕಾಗಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಏಕೆಂದರೆ ನಾನು ಇನ್ನು ಮೇಲೆ ಜಾಸ್ತಿ ಮಾತನಾಡುವುದಕ್ಕಿಂತ ನಿಮಗೆ ಸಲಹೆಗಳನ್ನು ಕೊಡುತ್ತೇನೆ. ನಾವು ಕೊಡತಕ್ಕಂಥ ಸಲಹೆಗಳನ್ನು

ನೀವು ಎಷ್ಟರಮಟ್ಟಿಗೆ ಅನುಷ್ಠಾನ ಮಾಡುತ್ತೀರಿ ಎಂದು ಯೋಚನೆ ಮಾಡಬೇಕು. ನಿಮ್ಮಲ್ಲಿ extension ಬಹಳ poor ಇದೆ. ಇಂಥ ಸನ್ನಿವೇಶದಲ್ಲಿ ನೀವು ಎಲ್ಲೋ ಒಂದು ಕಡೆ ಹಳ್ಳಿಗಾಡಿನ ರೈತರ ಜೊತೆ ವ್ಯವಹರಿಸತಕ್ಕಂಥ ಅವರಿಗೆ ಕೃಷಿಯ ಬಗ್ಗೆ ಅಭಿಮಾನ ಬರತಕ್ಕಂಥ ರೀತಿಯಲ್ಲಿ ಮಾಡಬೇಕಾದಾಗ ಒಂದು ಕೇಡರ್ ಬೇಕಾಗುತ್ತದೆ. Agricultural Assistant ಎಂಬ ಒಂದು cadre ಬೇಕಾಗುತ್ತದೆ. ಅದಕ್ಕೆ ಕೊನೆಪಕ್ಷ ಎರಡು ವರ್ಷಗಳಾದರೂ ರೈತರ ಮಕ್ಕಳನ್ನು ನೀವು ನೇಮಕ ಮಾಡಿಕೊಂಡು ಅವರಿಗೆ ಸ್ಟೈಫಂಡ್ ಕೊಟ್ಟು ಅವರಿಗೆ ಆಧುನಿಕ ಕೃಷಿಯ ಬಗ್ಗೆ ಕಲ್ಪನೆ ಕೊಟ್ಟು ಅವರಿಂದಲೇ ಕೃಷಿಯನ್ನು ಮಾಡಿಸುವಂಥ ತರಬೇತಿ ಕೊಟ್ಟು ಅವರನ್ನು ನೇಮಕ ಮಾಡುವಂಥ ಕೆಲಸ ಮಾಡಿದರೆ ಬಹುಶಃ ಅರ್ಥ ಬರುತ್ತದೆ. ನಾವು ಇದಕ್ಕೆ ಒಂದು ಕಡೆ ಸಂಶೋಧನೆ, ಯುನಿವರ್ಸಿಟಿಯಲ್ಲಿ ಆಗಿರತಕ್ಕಂಥ ಸಂಶೋಧನೆ, ಅದು extension ಮುಖೇನ ನೇರವಾಗಿ ಹೋಗಬೇಕು ಎನ್ನುವ ಕಾರಣಕ್ಕೋಸ್ಕರವೇ ಇವತ್ತು ರೈತ ಸಂಪರ್ಕ ಕೇಂದ್ರಗಳನ್ನು ಮಾಡಲಾಗಿದೆ. Agri Clinics ಎಂದು ನಾವು ಕರೆದೆವು. ಆದರೆ ಆ Agri Clinics ನಲ್ಲಿ ಏನಾಗಿದೆ, ಇವತ್ತು ಒಬ್ಬ A.O, ಒಬ್ಬ A.A.O. ಕುಳಿತಿದ್ದಾನೆ, ಯಾರಾದರೂ ಹೋದರೆ ಬಿತ್ತನೆ ಬೀಜದ ಪ್ರಶ್ನೆ ಬಂದಾಗ, ಗೊಬ್ಬರ ಪ್ರಶ್ನೆ ಬಂದಾಗ ನೀವು ಏನಾದರೂ service ಕೊಡುವಂಥ ಪ್ರಶ್ನೆ ಬಂದಾಗ ಮಾತ್ರ ರೈತರು ಹುಡುಕಿಕೊಂಡು ಹೋಗುತ್ತಾರೆ. Agri Clinic ಎಂಬ concept ಎನ್ನುವುದು spoil ಆಗಿಬಿಟ್ಟಿದೆ. ಅವರಿಗೆ empower ಮಾಡಬೇಕು.ಇವತ್ತು ನಿಮಗೆಲ್ಲರಿಗೂ ಕೂಡ computer ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಸ್ವತಂತ್ರ ವಾಗಿರುವ ಕಟ್ಟಡಗಳನ್ನು ಕಟ್ಟಿಕೊಡಬೇಕೆಂದು ಮಾಡಿದೆವು. ಹೋಬಳಿ ಗೊಂದು ಕೇಂದ್ರವನ್ನು ಮಾಡಿದೆವು. ಆದರೆ ಅವ್ಯಾವುದು ಕೂಡ ಕೆಲಸ ಮಾಡುತ್ತಿಲ್ಲ, ಅವರೇನಿದ್ದರೂ ಕೇವಲ ಗೊಬ್ಬರ ಹಂಚುವುದು, ಬೀಜ ಹಂಚುವ ಕೇಂದ್ರಗಳಾಗಿವೆ ವಿನಃ ಬೇರೆ ಏನೂ ಕೆಲಸ ಆಗುತ್ತಿಲ್ಲ. ನಿಮ್ಮ research ಅನ್ನು ನೀವು transfer ಮಾಡಬೇಕಾದರೆ, ನೀವು ನೇರವಾಗಿ ರೈತರಿಗೆ ಕೊಡಬೇಕಾದಾಗ, ರೈತರಿಂದ interact ಮಾಡಬೇಕಾದಾಗ ನೀವು ಈ ರೀತಿಯ ಕೃಷಿ ಸಂಪರ್ಕ ಕೇಂದ್ರಗಳಿಗೆ ಹೆಚ್ಚು ಶಕ್ತಿಯನ್ನು ಕೊಟ್ಟು ಕೆಲಸ

ಮಾಡತಕ್ಕಂಥ ಅವಕಾಶ ಆಗಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಿಮ್ಮ Cadre and Recruitment Rules ನಲ್ಲಿ provision ಇಲ್ಲ. ನೀವು amendment ಮಾಡಿ, ತನ್ನಿ. ಒಂದು cadre ಅನ್ನು create ಮಾಡಿ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ District Training Centers ಇವೆ. Train ಮಾಡಲಿಕ್ಕೆ Officers ಇದ್ದಾರೆ. Farmers ಅನ್ನು train ಮಾಡುತ್ತೀರಿ ಅದೇ ರೀತಿಯಾಗಿ ಇಂಥ ಜನರನ್ನು ತರಬೇತಿ ಮಾಡಲಿಕ್ಕೆ ಅವಕಾಶ ಇದೆ. ಇವತ್ತು ಎಷ್ಟೇ ಆದರೂ ಕೂಡ ತಡವಾಗಿರಬಹುದು, ಈಗ ಎರಡು ವರ್ಷಗಳಾದರೂ ಕೂಡ ಅವರಿಗೆ ತರಬೇತಿ ಕೊಟ್ಟು ಅವರನ್ನು ಎಲ್ಲೋ ಒಂದು ರೀತಿಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಿದರೆ ಇವತ್ತು ರೈತರ ಜೊತೆ ವ್ಯವಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ರೀತಿಯಾದಂಥ younger generation, younger staff ಅನ್ನು ನೀವು ತರದಿದ್ದರೆ ಕೃಷಿಯಲ್ಲಿ ನೀವು ಬದಲಾವಣೆ ತರಲಿಕ್ಕೆ ಸಾಧ್ಯವಿಲ್ಲ. ನಿಮ್ಮ extension work failure ಆಗುತ್ತದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದೊಂದು ಮುಖ್ಯವಾದಂಥ ಕೆಲಸ, ಅದನ್ನು ನೀವು ಮಾಡಬೇಕಾಗುತ್ತದೆ. ಆ ಕೆಲಸವಾಗುವವರೆಗೆ ಏನು ಮಾಡಬೇಕು? ಎಂದರೆ ಎಲ್ಲೋ ಒಂದು ಕಡೆ Farmers' Field Schools ಎಂಬ concept ಏನಿದೆ, ನಿಮ್ಮ ಇಲಾಖೆಯವರಿಗೆ ಅದು ಗೊತ್ತಿರುತ್ತದೆ. ಆ ಇಲಾಖೆಯವರಿಗೆ ಕೇಳಿ. ಆ Farmers' Field Schools ಎಂಬ concept ಅನ್ನು ನೀವು develop ಮಾಡುವಂಥ ಕೆಲಸವನ್ನು ಮಾಡಿ. ಸಾವಯವ ಗೊಬ್ಬರದಲ್ಲಿ ಏನು ಮಾಡುತ್ತಿದ್ದರು ಅಂಥ ಇನ್ನೂರು, ಮುನ್ನೂರು ಜನ ರೈತರನ್ನು ಸೇರಿಸಿಕೊಂಡು ಯಾವರೀತಿ action ತೆಗೆದುಕೊಳ್ಳಬೇಕು, ಇಲಾಖೆಯಲ್ಲಿ ಏನೆಲ್ಲ action ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ? ನೀವು ಆ ರೀತಿಯಾದ schoolಗಳನ್ನು ಹೆಚ್ಚಾಗಿ ತೆಗೆಯುವುದರ ಬಗ್ಗೆ ಯೋಚನೆ ಮಾಡಿ ನೀವು ತಕ್ಷಣ ರೈತರನ್ನು ಪ್ರೇರೇಪಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ, ಕೃಷಿಯಲ್ಲಿ ಏಕೆ ಇವತ್ತು ಉತ್ಪಾದನೆ ಕಡಿಮೆಯಾಗುತ್ತಿದೆ, ಆಸಕ್ತಿ ಕಡಿಮೆಯಾಗುತ್ತಿದೆ ಎಂದರೆ ಮುಂದೆ ಅದರ ಬಗ್ಗೆ ಹೇಳುತ್ತೇನೆ. It is a Non-reliability profession. ಅದಕ್ಕೆ ಏಕೆ

ಎನ್ನುವಂಥ ಪ್ರಶ್ನೆ ಬೇರೆ. ಆದರೆ ಇವತ್ತೇನಾಗಿದೆ, SSLC, PUC ಮಾಡಿದ ತಕ್ಷಣ ಅವನು ವ್ಯವಸಾಯ ಮಾಡಲಿಕ್ಕೆ ತಯಾರಿಲ್ಲ. ವ್ಯವಸಾಯ ಮಾಡಲಿಕ್ಕೆ ಅವನು ಹೋಗುವುದಿಲ್ಲ. ಕೈ ಕೆಸರಾಗುವಂಥ ಪ್ರಶ್ನೆಯೇ ಇಲ್ಲ. ಅವನಿಗೆ ಅನಾದಿ ಕಾಲದಿಂದ ಬಂದಿರತಕ್ಕಂಥ, ಕೃಷಿಯಲ್ಲಿರತಕ್ಕಂಥ ಆ ಚಟುವಟಿಕೆ ಅವನಿಗೆ ಗೊತ್ತಿಲ್ಲ. ಉದ್ಯೋಗಕ್ಕೋಸ್ಕರ ಹೊರಗಡೆ ಬರುತ್ತಾನೆ, ಉದ್ಯೋಗ ಸಿಗುವುದಿಲ್ಲ. Frustrate ಆಗುತ್ತಾನೆ, ಅವನ ಕುಟುಂಬಕ್ಕೆ burden ಆಗುತ್ತಾನೆ ವಿನಃ ಕೃಷಿ ಚಟುವಟಿಕೆಯಲ್ಲಿ ಅವನು ತೊಡಗಿಸಿಕೊಳ್ಳಲಿಕ್ಕೆ ಸಾಧ್ಯವೇ ಇಲ್ಲ. ಇದನ್ನು ನಾವು ಸುಮ್ಮನೆ ಹೀಗೆ ಬಿಡುವುದಕ್ಕೂ ಸಹ ಸಾಧ್ಯವಿಲ್ಲ. ಎಲ್ಲೋ ಒಂದು ಕಡೆ ಕೃಷಿಕರನ್ನು ಪ್ರಚೋದನೆ ಮಾಡಿ, ಪ್ರೋತ್ಸಾಹ ಮಾಡಿ, ಹೆಚ್ಚು ಕೃಷಿಯಲ್ಲಿ ಭಾಗವಹಿಸುವಂಥ ಅವಕಾಶವನ್ನು ಕೂಡ ಮಾಡಬೇಕಾಗುತ್ತದೆ. ನಾನೊಂದು ಮಾತನ್ನು ಹೇಳುತ್ತೇನೆ, ನಮ್ಮಲ್ಲಿ ಕೃಷಿಗೆ ಯೋಗ್ಯವಾಗಿ ಇರುವಂಥ ಜಮೀನಿದೆಯೆಲ್ಲಾ, ಆ ಎಲ್ಲಾ ಭೂಮಿ ಯಲ್ಲಿಯೂ ಸಾಗುವಳಿ ಆಗುತ್ತಿಲ್ಲ. ಇವತ್ತು rain fed irrigation ನಲ್ಲಿ 30–40% ಅಷ್ಟೇ ವ್ಯವಸಾಯ ಮಾಡುತ್ತಿದ್ದಾರೆ, ಎಲ್ಲರೂ ಕೂಡ ಬೀಳು ಬಿಟ್ಟಿದ್ದಾರೆ, ಅದು ಅನುಪಯುಕ್ತವಾಗಿದೆ, ಯಾರೂ ಕೂಡ ಸಾಗುವಳಿ ಮಾಡಲಿಕ್ಕೆ ಹೋಗುವುದಿಲ್ಲ. ಏನಾದರೂ ಕಾರ್ಯ ಚಟುವಟಿಕೆ ಇದೆಯೆಂದರೆ ಎಲ್ಲಿ assured irrigation ಇದೆ ಅಲ್ಲಿ ಮಾತ್ರ. Assured irrigation ಎಲ್ಲಾಗಿದೆ? ಇವತ್ತು dam ಪ್ರದೇಶಗಳು ಬಿಡಿ, ಬೇರೆ ಕಡೆ ಯಾವ ಕೆರೆಗಳೂ ತುಂಬಿಲ್ಲ, ಶೇಕಡ 80 ರಷ್ಟು ಕೆರೆಳಿಗೆ ನೀರು ಹೋಗಿಲ್ಲ. ಕೆರೆಗಳಲ್ಲಿ ನೀರಿಲ್ಲದಿದ್ದಾಗ ಅಲ್ಲಿ ವ್ಯವಸಾಯ ಚಟುವಟಿಕೆಗಳಿರುವುದಿಲ್ಲ. ಇವತ್ತು ಸಂಪೂರ್ಣವಾಗಿ production ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ಆಹಾರ ಉತ್ಪಾದನೆ ಕಡಿಮೆಯಾಗುವುದಕ್ಕೆ ಇದು ಮುಖ್ಯವಾದಂಥ constraint ಎಂಬ ಮಾತನ್ನು ಹೇಳುತ್ತೇನೆ. ನಾವು ಆದಷ್ಟು ನಮ್ಮ ಹೆಣ್ಣು ಮಕ್ಕಳನ್ನು ಕೃಷಿಯಲ್ಲಿ ತೊಡಗಿಸುವಂತೆ ರೀತಿಯಲ್ಲಿ ಅವರನ್ನು ಹೆಚ್ಚು involve ಮಾಡಬೇಕಾಗುತ್ತದೆ. ಅವರಿಗೆ ಹೆಚ್ಚು ತರಬೇತಿ ಕೊಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ನಾವು ಸಾಧನೆ ಮಾಡುವು ದಕ್ಕಾಗುತ್ತದೆನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೆಣ್ಣು ಮಕ್ಕಳ ನೈಪುಣ್ಯತೆಯನ್ನು ಯಾವ ರೀತಿಯಾಗಿ ಸಂಪೂರ್ಣವಾಗಿ ಕೃಷಿಯಲ್ಲಿ ಬಳಕೆ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ಚಿಂತನೆ ಮಾಡಿ

ಯಾವುದಾದರೂ ಒಂದು ಯೋಜನೆಯನ್ನು ಮಾಡುವುದು ಸೂಕ್ತ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(4-30 PM)

ಇನ್ನೊಂದು ಬಹಳ ಮುಖ್ಯವಾದುದು ಏನೆಂದರೆ, ಇವತ್ತು ಕೃಷಿಯನ್ನು ತೆಗೆದುಕೊಳ್ಳಿ. ಅದು ಎಂದಿಗೂ ಕೂಡ ಲಾಭದಾಯಕವಾದ ಉದ್ಯಮವಾಗುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೆ ಉಪ ಕಸುಬುಗಳು ಇರುತ್ತವೆ ಆ ಉಪ ಕಸುಬುಗಳನ್ನು ಇಟ್ಟುಕೊಂಡಾಗ ಮಾತ್ರ ಆ ಕಸುಬಿಗೆ ಅರ್ಥ ಬರುತ್ತದೆ, ಶಕ್ತಿ ಬರುತ್ತದೆ ಅಥವಾ ಲಾಭದಾಯಕ ಉದ್ಯಮ ವಾಗುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿ ಬಹಳ ಮುಖ್ಯವಾಗಿ ಹೇಳುವುದಾದರೆ, Live Stock, ಹಸುಗಳು ಕಟ್ಟುವುದಾಗಲಿ, ಧನಗಳನ್ನು ಕಟ್ಟುವಂಥಾದ್ದಾಗಲಿ, ಎಮ್ಮೆಗಳನ್ನು ಕಟ್ಟುವುದಾಗಲಿ, ಕುರಿ ಸಾಕಣೆ ಮಾಡುವುದಾಗಲಿ ನೀವು ಈ ರೀತಿಯ ಕೆಲಸಗಳಿಗೆ ಪ್ರೋತ್ಸಾಹ ಮಾಡುವಂಥ ಕೆಲಸವನ್ನು ಮಾಡಬೇಕು. ಪ್ರೋತ್ಸಾಹ ಮಾಡುವಂಥ ಕೆಲಸವನ್ನು ನೀವು ಹೇಗೆ ಮಾಡುವುದಕ್ಕೆ ಸಾಧ್ಯ ಎಂದರೆ, ನಮ್ಮ ರೈತರಲ್ಲಿ ಏನಾಗಿದೆ ಎಂದರೆ ಅವರು ಯಾವುದೇ ಹೊಸ ವಿಚಾರ ಬಂದರೂ ಕೂಡ ಆ ಹೊಸ ವಿಚಾರಕ್ಕೆ ಹೊಂದಿಕೊಳ್ಳುವುದಿಲ್ಲ. ಅವರಿಗೆ ಎಲ್ಲಿಯೋ ಒಂದು ಕಡೆ ಟ್ರೈನಿಂಗ್ ಬೇಕಾಗುತ್ತದೆ. ಒಂದು ರೀತಿಯಲ್ಲಿ ವಿಶ್ವಾಸವನ್ನು ಮೂಡಿಸುವಂಥ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಕುರಿ ಸಾಕುವ ಬಗ್ಗೆ ಹೆಚ್ಚು ವಿಚಾರ ಮಾಡಬೇಕಾಗುತ್ತದೆ. ಕುರಿ ಸಾಕುವ ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ, ನೀವು ಇವತ್ತು ಬೇರೆ ಬೇರೆ ದೇಶಗಳಲ್ಲಿ ನೋಡುತ್ತಿದ್ದೀರಿ. ಬೇರೆ ದೇಶದಲ್ಲಿ ಏನಾಗುತ್ತದೆ ಎಂದರೆ ಅಲ್ಲಿ ಹಿಮ ಬೀಳುವಂಥ ಸಂದರ್ಭದಲ್ಲಿ ಒಂದೇ season ನಲ್ಲಿ ಮಾತ್ರ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಕರ್ನಾಟಕ ಮತ್ತು ಭಾರತ ದೇಶದಲ್ಲಿ ಮೂರು ವರ್ಷವೂ ಬೆಳೆ ಬೆಳೆಯಬಹುದು. ಮೂರು–ನಾಲ್ಕು ಬೆಳೆಗಳನ್ನು ತೆಗೆಯುವಂಥ ವಾತಾವರಣ ನಮ್ಮಲ್ಲಿ ದೈವದತ್ತವಾಗಿ ಬಂದಿದೆ. ಈ ವಾತಾವರಣದ ಹಿನ್ನೆಲೆಯಲ್ಲಿ ನಾನು ಇವತ್ತು ಹೇಳುತ್ತಿದ್ದೇನೆ. ಇವತ್ತು ಅಮೇರಿಕಾ ಹಾಗೂ ಇಂಗ್ಲೇಂಡ್ ಅಥವಾ ಬೇರೆ ಯಾವ ದೇಶಕ್ಕೆ ಹೋದರೂ ಕೂಡ ಅಲ್ಲಿ ಕುರಿ ಸಾಕಾಣಿಕೆಗೆ ಹೆಚ್ಚು ಹೊತ್ತನ್ನು ಕೊಟ್ಟಿದ್ದಾರೆ. ಇಲ್ಲಿ ಕುರಿ ಸಾಕಾಣಿಕೆಗೆ ಹೆಚ್ಚು ಹೊತ್ತನ್ನು ಕೊಡಬೇಕು. ಏಕೆಂದರೆ, ಇವತ್ತು ಯಾವುದೇ ರೀತಿಯ ಬೆಳೆ ಬೆಳೆದರೂ ಕೂಡ ರೈತನಿಗೆ ಲಾಭ ಮಾಡುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ ಕೂಡ 2–3

ಎಕರೆ ಇರುವಂಥ ರೈತರು ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಎಲ್ಲೋ ಒಂದು ರೀತಿಯಲ್ಲಿ ಪರ್ಯಾಯವಾಗಿ ಈ ರೀತಿಯ ಕುರಿ ಸಾಕುವಂಥ ಹೊಸ ವಿಚಾರಗಳು ಏನಿವೆ, ಹೊಸ ಆವಿಷ್ಕಾರಗಳು ಏನಿವೆ ಅದನ್ನು ಪರಿಚಯ ಮಾಡುವಂಥ ಕೆಲಸ ಮಾಡಬೇಕು. ಉದಾಹರಣೆಗೆ ಇಲ್ಲಿ ಯಾರೋ ಒಬ್ಬರು ಮಾಲೂರಿನ ಸಮೀಪದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು ಮಾಡಿದ್ದಾರೆ. ಅಲ್ಲಿ ನಾನೂ ಕೂಡ ನೋಡುವುದಕ್ಕೆ ಆಗಲಿಲ್ಲ. ಅದೇ ರೀತಿ ಒಂದು demonstrationಅನ್ನು ನನ್ನ ಕ್ಷೇತ್ರದಲ್ಲಿ ಕೂಡ ನಾನು ಮಾಡಿಸಿದೆ. ಇವತ್ತು ಒಂದು ಎಕರೆಯಲ್ಲಿ ಬೆಳೆಯುವಂಥ ಜೋಳ ಇದೆಯೆಲ್ಲಾ ಆ ಜೋಳಕ್ಕೆ siols ಅನ್ನು ಮಾಡಿ, ಜೋಳವನ್ನು ಕತ್ತರಿಸಿ, ಪುಡಿ ಮಾಡಿ ಅದಕ್ಕೆ fermentation ಆಗುವುದಕ್ಕೆ ಬೇರೆ ಬೇರೆ ರೀತಿಯ ingredients ಹಾಕಿ 2–3 ತಿಂಗಳುಗಳ ಕಾಲ ಮುಚ್ಚಿ ಇಟ್ಟರೆ ಅದನ್ನು ಎಷ್ಟು ದಿವಸಗಳ ಕಾಲ ಬೇಕಾದರೂ stock ಇಡಬಹುದು. ಕುರಿಗಳನ್ನು ಮೇವಿಗೆ ಹೊರಗಡೆ ಬಿಡುವಂಥ ಅವಶ್ಯಕತೆ ಇಲ್ಲ. ಅಲ್ಲಿಯೇ ಒಂದು ಕಡೆಯಲ್ಲಿ ಕುರಿಗಳನ್ನು ಬಿಟ್ಟು ಬೆಳಿಗ್ಗೆ ಹಾಗೂ ಸಾಯಂಕಾಲ ಒಂದೊಂದು ಕೆ.ಜಿ.ಯನ್ನು ಕೊಟ್ಟರೆ ಸಾಕು. ಸುಮಾರು ಒಂದು–ಒಂದೂವರೆ ವರ್ಷದ ಒಳಗಾಗಿ ಒಂದು ಕುರಿ 25–30 ಕೆ.ಜಿ. ತೂಕ ಬರುತ್ತದೆ. 25–30 ಕೆ.ಜಿ. ತೂಕ ಬಂದರೆ ಒಂದು ಎಕರೆಗೆ ಎಷ್ಟು ಕುರಿ ಸಾಕಾಣಿಕೆಯನ್ನು ಮಾಡಬಹುದು ಎಂದು ಅಂದಾಜಿನ ಪ್ರಕಾರ ಹೇಳುವುದಾದರೆ ಕನಿಷ್ಠವೆಂದರೂ ಕೂಡ 50 ಕುರಿಗಳನ್ನು ಸಾಕುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ರೀತಿ ಸಾಕುವುದರಿಂದ ಒಂದು ಕುರಿ 25–30 ಕೆ.ಜಿ. ತೂಕ ಬರುವುದಾದರೆ ಒಂದು ಎಕರೆಯಲ್ಲಿ 50 ಕುರಿಗಳನ್ನು ಸಾಕಬಹುದು. ಇವತ್ತು ಒಂದು ಕೆ.ಜಿ. ಮಾಂಸಕ್ಕೆ ಏನು ಬೆಲೆ ಎಂದು ನಿಮಗೆ ಗೊತ್ತಿದೆಯೇ? ಈ ವಿಚಾರ ನಿಮಗೆ ಅರ್ಥವೇ ಆಗುವುದಿಲ್ಲ ಬಿಡಿ. ಬೆಂಗಳೂರಿನಲ್ಲಿ ಒಂದು ಕೆ.ಜಿ.ಮಾಂಸದ ಬೆಲೆ 250 ರೂಪಾಯಿಗಳು. ಒಂದು ಕುರಿಯ ಬೆಲೆ 3–5 ಸಾವಿರ ರೂಪಾಯಿಗಳವರೆಗೆ ಇದೆ. ಇವತ್ತು ಒಂದು ಎಕರೆಯಲ್ಲಿ 50 ಕುರಿಗಳು ಅಥವಾ 100 ಕುರಿಗಳನ್ನು ಸಾಕಿದರೆ ರೈತನಿಗೆ ಒಳ್ಳೆಯ ಲಾಭ ಬರುತ್ತದೆ. ಆಗ ರೈತ ಬಡತನದಿಂದ ಈಚೆ ಬರುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ವಿಚಾರಗಳನ್ನು ಇವತ್ತು ರೈತರಿಗೆ ಏಕೆ ಹೇಳಿಕೊಡಬಾರದು. ಇವತ್ತು ಇದನ್ನು ಯಾರೋ ಮಾಡಿರುವುದು ಅಲ್ಲ. ಇವತ್ತು ಇದನ್ನು ಹೊರದೇಶಗಳಲ್ಲಿ ಮಾಡಿದ್ದಾರೆ,

ಉತ್ತರ ಭಾರತದಲ್ಲಿ ಮಾಡಿದ್ದಾರೆ. ಬೆಂಗಳೂರಿನಂಥ ಜಿಲ್ಲೆಯಲ್ಲಿಯೇ ಕೆಲವರು ಕುರಿ ಸಾಕಾಣಿಕೆ ಮಾಡಿದ್ದಾರೆ ಎಂದಾಗ ಇದನ್ನು ಏಕೆ ರೈತರಿಗೆ ಪರಿಚಯಿಸುವಂಥ ಕೆಲಸವನ್ನು ಮಾಡಬಾರದು? ಈಗ ಉದ್ಯೋಗ ಖಾತ್ರಿ ಯೋಜನೆಯಿದೆ. ಈ ಯೋಜನೆಯಡಿಯಲ್ಲಿ ನೀವು ಸಾವಯವ ಗೊಬ್ಬರ ಕ್ಕೋಸ್ಕರ ತೊಟ್ಟಿಗಳನ್ನು ಕಟ್ಟಿಸುತ್ತೀರಿ. ನೀವು siolsಅನ್ನು ಮಾಡುತ್ತೀರಿ. Siols ಎಂದರೆ ಗುಂಡಿಗಳನ್ನು ತೆಗೆಸುವಂಥಾದ್ದು ಹಾಗೂ ಅದನ್ನು ಅಲ್ಲಿ ಗಾಳಿ ಹೋಗದಂತೆ ಸ್ಟಾಕ್ ಮಾಡುವಂಥ ಅವಕಾಶ ಮಾಡುವುದು. ಅದಕ್ಕೆ ಒಂದು ಅವಕಾಶ ಮಾಡಿಕೊಡಿ. ಅದೇ nomenclatureನಲ್ಲಿ ನೀವು ಮಾಡುವುದಕ್ಕೆ ಸಾಧ್ಯವಿದೆ. ಒಂದು ಎಕರೆಯಲ್ಲಿ 50–100 ಕುರಿಗಳನ್ನು ಸಾಕುವುದಕ್ಕೆ ಅವಕಾಶವಿದೆ ಎಂದು ಹೇಳುವುದಾದರೆ ರೈತ ಏಕೆ ಉದ್ಧಾರವಾಗುವುದಿಲ್ಲ? ಏಕೆ ರೈತ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ? ಇನ್ನೊಂದು ವಿಚಾರವೇನೆಂದರೆ, ಮಳೆ ಆಧಾರಿತ ಪ್ರದೇಶಗಳಲ್ಲಿ ಇದನ್ನು ಹೆಚ್ಚು ಪ್ರಚಾರ ಮಾಡಬೇಕು. 2–3 ಎಕರೆಗಳಲ್ಲಿ ಕಡಿಮೆ ಎಂದರೂ ಕೂಡ 50 ಕುರಿಗಳನ್ನು ಸಾಕುವಂಥ ಕೆಲಸವಾಗಬೇಕು. ಅದು home industry type ಆಗಬೇಕು. ಸ್ವಂತ ಕಸುಬಾಗಬೇಕು. ಪ್ರತಿಯೊಬ್ಬರ ಮನೆಯಲ್ಲೂ ಕುರಿ ಸಾಕಾಣಿಕೆ ಮಾಡುವಂಥ ಕೆಲಸವಾಗಬೇಕು. ಇವತ್ತು ಇದಕ್ಕೆ ಬೇಡಿಕೆ ಇಲ್ಲವೆಂಬ ಪ್ರಶ್ನೆಯೇ ಇಲ್ಲ. ಇವತ್ತು ಆಹಾರದ ಪದ್ಧತಿಯಲ್ಲಿಯೂ ಕೂಡ ಬದಲಾವಣೆಯಾಗಿದೆ ಇವತ್ತು vegetarian ಗಳೆಲ್ಲರೂ non-vegetarian ಗಳಾಗುತ್ತಿದ್ದಾರೆ. ಇವತ್ತು nutrition ಬಗ್ಗೆ ಒಳ್ಳೆಯ ಕಲ್ಪನೆಯಿದೆ. ಇವತ್ತು ಎಲ್ಲರಿಗೂ nutritious food ಬೇಕಾಗುತ್ತದೆ. ವಿಶೇಷವಾಗಿ ಈ foodಅನ್ನು ಮಕ್ಕಳಿಗೆ ಕೊಡುವಂಥ ವ್ಯವಸ್ಥೆ ಮಾಡುತ್ತಿದ್ದಾರೆ. vegetarians ಹಾಗೂ non-vegetarians ಎಂದು ಜಾತಿ–ವರ್ಗದ ಆಧಾರದ ಮೇಲೆ ವಿಂಗಡಿಸುತ್ತಿದ್ದರು. ಆದರೆ, ಈಗ foodಗೆ ಜಾತಿಯಿಲ್ಲ. ಈಗ ಅದು ಎಲ್ಲಾ ಹೊರಟು ಹೋಗಿದೆ. ಎಲ್ಲರೂ ಕೂಡ ಇವತ್ತು non-vegetarianಗೆ ಹೋಗುವಂಥ ಅನಿವಾರ್ಯ ಪರಿಸ್ಥಿತಿ ಕೂಡ ಬರುತ್ತಿದೆ. ಅದಕ್ಕೆ ಎಲ್ಲರೂ ಹೋಗುತ್ತಿದ್ದಾರೆ. ಈ ರೀತಿಯಾಗಿ ಆಹಾರ ಪದ್ಧತಿಯಲ್ಲಿ ಬದಲಾವಣೆ ಆಗುತ್ತಿರುವಂಥ ಸನ್ನಿವೇಶದಲ್ಲಿ ನೀವು ಈ ರೀತಿಯಾದ silosಗಳನ್ನು ಮಾಡುವುದಕ್ಕೆ ಚಿಂತನೆಯನ್ನು ಮಾಡಿ. ಈ ರೀತಿಯ ಚಿಂತನೆಯನ್ನು ನೀವು

ಮಾಡಿದರೆ ನಿಜವಾಗಲೂ ಹೇಳುತ್ತೇನೆ ಇವತ್ತು ಏನು ರೈತರು Rain Fed Irrigationನಲ್ಲಿ ಸುಖವಾಗಿಲ್ಲ ಹಾಗೂ ಕಷ್ಟದಲ್ಲಿದ್ದಾರೆ ಎಂದು ಹೇಳುತ್ತಿದ್ದೇವಲ್ಲಾ ಅದನ್ನು ಇವತ್ತು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ನಾನು ಮಾತನಾಡುವಾಗ ಇದು ನಿಮಗೆ ಸಣ್ಣ ವಿಷಯವಾಗಿ ಕಾಣಬಹುದು. ಆದರೆ, ಅದನ್ನು ದೂರದೃಷ್ಟಿಯಿಂದ ನೋಡಿದರೆ ಅದಕ್ಕೆ ಹೆಚ್ಚು ಶಕ್ತಿ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಚಂದ್ರಪ್ಪ : ಈ ವಿಚಾರದ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಾವೆಲ್ಲಾ ಕೇಳಿಸಿಕೊಳ್ಳುತ್ತಿದ್ದೇವೆ. ವಿರೋಧ ಪಕ್ಷದ ನಾಯಕರು ಕೇಳಿಸಿಕೊಳ್ಳಬೇಕು. ಪ್ರತಿ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಾನು ಕೇಳಿಸಿಕೊಳ್ಳುತ್ತಿದ್ದೇನೆ. ನೀವು ಕೇಳಿಸಿಕೊಳ್ಳುತ್ತಿಲ್ಲವೇ?

ಶ್ರೀ ಎಂ. ಚಂದ್ರಪ್ಪ : ನನಗೆ ನೀವು ಕೇಳಿಸಿಕೊಳ್ಳುತ್ತಿರುವುದು ಗೊತ್ತಾಗಲಿಲ್ಲ.

ಶ್ರೀ ಸಿದ್ದರಾಮಯ್ಯ : ಸ್ವಲ್ಪ attentive ಆಗಿ ಇರ್ರಿ, ನೀವು Houseಗೆ ಬರುವುದಿಲ್ಲ. ಇನ್ನು attentive ಆಗಿ ಎಲ್ಲಿ ಇರುತ್ತೀರಿ? ಎಲ್ಲೋ ಮಲಗಿದ್ದು ಈಗ ಬಂದು ಇದ್ದಕ್ಕಿದ್ದ ಹಾಗೆ ಜ್ಞಾನೋದಯವಾದಂತೆ ಎದ್ದು ಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಎಂ. ಚಂದ್ರಪ್ಪ : ಆ ವಿಚಾರದ ಬಗ್ಗೆ ಹೆಚ್ಚಿನ ಮಾಹಿತಿ ಕೊಡುತ್ತೀರಿ ನೀವು ಎಂದು ನಾನು ಕೇಳಿದೆ.

ಶ್ರೀ ಸಿದ್ದರಾಮಯ್ಯ : ನಿಮಗೆ ಕುರಿ ಹಾಗೂ ಮೇಕೆ ವಿಷಯ ಎರಡೂ ಗೊತ್ತಿಲ್ಲ. ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ಈ ಹಿಂದೆ ಕುರಿ ಕಾಯುವಂಥ ಜನಾಂಗಗಳನ್ನು ನಾವು ದೃಷ್ಟಿಸಿದ್ದೇವೆ. ಈ ಮೊದಲು ಕುರುಬ ಜನಾಂಗಕ್ಕೆ ಸೇರಿದವರು ಕುರಿಗಳನ್ನು ಸಾಕುತ್ತಿದ್ದರು. ನಮ್ಮಲ್ಲಿ ಕುರುಬ ಜನಾಂಗದ ವರಿಗಿಂತ ಯಾವುದೋ ಬೇರೆ ಜನಾಂಗದವರು ಇವತ್ತು ಕುರಿಗಳನ್ನು ಹೆಚ್ಚು ಸಾಕುತ್ತಿದ್ದಾರೆ. ಅಷ್ಟೇ ಏಕೆ ಇವತ್ತು ನಮ್ಮ ಜಾತಿಯವರು ಕೂಡ ಕುರಿಗಳನ್ನು

ಸಾಕುತ್ತಾರೆ. ಇವತ್ತು ಎಲ್ಲಾ ಜಾತಿಯವರೂ ಕೂಡ ಕುರಿಗಳನ್ನು ಸಾಕುತ್ತಿದ್ದಾರೆ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಮ್ಮ ಶಿರಾ ತಾಲ್ಲೂಕಿನಲ್ಲಿಯೇ ಸುಮಾರು ನಾಲ್ಕು ಮುಕ್ಕಾಲು ಲಕ್ಷ ಕುರಿಗಳ ಸಂಖ್ಯೆ ಇದೆ. ಇವತ್ತು ಮಾನ್ಯ ಸುರೇಶ್ ಕುಮಾರ್‌ರವರು ಜಿಲ್ಲಾ ಮಂತ್ರಿಗಳು. ಒಂದು ದಿವಸವೂ ಕೂಡ ಅಲ್ಲಿಗೆ ಬರಲಿಲ್ಲ. ಕುರಿ ಊಟವನ್ನಂತೂ ಮಾಡಲೇ ಇಲ್ಲ. ಇವತ್ತು ಕುರಿಗಾರರ ಸಮಸ್ಯೆಗಳೇನು ಎನ್ನುವುದನ್ನು ನಾವು ಯೋಚನೆ ಮಾಡಿದ್ದೇವೆಯೇ? ಕುರಿಗಳು fieldಗೆ ಹೋದಂಥ ಸಂದರ್ಭದಲ್ಲಿ ಅವುಗಳಿಗೆ ಬರಬರಾದಂಥ ರೋಗಗಳು ಬರುತ್ತವೆ. ಆ ರೋಗಗಳನ್ನು ಸಾಮೂಹಿಕವಾಗಿ ಇನಾಕ್ಯುಲೇಶನ್ ಮಾಡುವಂಥ ಪದ್ಧತಿ ಇವತ್ತು ನಮ್ಮಲ್ಲಿ ಇಲ್ಲ. ಆ ರೋಗಗಳನ್ನು ತಡೆಗಟ್ಟುವುದಕ್ಕೆ ಇವತ್ತು ಕಾರ್ಯಕ್ರಮಗಳು ಆಗುತ್ತಿಲ್ಲ. ನಮ್ಮಲ್ಲಿ ಜಾಸ್ತಿ Veterinary Hospitalಗಳು ಇಲ್ಲ. Veterinary doctors ಇಲ್ಲ. ಇವತ್ತು ಅಲ್ಲಿ postಗಳು fill up ಆಗಿಲ್ಲ. ಈ ರೀತಿ ಇರುವಾಗ ಯಾವ ರೀತಿ ಕುರಿಗಾರರನ್ನು, ಕುರಿ ಕಾಯುವವರನ್ನು ಹಾಗೂ ಕುರಿ ಸಂಪತ್ತನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯ? ಬಹುಶಃ ಈ ದೇಶದಲ್ಲಿ ಯಾವುದಕ್ಕಾದರೂ ಅಂದರೆ food grains ನಲ್ಲಿ ಬೆಲೆ ಇಳಿಯದೇ ಇರತಕ್ಕಂಥಾದ್ದು ಎಂದರೆ ಇವತ್ತು ಮಾಂಸಕ್ಕೆ ಮಾತ್ರ. ಅದು ಕುರಿ ಮಾಂಸ ಇರಬಹುದು, ಮೇಕೆ ಮಾಂಸ ಇರಬಹುದು ಅಥವಾ ಯಾವುದೇ ಮಾಂಸವಿರಬಹುದು, ಇವತ್ತು ಬೆಲೆ ಏರುತ್ತಲೇ ಇದೆ. ಇವತ್ತು ಅದು rich man's food ಆಗುತ್ತಿದೆಯೇ ವಿನಃ poor man's food ಆಗುತ್ತಿಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಇನ್ನೊಂದು ಬಹಳ ಮುಖ್ಯವಾದ ವಿಚಾರವನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಒಂದು ಎಕರೆಯಲ್ಲಿ ಬರತಕ್ಕಂಥ green vegetation ಏನು ಇದೆಯೆಲ್ಲಾ ಅದನ್ನು ಕೇವಲ ನೀವು 10–20–40–50 ಕುರಿಗಳಲ್ಲಿ ನೀವು store ಮಾಡುವುದಕ್ಕೆ ಸಾಧ್ಯ. ಕುರಿಗಳನ್ನು ಯಾವುದೇ ರೀತಿಯಾಗಿ ನೀವು storage tankಗಳಲ್ಲಿ ಇಟ್ಟುಕೊಳ್ಳಬಹುದು. ಅದನ್ನು warehouse ಎಂದು ಇಟ್ಟುಕೊಳ್ಳಬಹುದು. ನೀವು 10 ಎಕರೆಯಲ್ಲಿ ಬೆಳೆದದ್ದನ್ನು 100 ಕುರಿಗಳನ್ನು ಮೇಯಿಸಿ ಅದನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದರ meat nutritious ಆಗುತ್ತದೆ. ಇದಕ್ಕೆ export potential ಇದೆ. ಇದನ್ನು ಏಕೆ export ಮಾಡಬಾರದು?

ಇವತ್ತು ಇದನ್ನು export ಮಾಡುವುದಕ್ಕೆ ಅವಕಾಶವಿದೆ. ಇದಕ್ಕೆ ಯಾವುದೇ ದೇಶವನ್ನು ತೆಗೆದುಕೊಳ್ಳಬಹುದು. ನೀವು ಚೈನಾ ದೇಶಕ್ಕೆ ಕಳುಹಿಸಬಹುದು ಅಥವಾ ಬೇರೆ ಯಾವುದೇ ದೇಶಕ್ಕೂ ಸಹ ಕಳುಹಿಸಬಹುದು. ಈ ರೀತಿಯಾಗಿರುವ ಕುಲಕಸುಬುಗಳನ್ನು ಜಾಸ್ತಿ ಮಾಡುವುದು ಮುಖ್ಯ. ಇದರಿಂದ ಇವತ್ತು ರೈತ ಲಾಭದಾಯಕವಾಗಿ ಬದುಕುವುದಕ್ಕೆ ಸಾಧ್ಯ ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಒಂದು ಮಾತನ್ನು ಹೇಳುವುದಾದರೆ ರಾಜ್ಯದಲ್ಲಿ ಎಷ್ಟು ಕುರಿಗಳ ಸಂಪತ್ತು ಇದೆ? ನಮ್ಮ ತಾಲ್ಲೂಕಿನಲ್ಲಿಯೇ ಸುಮಾರು ನಾಲ್ಕು ಮುಕ್ಕಾಲು ಲಕ್ಷ ಕುರಿಗಳ ಸಂಖ್ಯೆ ಇದೆ. ನೀವು ಇವತ್ತು ಸಾವಯವ ಗೊಬ್ಬರದ ವಿಚಾರ ಮಾತನಾಡುತ್ತೀರಿ. ಸಾವಯವ ಗೊಬ್ಬರ ನಿಮಗೆ ಎಲ್ಲಿಂದ ಬರಬೇಕು? ಈ ರೀತಿಯಾದ ಸಂಪತ್ತನ್ನು ಅಂದರೆ, ಕುರಿ, ದನ, ಮೇಕೆ ಸಂಪತ್ತುಗಳನ್ನು ಹೆಚ್ಚು ಮಾಡಬೇಕು.

ಈ ಈತಿಯಾಗಿರುವಂಥ ಸಂಪತ್ತನ್ನು ಅಂದರೆ, ಕುರಿ, ದನ, ಮೇಕೆ ಇವೆಲ್ಲಾ ಸಂಪತ್ತನ್ನು ಹೆಚ್ಚು ಮಾಡಬೇಕು. ಅದನ್ನು ಹೆಚ್ಚು ಮಾಡಿದಾಗಲೇ ಇವತ್ತು ಸಾವಯವ ಗೊಬ್ಬರ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. 40–50 ವರ್ಷಗಳಲ್ಲಿ ಹಸಿರು ಕ್ರಾಂತಿ ಹೆಸರಿನಲ್ಲಿ ಭೂಮಿಗೆ ಏನು ಒಂದು ಅಪಚಾರವಾಗಿದೆ ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಈ ಸಂಪತ್ತನ್ನು ಹೆಚ್ಚು ಮಾಡುವಂಥ ಬಗ್ಗೆ ಮತ್ತು ಕುರಿ ಕಾಯಿಸುವಂತಹ ಕುಲ ಕಸುಬಿಗೆ ಹೆಚ್ಚು ಒತ್ತು ಕೊಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಇವತ್ತು ಕೆಎಂಎಫ್ ಎಷ್ಟು ವ್ಯವಸ್ಥಿತ ವಾಗಿದೆ ಎಂದರೆ, ಹಾಲು ಬಿಟ್ಟ ತಕ್ಷಣ ರೈತ ಒಂದು ಗಂಟೆಯೊಳಗಾಗಿ ಸೊಸೈಟಿಗೆ ಕೊಡುತ್ತಾನೆ. 24 ಗಂಟೆಯೊಳಗಾಗಿ process ಆಗಿ ಒಬ್ಬ consumerಗೆ ಬರುತ್ತದೆ. ನೀವು ಕೆ.ಎಂ.ಎಫ್. ಮಾದರಿಯಲ್ಲಿ ಕುರಿ, ಮೇಕೆ, ಹಂದಿ, ಮೊಲ ಸಾಕಾಣಿಕೆಗಳನ್ನು ಆ ವ್ಯಾಪ್ತಿಯಲ್ಲಿ ತಂದು ಮಾಡುವುದಕ್ಕೆ ಸಾಧ್ಯವಿಲ್ಲವೇ? ಕುರಿ ಸಾಕಾಣಿಕೆ ಮಾಡತಕ್ಕಂಥವರು ಅಲ್ಪಸ್ವಲ್ಪ ಇದ್ದಾರೆ. ಅದನ್ನು Mobile Bank ಎಂದು ಕರೆಯುತ್ತಾರೆ. ಇವತ್ತು ನಿಮ್ಮದು ಏನಾದರೂ ಆಸ್ತಿ ಇದ್ದರೆ ಅದನ್ನು ಮಾರುವುದಕ್ಕಾಗುವುದಿಲ್ಲ. ಕುರಿ ಇದ್ದರೆ ನೀವು ಯಾವಾಗ ಬೇಕಾದರೂ ಮಾರಿ ಬಿಡಬಹುದು. ಕುರಿಗಾರರಿಗೆ ಆಗುತ್ತಿರುವಂಥ ಸಮಸ್ಯೆಗಳೇನು? ಇವತ್ತು ಆರ್.ಎಂ.ಸಿ. ಮಾರುಕಟ್ಟೆಗೆ ಬರುತ್ತಾರೆ, ನಾನು ಪ್ರತಿ ಮಂಗಳವಾರದ ದಿವಸ ಶಿರಾಕ್ಕೆ ಹೋಗಿ

ನೋಡುತ್ತೇನೆ. ಅವನು 50 ಕುರಿಗಳನ್ನು ಒಡೆದುಕೊಂಡು ಬರುತ್ತಾನೆ. ವ್ಯಾಪಾರ ಮಾಡದೇ ದಲ್ಲಾಳಿ ಎರಡು ಕುರಿಗಳನ್ನು ತೆಗೆದುಕೊಂಡು ಬಿಡುತ್ತಾನೆ. ಅದನ್ನು ತೂಕ ಹಾಕುವ ವ್ಯವಸ್ಥೆ ನಮ್ಮಲ್ಲಿ ಇಲ್ಲ. Regulated Market Minister ಅವರೇ ತಾವು ಯೋಚನೆ ಮಾಡಿ. ಜೀವಂತವಿರುವ ಕುರಿಗಳನ್ನು ತೂಕ ಹಾಕುವಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಅದನ್ನು ಏಕೆ ತರಬಾರದು? ಇವತ್ತು retailನಲ್ಲಿ 220–250 ರೂಪಾಯಿಗೆ ಮಾಂಸವು ಮಾರಾಟವಾಗುತ್ತಿದ್ದರೆ, ಇವನಿಗೆ 100–120 ರೂಪಾಯಿ ಸಿಗುವುದಿಲ್ಲ ವೆನ್ನುವಾಗ ಅಲ್ಲಿ ರೈತರಿಗೆ ಏಕೆ ಲಾಭ ಮಾಡಿಕೊಡಬಾರದು? ಆಗ ಅವನಿಗೆ ಆ ಉದ್ಯಮದಲ್ಲಿ ಆಸೆ ಬರುವುದಕ್ಕೆ ಸಾಧ್ಯವಾಗುತ್ತದೆ. Liveನಲ್ಲಿ ತೂಕ ಹಾಕುವುದನ್ನು ಹೊಸದಾಗಿ introduce ಮಾಡಿ. ಅದರ ಮೇಲೆ ಮಾರಾಟ ವಾಗಲಿ, ಬೆಲೆ ಕಟ್ಟಲಿ. ಇವತ್ತು ಏನಾಗುತ್ತಿದೆಯೆಂದರೆ, ಯಾರೋ ಬರುತ್ತಾರೆ, ಇದರ ಬೆಲೆ ಎಷ್ಟು ಎಂದು ಕೇಳುತ್ತಾರೆ, ಸುಮ್ಮನೆ ಅದನ್ನು ನೋಡಿಬಿಟ್ಟು ಜೀವಂತವಾಗಿರುವುದಕ್ಕೆ ಬೆಲೆ ಕಟ್ಟುತ್ತಾರೆ. ಅದರಲ್ಲಿ ಮೋಸವಾಗುತ್ತದೆ. ಇಂತಹ ಮೋಸಗಳೆಲ್ಲವನ್ನೂ ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. Slaughtering ಮಾಡುವುದೂ ಕೂಡ ಇವತ್ತು hygienicಗಾಗಿ condition ಇಲ್ಲ. ಎಲ್ಲರೂ ಆರೋಗ್ಯದ ಬಗ್ಗೆ ಯೋಚನೆ ಮಾಡುತ್ತಾರೆ. ಇವತ್ತು ಹಂದಿ ಜ್ವರ ಬಂದಿತು ಎನ್ನುವ ಕಾರಣಕ್ಕೋಸ್ಕರ ಹಂದಿ ಮಾಂಸವನ್ನು ತಿನ್ನುವುದನ್ನು ಬಿಡುತ್ತಾರೆ. ಹಂದಿ ಮಾಂಸವನ್ನು ತಿಂದು ಕೊಂಡು ಜೀವನ ಮಾಡುವಂತಹ ಜನರಿದ್ದಾರೆ. ಈ ರೋಗಗಳಿಂದ ದೂರವಿರಬೇಕಾದಾಗ, ಸನ್ಮಾನ್ಯ ಮುಖ್ಯಮಂತ್ರಿಗಳೇ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಇಂತಹ ಉದ್ಯಮಗಳಿಗೆ ಕೆ.ಎಂ.ಎಫ್ ಮಾದರಿಯಲ್ಲಿ ಏನು ಹಾಲನ್ನು ಶೇಖರಣೆ ಮಾಡುವಂಥ ವ್ಯವಸ್ಥೆ ಇದೆ, ಅದೇ ಮಾದರಿಯಲ್ಲಿ ತರತಕ್ಕಂಥ ವ್ಯವಸ್ಥೆಯನ್ನು ಇಲ್ಲಿ ಮಾಡಿದರೆ ಬಹುಶಃ ನೀವು ರೈತರಿಗೆ ಏನು ಮಾಡಬೇಕೆಂದು ಆಸೆಪಟ್ಟಿದ್ದೀರಲ್ಲಾ ಅದನ್ನು ನಿಮ್ಮ ಅಧಿಕಾರಾವಧಿಯ ಸಂದರ್ಭದಲ್ಲೇ ಉತ್ತರವನ್ನು ನೋಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಇವತ್ತು ನಾವು diversify ಆಗಲೇ ಬೇಕು. ಆ Diversify ಆದಾಗ ಮಾತ್ರ ರೈತ ಬದುಕಲಿಕ್ಕೆ ಸಾಧ್ಯವಾಗುತ್ತದೆ. ರೈತರಿಗೆ ಎಲ್ಲೋ ಒಂದು ಕಡೆ ಲಾಭವಿದೆ ಎನ್ನುವ ವಿಚಾರವನ್ನು ಅವನಿಗೆ ತರದೇ ಇದ್ದರೆ ಖಂಡಿತವಾಗಿಯೂ ಈ ಕ್ಷೇತ್ರಕ್ಕೆ ಬರುವುದಕ್ಕೆ ಸಾಧ್ಯವಿಲ್ಲ.

ಅದರ ಜೊತೆಗೆ ಮೀನುಗಾರಿಕೆ, ಸಮುದ್ರ ಮೀನುಗಾರಿಕೆಗೆ ಬಹಳ ಬೇಡಿಕೆಯಿತ್ತು. ಕೆರೆ ಮೀನುಗಾರಿಕೆಗೆ ಬಹಳ ಬೇಡಿಕೆಯಿತ್ತು. ಇವತ್ತು in-land fishing ಎಂದು ಬಂದಿದೆ. ನೀವು ನಂಬುತ್ತೀರೋ, ಬಿಡುತ್ತೀರೋ, fresh water fishesಗೆ ಹೆಚ್ಚು demand ಇದೆ. Fish ವಿಚಾರ ನಿಮಗೆ ಅರ್ಥವಾಗುವುದಿಲ್ಲ. ನನ್ನ ಕ್ಷೇತ್ರದ ಪಕ್ಕದ ಹಿರಿಯೂರು ತಾಲ್ಲೂಕಿನಲ್ಲಿ ಒಬ್ಬರು ಮಾಡುತ್ತಿದ್ದಾರೆ. 1kg of fish is Rs.600.00 to Rs. 1000.00. It is different and he is exporting also. ಆ type of fishes ಇವತ್ತು ಇದೆ. Home industry ಆಗಿ, ಇದನ್ನು ಒಂದು ಉಪ ಕಸುಬಾಗಿ ರೈತರು ಮನೆಮನೆಯಲ್ಲಿ ಮಾಡತಕ್ಕಂಥ ಕೆಲಸವನ್ನು ಮಾಡಬಹುದು. ಯಾರ ಊರಿನಲ್ಲಿ ಬಾವಿಗಳಿಲ್ಲ, ಯಾರ ತೋಟದಲ್ಲಿ ಬಾವಿಗಳಿಲ್ಲ, ಬರೀ ಬಾವಿಗಳಲ್ಲಿ ಬಿಟ್ಟುಕೊಂಡು ಕೊನೆಪಕ್ಷ ಅವನಾದರೂ ಬದುಕಿ ಸುಖವಾಗಿರುವುದಕ್ಕೆ ಸಾಧ್ಯವಾಗುತ್ತದೆ ಅಲ್ಲವೇ? ಅಂಥದರ ಬಗ್ಗೆ ತಾವು ಏಕೆ ಯೋಚನೆ ಮಾಡಬಾರದು? ದಯಮಾಡಿ ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುವುದೇನೆಂದರೆ, ನಿಜವಾಗಿಯೂ ರೈತರ ಬಗ್ಗೆ, ಅವರ ವರಮಾನದ ಬಗ್ಗೆ ನಿಮಗೆ ಕಳಕಳಿ ಇದ್ದರೆ, ಖಂಡಿತವಾಗಿಯೂ ಕೆ.ಎಂ.ಎಫ್ ಮಾದರಿಯಲ್ಲಿ ಕುರಿ ಸಾಕಾಣಿಕೆಯನ್ನು, ಹಸುಗಳ ಸಾಕಾಣಿಕೆ ಯನ್ನು ಆ ವ್ಯಾಪ್ತಿಯಲ್ಲಿ ತಂದು ಅದು ಒಂದು ಲಾಭದಾಯಕವಾದ ಉದ್ಯಮವನ್ನಾಗಿ ಮಾಡಬೇಕು. ಕುರಿ ತುಪ್ಪಟ ಇದೆಯಲ್ಲಾ, ಆ ಉಣ್ಣೆಯನ್ನು ಸಹಿತ ನಮ್ಮಲ್ಲಿ ಯಾರೂ ಉಪಯೋಗಿಸುವುದಿಲ್ಲ. ನಮ್ಮಲ್ಲೆಲ್ಲಾ ಮೊದಲು ಕಂಬಳಿಗಳನ್ನು ಮಾಡುತ್ತಿದ್ದರು. ಈಗ ಕಂಬಳಿಗಳನ್ನು ಮಾಡುವುದನ್ನೆಲ್ಲಾ ಬಿಟ್ಟುಬಿಟ್ಟಿದ್ದಾರೆ. ಈಗ ವುಲ್ಲನ್ ರಗ್ಸ್ ಬಂದ ಮೇಲೆ ಕಂಬಳಿಗಳನ್ನು ಯಾರೂ ಉಪಯೋಗಿಸುವುದಿಲ್ಲ. ಬೆಳಗಾಂನಲ್ಲಿ ಅಧಿವೇಶನ ನಡೆದಂಥ ಸಂದರ್ಭದಲ್ಲಿ ನಾನು ಬೆಳಗಾಂನ ಹತ್ತಿರ ಒಂದು ಹಳ್ಳಿಗೆ ಕಂಬಳಿ ಮಾಡುತ್ತಿರುವುದನ್ನು ನೋಡಬೇಕೆಂದು ಹೋಗಿದ್ದೆ. ಅಲ್ಲಿ ನನಗೆ ನಿಜವಾಗಲೂ ಆಶ್ಚರ್ಯವಾಯಿತು. ಅವರು ನೇಯತಕ್ಕ ಕಂಬಳಿ ವುಲ್ಲನ್ ರಗ್ಸ್‌ಗಿಂತ ಏನೂ ಕಡಿಮೆ ಇಲ್ಲ. ಅಷ್ಟು soft ಆಗಿರುತ್ತದೆ. ನಾನು ಅವರನ್ನು ನಿಮಗೆ ಉಣ್ಣೆ ಎಲ್ಲಿಂದ ಬರುತ್ತದೆ ಎಂದು ಕೇಳಿದೆ. ಆಗ ಅವರು ನಾವು ಮಹಾರಾಷ್ಟ್ರದ ಗಡಿಯಿಂದ ಉಣ್ಣೆಯನ್ನು ತರಿಸುತ್ತೇವೆ. ನಮ್ಮ ಉಣ್ಣೆ ಜಾಸ್ತಿ ಉದ್ದವಿಲ್ಲ, ಹಾಗಾಗಿ ಅದನ್ನು ಮಿಕ್ಸ್ ಮಾಡಿ ಮಾಡುತ್ತಿದ್ದೇವೆಂದು

ಹೇಳಿದರು. ಅದಕ್ಕೆ costs ತಳಿಗಳನ್ನು ತಂದು ಆ ಉಣ್ಣೆಯನ್ನು improve ಮಾಡುವುದರ ಬಗ್ಗೆ ತಾವು ಏಕೆ ಯೋಚನೆ ಮಾಡಬಾರದು? ಇವೆಲ್ಲಾ ನೀವು ಯೋಚನೆ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕೆ.ಎಂ.ಎಫ್ ಮಾದರಿಯಲ್ಲಿ ಒಂದು ಸಂಸ್ಥೆಯನ್ನು ಹುಟ್ಟುಹಾಕಿ. ಅದಕ್ಕೆ ಒಂದು ಅರ್ಥ ಬರುತ್ತದೆ ಎನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ.

ಇನ್ನೊಂದು, ಬಹಳ ಮುಖ್ಯವಾಗಿ ರೈತರಲ್ಲಿ ಇವತ್ತು ಎಂದೋ ಒಂದು ರೀತಿಯಲ್ಲಿ ವ್ಯವಸಾಯದ ಬಗ್ಗೆ ಆಸಕ್ತಿ ಬರುವ ಹಾಗೆ ವಾತಾವರಣವನ್ನು ನಿರ್ಮಾಣ ಮಾಡಬೇಕು. ಬಹಳಷ್ಟು ಜನರಿಗೆ ಇದು ಲಾಭದಾಯಕವಲ್ಲ ಎನ್ನುವ ಕಾರಣಕ್ಕೋಸ್ಕರ. ಎಲ್ಲಿಯವರೆಗೂ ರೈತನಾಗಿರ ತಕ್ಕವನು ಉಪಕಸುಬನ್ನು ಇವತ್ತು ನಂಬುವುದಿಲ್ಲ, ಉಪಕಸುಬನ್ನು ಅಳವಡಿಸಿ ಕೊಳ್ಳುವುದಿಲ್ಲ ಅಲ್ಲಿಯವರೆಗೂ ಲಾಭದಾಯಕವಾಗುವುದಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಇನ್ನೊಂದು ಸಲಹೆಯನ್ನು ಕೊಡುತ್ತೇನೆ. ಬಹುಶಃ ಇವತ್ತು ನಮ್ಮ ದೇಶದಲ್ಲಿ 70% ವ್ಯವಸಾಯವನ್ನು ಮಾಡುತ್ತೇವೆ. 70% ವ್ಯವಸಾಯವನ್ನು ಮಾಡಿದರೂ ಕೂಡ ಇವತ್ತು ನಮಗೆ ತಿನ್ನುವುದಕ್ಕೆ ಆಹಾರಧಾನ್ಯಗಳು ಸಂಪೂರ್ಣವಾಗಿ ನಮ್ಮಲ್ಲಿ ಇಲ್ಲ. ನಾವು ಸ್ವಾವಲಂಬಿಗಳಾಗಿಲ್ಲ. ಹೊರ ದೇಶದ agriculture ಅನ್ನು ನಾವು ನೋಡುತ್ತಿದ್ದೇವೆ.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈಗ ಸಣ್ಣಪುಟ್ಟ ರೈತರಾಗಿರತಕ್ಕವರು ಯಾರು ವ್ಯವಸಾಯ ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು labour problem ಇದೆ. labour problem ಜೊತೆ ಇವತ್ತು input cost ಹೆಚ್ಚಾಗಿದೆ. ಗೊಬ್ಬರದ ಬೆಲೆ ಹೆಚ್ಚಾಗಿದೆ. ಅವನಿಗೆ ಏನು realization ಬರುತ್ತದೆ ಅದನ್ನು ಲೆಕ್ಕ ಹಾಕಿದರೆ, 5 ಎಕರೆ, 10 ಎಕರೆ ಇರುವವರು ಸಹ ಬದುಕಲು ಸಾಧ್ಯವಿಲ್ಲ. Small and Marginal farmers ಗಳಲ್ಲಿ 100 ಕ್ಕೆ 80 ರಷ್ಟು small holdings ಅವರು ಇದ್ದಾರೆ. ಅವರ ಉದ್ಯಮ ಕೃಷಿ ಇವತ್ತು ಲಾಭದಾಯಕವಾಗದೇ ಇದ್ದಾಗ, ಅವರು ಏನು ಮಾಡುತ್ತಾರೆ? ಉಪವಾಸ ಇರಬೇಕಾಗುತ್ತದೆ. ಇಲ್ಲವಾದರೆ BPL

ಪಟ್ಟಿಯಲ್ಲಿ ಕಾರ್ಡ್ ಕೊಡಿ ಎಂದು ಸಾಲಿನಲ್ಲಿ ನಿಲ್ಲುವಂಥ ಪರಿಸ್ಥಿತಿ ಬರುತ್ತದೆ. ಇವತ್ತು ರೈತರಿಗೆ ಈ ಪರಿಸ್ಥಿತಿ ಏಕೆ ಬಂದಿದೆ ಎಂದರೆ, ಇದೇ ಕಾರಣಕ್ಕೋಸ್ಕರ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. This is high time we should realize this position ನಾವು ಇದನ್ನು ಅರ್ಥ ಮಾಡಿಕೊಂಡು ಅವರಿಗೆ ಶಕ್ತಿ ಕೊಡದೇ ಇದ್ದರೆ, ಕೃಷಿಗೆ ಹೆಚ್ಚು ಸಬ್ಸಿಡಿ, ಪ್ರೋತ್ಸಾಹ ಕೊಡದೇ ಇದ್ದರೆ ಏನಾಗುತ್ತದೆ ಎಂದರೆ, ನಾಳೆ ಒಂದಲ್ಲ ಒಂದು ದಿವಸ corporate ವ್ಯವಸ್ಥೆಯಲ್ಲಿ ಹೋಗುತ್ತದೆ. ಇವತ್ತು ಅಮೇರಿಕಾದಲ್ಲಿ ಕೇವಲ 7% ಜನ ಮಾತ್ರ ವ್ಯವಸಾಯವನ್ನು ಮಾಡುತ್ತಿದ್ದಾರೆ. ನೀವು ಯಾವುದೇ ಹೊರದೇಶಕ್ಕೆ ಹೋದರೂ 7%, 10% ಮೇಲೆ ಇಲ್ಲ. ಬ್ರೆಜಿಲ್‌ನವರು ಕೂಡ ಕೃಷಿಯಲ್ಲಿ ಬಹಳಷ್ಟು ಕ್ರಾಂತಿಯನ್ನು ಮಾಡಿದ್ದಾರೆ. ಅವರದ್ದೂ 15%, 20% ಮೇಲೆ ಇಲ್ಲ. ಕಾರಣವೇನೆಂದರೆ, ಜಾಸ್ತಿ holdings ಆಗುತ್ತದೆ. ಕಂಪನಿಗಳು ಬರುತ್ತವೆ. ಕಂಪನಿಗಳು ಬಂದು ಕೃಷಿಯನ್ನು ಉತ್ಪಾದನೆ ಮಾಡುತ್ತಾರೆ. Rain Fed Irrigation ನಲ್ಲಿ ಅವರು ಮಾಡುವುದಿಲ್ಲ. ಅವರು balance sheet ನೋಡುತ್ತಾರೆ. ಲಾಭ ಲೆಕ್ಕ ಹಾಕುತ್ತಿರುತ್ತಾರೆ. ಇವತ್ತು corporate culture ಬಂದಾಗ, ಆಗ ಬೆಲೆಗಳನ್ನು dictate ಮಾಡುವುದಕ್ಕೆ ಹೋಗುತ್ತಾರೆ. ಬೆಲೆಗಳನ್ನು dictate ಮಾಡುವುದಕ್ಕೆ ಹೊರಟಾಗ, ಆ ಬೆಲೆಗಳನ್ನು ಕೊಟ್ಟು ನಮ್ಮ ದೇಶದ ಜನ ಬದುಕುವುದಕ್ಕೆ ಸಾಧ್ಯವಿಲ್ಲ. ಯಾವುದೇ ಒಂದು ರೀತಿಯಲ್ಲಿ ನಮ್ಮ ಜನ ಇವತ್ತು small holdingನಲ್ಲೇ ಬದುಕತಕ್ಕಂಥ, ವ್ಯವಸಾಯ ಮಾಡತಕ್ಕಂಥ, ಸ್ವಾವಲಂಬಿಗಳಾಗತಕ್ಕಂಥ ಪರ್ಯಾಯ ಮಾರ್ಗಗಳನ್ನು ರೈತರಿಗೆ ಕಲಿಸಿಕೊಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. Land Reforms Act ನಲ್ಲಿ ಎಲ್ಲೋ ಒಂದು ಕಡೆ relaxation ಬೇಕಾಗುತ್ತದೆ. ಸನ್ಮಾನ್ಯ ದೇವರಾಜ ಅರಸು ಅವರು ಇದ್ದಂಥ ಸಂದರ್ಭದಲ್ಲಿ ಎರಡು ಲಕ್ಷ ಎಂದು fix ಆಗಿತ್ತು, ಇವತ್ತು ಅದನ್ನು ತೆಗೆಯಿರಿ ಎಂದು ನಾನು ಹೇಳುತ್ತಿಲ್ಲ. ಆದರ limit ಅನ್ನು ಜಾಸ್ತಿ ಮಾಡಿ. ಎಲ್ಲೋ ಒಂದು ಕಡೆ ಒಬ್ಬ ನೌಕರನಾಗಿರತಕ್ಕಂಥವನು, ಒಬ್ಬ retried employ ಆಗಿರತಕ್ಕಂಥವನು ಅವನು ಜಮೀನನ್ನು ಕೊಂಡು, ಕೊನೆ ಪಕ್ಷ ಎರಡು ಎಕರೆ ಜಮೀನಿನಲ್ಲಿ ಉತ್ಪಾದನೆ

ಮಾಡತಕ್ಕಂಥ ಒಂದು ಸಾಮರ್ಥ್ಯ ಬರುವುದಕ್ಕೆ, ಅವಕಾಶ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣಕ್ಕೋಸ್ಕರ land reformsನ limit ಅನ್ನು ಜಾಸ್ತಿ ಮಾಡುವುದರ ಬಗ್ಗೆ ನೀವು ಯೋಚನೆ ಮಾಡುವುದು ಸೂಕ್ತವೆಂದು ನಾನು ಅಭಿಪ್ರಾಯಪಡುತ್ತೇನೆ. ಆ ಕಾರಣಕ್ಕೋಸ್ಕರ land reforms limit ಅನ್ನು raise ಮಾಡುವ ಕುರಿತು ನೀವು ಯೋಚಿಸುವುದು ಸೂಕ್ತವೆಂದು ನಾನು ಅಭಿಪ್ರಾಯಪಡುತ್ತೇನೆ. ಈಗ ಜನರಲ್ಲಿ ಆಂದೋಲನ ತರಬೇಕೆಂದು ನೀವು ಹೊರಟಿರಿ. ಮುಖ್ಯಮಂತ್ರಿಗಳಾದ ತಾವು ಸಾವಯವ ಕೃಷಿಯಲ್ಲಿ ಆಂದೋಲನ ತಂದಿದ್ದೀರಿ. ಆದರೆ, ನೀವು ಏನೇ ಮಾಡಿದರೂ ಅದು ರೈತರ ಪರವಾಗಿರುವ, ಕಳಕಳಿ ಇರುವ ಯೋಜನೆಗಳಾಗಬೇಕು. ನೀವು ಒಂದು ವರ್ಷಕ್ಕೆ ಬಜೆಟ್‌ನಲ್ಲಿ ನೂರು ಕೋಟಿ ರೂ. ಮೀಸಲಿಟ್ಟಿದ್ದೀರಿ. ಈ ಹಣ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ ಎಂಬುದನ್ನು ನಿಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ಒಂದೊಂದು ತಾಲ್ಲೂಕಿನಲ್ಲೂ ಸಂಸ್ಥೆ ರಚಿಸಿ, ಪ್ರತಿ ಹಳ್ಳಿಯಿಂದ ಒಬ್ಬ ರೈತರನ್ನು ಒಳಗೊಂಡಂತೆ ಒಟ್ಟು 300 ಸದಸ್ಯರನ್ನು ನೇಮಿಸಿದ್ದೀರಿ. 52.000 ಜನರು ಈಗಾಗಲೇ ಸಾವಯವ ಕೃಷಿಗೆ ಹೊಂದಿಕೊಂಡಿದ್ದಾರೆ ಮತ್ತು ಸಾಧನೆ ದೊಡ್ಡದಾಗಿದೆ ಎಂದು ಹೇಳಿದ್ದೀರಿ. ದಯಮಾಡಿ ಈ ಕುರಿತಂತೆ Third Party Enquiry ಮಾಡಿಸಬೇಕು. ಅಲ್ಲಿ ಏನಾಗುತ್ತಿದೆ ಎಂದರೆ, ನಾನು ಕೆಲವು ಸೊಸೈಟಿಗಳನ್ನು ನೋಡಿದ್ದೇನೆ. ನೀವು ರಾಜ್ಯ ಮಟ್ಟದಲ್ಲಿ ಡಾ: ಆನಂದ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೂ ರಚಿಸಿದ್ದೀರಿ. ಜಿಲ್ಲಾ ಮಟ್ಟದಲ್ಲೂ ಸಮಿತಿ ರಚಿಸಿದ್ದೀರಿ. ತಾಲ್ಲೂಕುಗಳಲ್ಲೂ ಸಹ ಒಂದೊಂದು ಹಳ್ಳಿಗೆ ಒಬ್ಬೊಬ್ಬರು ಒಳಗೊಂಡಂತೆ 300 ಸದಸ್ಯರ ಸಂಸ್ಥೆಗಳನ್ನು ಹುಟ್ಟು ಹಾಕಿದ್ದೀರಿ. ಇದು ರೈತರಿಗೆ ಸೇರಿರುವುದಾಗಿದೆ. ಅವರಿಗೆ ನಿರ್ದಿಷ್ಟ ಕಾರ್ಯಕ್ರಮ ಕೊಟ್ಟಿದ್ದೀರಿ. ಹಸಿರೆಲೆ ಗೊಬ್ಬರದ ಬೀಜ ವಿತರಿಸುವುದು. ಅಂದರೆ, ಸಾವಯವ ಗೊಬ್ಬರಕ್ಕೆ ಪೂರಕವಾಗಿರುವ ಚಟುವಟಿಕೆಗಳ ಕುರಿತಂತೆ ತಾವು ಹೇಳಿದ್ದೀರಿ. ಜೈವಿಕ ಗೊಬ್ಬರ ತಯಾರಿಸುವುದು, ತರಕಾರಿ ಬೆಳೆಗಳನ್ನು ಬೆಳೆಯುವುದು, ಕೃಷಿ ಹೊಂಡಗಳನ್ನು ಮಾಡುವುದು, ಇವೆಲ್ಲಾ ಚಟುವಟಿಕೆಗಳಾಗಿವೆ.

ನಿಮ್ಮ ಉದ್ದೇಶ ಒಳ್ಳೆಯದೇ ಆಗಿದೆ. ಆದರೆ, ಆಗುತ್ತಿರುವುದೇನೆಂದರೆ, ಅಲ್ಲಿ ಎಲ್ಲಿಯೋ ಒಂದು ಕಡೆ ಸಾಮಾಜಿಕ ನ್ಯಾಯ ಒದಗಿಸಿ ಕೊಡಬೇಕಾಗುತ್ತದೆ. ಮಾನ್ಯ ಈಶ್ವರಪ್ಪನವರೆ, 300 ಸದಸ್ಯರಿರುವ ಸಂಸ್ಥೆಯಲ್ಲಿ

ಯಾರ್ಯಾರು ಇದ್ದಾರೆಂಬುದನ್ನು ತಾವು ಯೋಚಿಸಬೇಕು. ಕರ್ನಾಟಕದಲ್ಲಿ ನೀವು ಇಷ್ಟೊಂದು ಸಂಘಗಳನ್ನು ರಚಿಸಿದ್ದೀರಲ್ಲ, ಯಾರಾದರೂ ಒಬ್ಬ ಹರಿಜನರಾದರೂ ನಿಮಗೆ ಸಿಕ್ಕಿದರೆ? ಯಾವೊಬ್ಬ ಹರಿಜರೂ ನಿಮ್ಮ ಕೈಗೆ ಸಿಗಲಿಲ್ಲವೇ? ಇತರೆ ಸಮುದಾಯದವರು ಯಾರೂ ಸಿಗಲಿಲ್ಲವೇ? ಅವರ್ಯಾರು ಕೃಷಿ ಮಾಡುತ್ತಿರುವವರಲ್ಲವೇ? ಕೃಷಿ ಬಗ್ಗೆ ಅಭಿಮಾನ ಇರುವವರಲ್ಲವೇ? ನಾನು ಕೆಲವು ಸಂಸ್ಥೆಗಳನ್ನು ನೋಡಿದ್ದೇನೆ. ಕೃಷಿ ಗೊತ್ತಿಲ್ಲದಿರುವವರೂ ಸದಸ್ಯರಾಗಿದ್ದಾರೆ! ಸಮಿತಿ ಅಧ್ಯಕ್ಷ (ಸಂಚಾಲಕರು)ರಿಗೆ 7,500 ರೂ. ಸಂಬಳ ಕೊಡುತ್ತೀರಿ, ಕಾರ್ಯದರ್ಶಿಗೆ 7.500 ರೂ., ಸಮಿತಿಯಲ್ಲಿರುವ 15 ಸದಸ್ಯರುಗಳಿಗೆ ತಲಾ 1.000 ರೂ. ಅಲ್ಲಿಗೆ ಹೆಚ್ಚು ಕಡಿಮೆ ಒಂದು ತಿಂಗಳಿಗೆ 3 ರಿಂದ 4 ಲಕ್ಷ ರೂ.ಗಳಷ್ಟು establishment charges ಆಗುತ್ತದೆ. ಆದರೆ, ಅವರುಗಳು ಮಾಡುತ್ತಿರುವ ಕೆಲಸಗಳಾದರೂ ಏನೆಂಬುದು ನಿಮಗೆ ಗೊತ್ತಿದೆಯೇ? ನಾನು ಕಣ್ಣಾರೆ ನೋಡಿದ್ದೇನೆ. ಹಳೆಯ ಕೃಷಿ ಹೊಂಡಗಳಿಗೆ ಸಂಬಂಧಿಸಿದಂತೆ ಅವರುಗಳು ಬಿಲ್‌ಗಳನ್ನು ಮಾಡುತ್ತಿದ್ದಾರೆ! ಹಳೆಯ ದನಗಳ ಕೊಟ್ಟಿಗೆ ಇರುತ್ತದಲ್ಲ, ಅದನ್ನು ನೋಡಿ ಬಿಲ್‌ಗಳನ್ನು ಮಾಡುತ್ತೀದ್ದಾರೆ. ನೀವು ಕೊಟ್ಟ 20 ಲಕ್ಷ ರೂ.ಗಳು ಮುಗಿದೇ ಹೋಯಿತು. ಚೆಕ್‌ಗೆ signing authority ಇರುವವರು ಸಮಿತಿಯ ಅಧ್ಯಕ್ಷರು. ಕೆಟ್ಟ ಭಾಷೆಯಲ್ಲಿ ಹೇಳಬೇಕೆಂದರೆ, ಆತ ಚೆಕ್‌ಗೆ ಸಹಿ ಹಾಕಲೇಬೇಕು. ಈ ತರಹವಾದರೆ ಕೃಷಿಯಲ್ಲಿ ಆಂದೋಲವಾಗುವುದಿಲ್ಲ. ನಿಮ್ಮ ಉದ್ದೇಶ ಒಳ್ಳೆಯದೇ. ಆದರೆ, implementationಗೆ ಎಲ್ಲಿಯೋ ಒಂದು ಕಡೆ counter check ಇಡಬೇಕಾಗುತ್ತದೆ. ಇದರ ಬಗ್ಗೆ ನೀವು ದಯಮಾಡಿ ಯೋಚಿಸಬೇಕು. ಇದು ಒಂದಲ್ಲ, ಸ್ವತಃ ನೋಡಿ. ಎಲ್ಲರೂ ಹಳೆಯ ಬಿಲ್‌ಗಳನ್ನು ಮಾಡಲು ಪ್ರಯತ್ನಿಸುತ್ತಿದ್ದಾರೆಯೇ ವಿನಾ ನೀವು ಕೊಟ್ಟಿರುವ ಒಂದೂ ಕಾರ್ಯಕ್ರಮಗಳು ಜಾರಿಯಾಗುತ್ತಿಲ್ಲ. ಇವರೆಲ್ಲರೂ ಯಾರು? ಎಲ್ಲಿಯೋ ಒಂದು ರೀತಿಯಲ್ಲಿ, ಯಾವುದೋ ಒಂದು ರೀತಿಯಲ್ಲಿ ಇವತ್ತು ಪಕ್ಷದ ಕಾರ್ಯಕರ್ತರನ್ನು accommodate ಮಾಡುವುದಕ್ಕೆ ಇದೊಂದು ಸಾಧನವಾಗುತ್ತದೆಂದು ನೀವು ತಿಳಿದರೆ ತಪ್ಪಾಗುತ್ತದೆ. ಇದರಲ್ಲಿ ಆ ಪಕ್ಷ ಈ ಪಕ್ಷ ಎಂಬುದಿಲ್ಲ. ಎಲ್ಲಾ ಪಕ್ಷಗಳವರನ್ನೂ ಸೇರಿಸಿ ಹೇಳಬೇಕಾಗುತ್ತದೆ. ಕೃಷಿ ಬಗ್ಗೆ, ಅಭಿವೃದ್ಧಿ ಬಗ್ಗೆ ಚಿಂತನೆ ಇರುವವರನ್ನು ಸೇರಿಸಿ ಸಮಿತಿಯೊಂದನ್ನು ರಚಿಸಿ. ಈ ರೀತಿ ಮಾಡಿದಲ್ಲಿ ಯಾವತ್ತೂ.

ಒಳ್ಳೆಯದಾಗುತ್ತದೆ. ಈಗಾಗಲೇ ನೀವು ಎರಡನೇ ವರ್ಷಕ್ಕೆ ಕಾಲಿರಿಸಿದ್ದೀರಿ. ಬಹಳಷ್ಟು ತಪ್ಪುಗಳಾಗುತ್ತಿದೆ. ಆ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಕೆಲಸವನ್ನು ನೀವು ಮಾಡಬೇಕು. ಕೌಂಟರ್ ಚೆಕ್ ಇಡಬೇಕಾಗುತ್ತದೆ. ಅವರು ಮಾಡಿರುವುದಕ್ಕೆ ಒಂದು balance sheet ಕೂಡ ಮಾಡಬೇಕಾಗುತ್ತದೆ. ಏತಕ್ಕೆ ಖರ್ಚು ಮಾಡಿದರು, ಏತಕ್ಕೆ ಕಟ್ಟಿದರು ಎಂಬುದನ್ನು ಆಡಿಟ್ ಮಾಡುವ ಕೆಲಸ ಮಾಡಬೇಕಾಗುತ್ತದೆ.

ಇನ್ನು ಸಾವಯವ ಕೃಷಿ ಕುರಿತಂತೆ ಹೇಳುವುದಾದರೆ, ಸಾವಯವ ಕೃಷಿ ಎಂದರೆ, ಅದಕ್ಕೆ ಎಲ್ಲಿಯೋ ಒಂದು ಕಡೆ promotion activityಯಾಗಿ ಸರ್ಕಾರ ಏಕೆ ಮಾಡಬಾರದು? ನಿಮ್ಮಲ್ಲಿ Compost Development Corporation ಎಂಬುದಿದೆ. ಇದಕ್ಕೂ ಹಿಂದೆ Agri Gold ಎಂದು ಕೋಳಿ ಕಸದಿಂದ ಗೊಬ್ಬರ ತಯಾರಿಸುತ್ತಿದ್ದರು. ನಾವು ಅಧಿಕಾರದಲ್ಲಿದ್ದಾಗ ಇದಕ್ಕೆ 2–3 ಕೋಟಿ ರೂ.ಗಳಷ್ಟು ಸಬ್ಸಿಡಿ ಕೊಡುತ್ತಿದ್ದೆವು ಮತ್ತು ಪ್ರಚಾರ ಕೂಡ ಮಾಡುತ್ತಿದ್ದೆವು. ಈಗ ನೀವು ಏಕೆ ಅದನ್ನು ನಿಲ್ಲಿಸಿಬಿಟ್ಟಿದ್ದೀರಿ? Agri Gold ನಿಂತು ಹೋಯಿತು. ನೀವು ಇದೊಂದು ರೀತಿಯಲ್ಲಿ ಸಬ್ಸಿಡಿ ಕೊಡುವ ಬದಲು ಸ್ವತಃ ನೀವೇ ಈ ರೀತಿಯಾಗಿ ಮಾಡಿ ಅದನ್ನು ರೈತರಿಗೆ ಕೊಡಿಸುವ ಕೆಲಸ ಮಾಡಬೇಕು. ಇದನ್ಯಾಕೆ ನೀವು ಮಾಡುವುದಕ್ಕಾಗಲಿಲ್ಲ? ಏಕೆ ನಿಂತು ಹೋಯಿತು? Compost Development Corporation ಕಡೆ ನೀವು ತಿರುಗಿ ನೋಡಿದ್ದೀರಾ? ಇವತ್ತು ನಿಮಗೆ ಉತ್ತಮ ರೀತಿಯಲ್ಲಿ ಮಾರ್ಗದರ್ಶನ ಮಾಡುವ ಅಧಿಕಾರಿಗಳಿದ್ದಾರೆ, ಕಾರ್ಯದರ್ಶಿಗಳಿದ್ದಾರೆ. ಅವರುಗಳ ಪ್ರಯೋಜನ ಪಡೆದುಕೊಳ್ಳುವ ಕೆಲಸವನ್ನು ದಯಮಾಡಿ ಮಾಡಬೇಕು. ಸರ್ಕಾರ ಒಂದು ಕಡೆ Agri Gold ಅನ್ನು revive ಮಾಡುವ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕೊಡುವ ಕೆಲಸ ಮಾಡಿದರೆ ನಿಮ್ಮ ವ್ಯಾಪ್ತಿಯನ್ನು ಸಾಕಷ್ಟು ರೀತಿಯಲ್ಲಿ....ಇವತ್ತು Sugarcance Factories ಇದೆ. ಅಲ್ಲಿಂದ ಬರುವ molasses wasteನಿಂದ ಗೊಬ್ಬರ ತಯಾರಿಸಲು ಸಾಧ್ಯವಿಲ್ಲ. ಈ ರೀತಿಯಾಗಿರುವ ಹೊಸ ವಿಚಾರಗಳನ್ನು ಚಿಂತನೆ ಮಾಡುವ ಕೆಲಸ ಮಾಡಬೇಕು. Compost Development Corporationಗೆ ದುಡ್ಡು ಕೊಟ್ಟು ಈ ರೀತಿಯಾದ ಕೆಲಸ ಮಾಡಬೇಕು. ಜನರಲ್ಲಿ ಆಂದೋಲನ

ಉಂಟು ಮಾಡುವುದರ ಜೊತೆಗೆ ಇಂತಹ ಒಂದು ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಬೇಕು.

ಇನ್ನೊಂದು ಬಹಳ ಮುಖ್ಯವಾಗಿರುವುದೇನೆಂದರೆ, ಸಾವಯವ ಕೃಷಿಗೆ ಈಗಾಗಲೇ ಎಂತಹ ಒತ್ತು ಬಂದಿದೆಯೆಂದರೆ, ಈ ವಿಚಾರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಸಾವಯವ ಕೃಷಿಗೆ ನೀವು ಕೊಟ್ಟಿರುವ ಒತ್ತು ಉದ್ದೇಶ ಏನೇ ಇರಲಿ, ಏನೇ ಆಗುತ್ತಿರಲಿ, ಇದೊಂದು ಒಳ್ಳೆಯ ಚಿಂತನೆಯಾಗಿದೆ. ಆದರೆ, ನೀವು ಅದನ್ನು ಸಾವಯವ ಕೃಷಿಗೆ ಬೆಂಗಳೂರಿನಲ್ಲಾಗಲಿ, ಮಹಾರಾಷ್ಟ್ರದಂತಹ ರಾಜ್ಯದಲ್ಲಿ ಸಾವಯವ ಕೃಷಿ ರಫ್ತಾಗುತ್ತಿದೆ. ರಫ್ತಾಗುತ್ತಿದೆ ಎಂದರೆ, ಇದಕ್ಕೆ ಎಷ್ಟು ಒತ್ತು ಇದೆಯೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ದೊಡ್ಡ ದೊಡ್ಡ ಖಾಸಗಿ ಕಂಪನಿಗಳಿವೆ. ದೊಡ್ಡ ದೊಡ್ಡ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಉತ್ಪಾದಿಸುತ್ತಿದ್ದಾರೆ. ಅವರು ಉತ್ಪಾದಿಸುವ ವಸ್ತುಗಳ ಗುಣಮಟ್ಟವನ್ನು ಪರಿಶೀಲಿಸಿ ಅವರಿಂದ ಖರೀದಿಸಿ ಕೊಡಿಸುವ ಕೆಲಸ ಮಾಡಬೇಕು. ಇಂತಹುದಕ್ಕೆ ಸಬ್ಸಿಡಿ ಕೊಡಿ. ಇವತ್ತು ಹಸಿರೆಲೆ ಗೊಬ್ಬರ ಇರಬಹುದು, ಎರೆಹುಳ ಗೊಬ್ಬರ ಇರಬಹುದು, ಯಾವುದೇ ರೀತಿಯ ಗೊಬ್ಬರ ಇರಬಹುದು, ಆ ಗೊಬ್ಬರವನ್ನು ಖಾಸಗಿ ಕಂಪನಿಗಳವರು ತಯಾರಿಸುತ್ತಿರುವುದಕ್ಕೆ ಸ್ಥಳೀಯವಾಗಿರುವವರೇ ಹೊರದೇಶಕ್ಕೆ ತೆಗೆದುಕೊಂಡು ಹೋಗಿ ಮಾರುತ್ತಿದ್ದಾರೆಂದರೆ, ಅಂತಹವರಿಗೆ ಪ್ರೋತ್ಸಾಹ ಕೊಡುವ ಕೆಲಸವನ್ನೂ ನೀವು ಮಾಡಬೇಕು.

ಇದನ್ನು ಮಾಡುವುದರ ಜೊತೆಗೆ ಆ ಕೆಲಸವನ್ನೂ ಮಾಡಿದರೆ ಶಾಶ್ವತವಾಗಿ ಸಹಾಯವಾಗುತ್ತದೆ. ಇದನ್ನು ಎಲ್ಲಿಯೋ ಒಂದು ಕಡೆ ಕಡ್ಡಾಯವಾಗಿ ಮಾಡಬೇಕು. ಇವತ್ತು ಗೊಬ್ಬರ ಏನಾಗಿದೆಯೆಂದರೆ, ಮಾನ್ಯ ರವೀಂದ್ರನಾಥ್‌ರವರೇ ನಾನು ನಿಮ್ಮನ್ನು ಕೇಳುತ್ತೇನೆ. ನಿಮ್ಮ ಊರಿನಲ್ಲಿ ಯಾವುದೇ ರೈತರನ್ನಾದರೂ ಕೇಳಿ. ಒಂದು ಎಕರೆ ಭತ್ತಕ್ಕೆ ಯಾವ್ಯಾವ ಗೊಬ್ಬರವನ್ನು ಯಾವ್ಯಾವ ಸಂದರ್ಭದಲ್ಲಿ ಎಷ್ಟು ಹಾಕಬೇಕೆಂಬುದನ್ನು ಕೇಳಿ. ಯಾವುದೇ ಒಬ್ಬ ರೈತ ಹೇಳಿದರೆ ನಾನು ಒಪ್ಪಿಕೊಂಡು ಬಿಡುತ್ತೇನೆ. ಒಬ್ಬ ರೈತನಿಗೂ ಎಷ್ಟು ಪ್ರಮಾಣದಲ್ಲಿ ಗೊಬ್ಬರ ಹಾಕಬೇಕೆಂಬುದು ಗೊತ್ತಿಲ್ಲ. ಇವತ್ತು ಅವಶ್ಯಕತೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರ ಹಾಕುವುದರ ಮುಖೇನ ಭೂಮಿ, ಪೈರು ಮತ್ತು ಫಸಲು ಹಾಳಾಗುತ್ತಿದೆಯಲ್ಲದೆ ಜೊತೆಗೆ ಅವರ ದುಡ್ಡು ಹಾಳಾಗುತ್ತದೆ. ಇದನ್ನು ತಪ್ಪಿಸಬೇಕೆಂದರೆ, ಅರ್ಧ ಭಾಗ

ಸಾವಯವ ಗೊಬ್ಬರ ಹಾಕಲಿ, ಅರ್ಧ ಭಾಗ ರಾಸಾಯನಿಕ ಗೊಬ್ಬರ ಹಾಕಲಿ. ಈ ರೀತಿಯಾದ ವ್ಯವಸ್ಥೆ ತರುವ ಕುರಿತಂತೆ ನೀವು ಯೋಚಿಸಿದರೆ ಇವತ್ತು ಭೂಮಿ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇದರಲ್ಲಿ ಇನ್ನೊಂದು ಬಹಳ ಮುಖ್ಯವಾಗಿರುವುದೇನೆಂದರೆ, nutrient management. ಮನುಷ್ಯನಿಗೆ ಯಾವ ರೀತಿ nutrient management ಬೇಕೋ, ಭೂಮಿಗೂ ಬೇಕು, ಸಸ್ಯಕ್ಕೂ ಬೇಕು. ನಿಮಗೆ ಬೇಕಾಗಿರವ micro nutrients ಇದೆ. zinc, Phoshoprus, Sulphur ಇರಬಹುದು, ಇವೆಲ್ಲವೂ ಪ್ರತಿಯೊಂದು ಗಿಡಕ್ಕೂ ಬೇಕಾಗುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಎಲ್ಲವೂ exhaust ಆಗಿಹೋಗಿದೆ. ಅದು ಯಾವತ್ತೂ ಭೂಮಿಗೆ ವಾಪಸ್ಸು ಹೋಗಲಿಲ್ಲ. ಅವು ಭೂಮಿಗೆ ನೇರವಾಗಿ ವಾಪಸ್ಸು ಹೋಗುವ ಕೆಲಸ ಮಾಡಬೇಕಾದಾಗ ಕೆಮಿಕಲ್ಸ್‌ಗಿಂತಲೂ ಹೆಚ್ಚಾಗಿ ಈ ಮಾರ್ಗದಲ್ಲಿ ಮಾಡಬೇಕಾಗುತ್ತದೆ. ಇವತ್ತು ನೀವು micro nutrient concept ಅನ್ನು develop ಮಾಡಿ. ಕಡ್ಡಾಯವಾಗಿ ಒಂದು ಎಕರೆಗೆ ಇಂತಿಷ್ಟು micro nutrients ಹಾಕಬೇಕೆನ್ನುವ ಒಂದು ಪದ್ಧತಿಯನ್ನು ಜಾರಿಗೆ ತನ್ನಿ. ಇದೆಲ್ಲ ಕ್ಕಿಂತಲೂ ಮುಂಚಿತವಾಗಿ ರೈತರಿಗೆ ಒಂದು ಹೊಸ ಪಾಠ ಹೇಳಿಕೊಡಬೇಕು. ಇವತ್ತು ರೈತ ಏನೇ ಬೆಳೆ ಬೆಳೆಯಬೇಕಾದರೂ, ಆತನ ಭೂಮಿಯಲ್ಲಿ ಏನು nutrients ಇದೆ. ಏನು ಕೊರತೆ ಇದೆ, ಅದನ್ನು ಯಾವ ರೀತಿ ಕಡಿಮೆ ಮಾಡಬೇಕೆಂಬುದರ ಬಗ್ಗೆ ಅವನಿಗೆ ಅರ್ಥವಾಗುವ ರೀತಿಯಲ್ಲಿ ತಾಲ್ಲೂಕಿನಲ್ಲಿ 5–6 laboratories ಸ್ಥಾಪಿಸಬೇಕು. ಅವನಿಗೆ ಪುಕ್ಕಟೆಯಾಗಿ ಅಲ್ಲದಿದ್ದರೂ nominal charges ವಿಧಿಸಬೇಕು. ಅವನ ಭೂಮಿಯಲ್ಲಿ ಏನೇನು deficiencies ಇದೆಯೆಂಬುದನ್ನು ರೈತನಿಗೆ ನೇರವಾಗಿ ತೋರಿಸಿ, ಅದರ ಆಧಾರದ ಮೇಲೆ ಇವತ್ತು ಗೊಬ್ಬರ ಹಾಕುವ ವಾತಾವರಣ ಸೃಷ್ಟಿಯಾಗಬೇಕು.

(5-00 PM)

ಆ ರೀತಿಯಾದ ಲ್ಯಾಬರೇಟರಿಗಳನ್ನು ಹೆಚ್ಚಿಗೆ ಮಾಡಿ. ಇವತ್ತು ನೀವೇ ದೊಡ್ಡ ರೈತರಿರಬಹುದು. ನಿಮ್ಮ ಭೂಮಿಯಲ್ಲಿ ಏನು nutrients ಇದೆ ಏನು deficiency ಇದೆ ಎಂದು ನಿಮಗೆ ಗೊತ್ತಿದೆಯಾ? ನಿಮ್ಮ ಮಕ್ಕಳಿಗೆ ಗೊತ್ತಿದೆಯಾ, ಯಾರಿಗಾದರೂ ಗೊತ್ತಿದೆಯಾ? ಯಾರಿಗೂ

ಗೊತ್ತಿಲ್ಲ. ಮಕ್ಕಿಕಾ ಮಕ್ಕಿ ಹಾಕುತ್ತಾರೆ. NPK ತಂದು ಇಷ್ಟು ಕೆ.ಜಿ. ಹಾಕು, ಅಷ್ಟು ಕೆ.ಜಿ. ಹಾಕು ಬರುತ್ತದೆ ಎಂದು ಹಾಕುತ್ತಾರೆ. ಇದು ತಪ್ಪು. ಆ ರೀತಿಯಾಗಿ scientific ಆಗಿ ಫರ್ಟಿಲೈಸರ್ಸ್‌ನ್ನು ಹಾಕದೆ ಇದ್ದರೆ ಭೂಮಿ ಹಾಳಾಗುತ್ತದೆ. ರೈತರಿಗೆ ಲಾಭ ಆಗುವುದಿಲ್ಲ. ಮನುಷ್ಯನ ಆರೋಗ್ಯವಂತೂ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಎಲ್ಲೋ ಒಂದು ಕಡೆಗೆ ಒಂದು granulation ಎಂದು ಹೇಳಿ nutrient management ಗೋಸ್ಕರ region specific ಆಗಿ, crop specific ಆಗಿರತಕ್ಕಂತಹ application of manures ಏನಿದೆಯಲ್ಲ, ಆ ರೀತಿಯಾದ concept ಗಳನ್ನು ಹೆಚ್ಚು develop ಮಾಡಿ. ಪ್ರೋತ್ಸಾಹ ಮಾಡಿ, ನಾವು ಏನು ಈಗ complex ಮೇಲೆ depend ಆಗಿದ್ದೇವೆ. ನಮ್ಮ ರೈತರು ನಮಗೆ NPK 70 ಇದ್ದರೆ ಮಾತ್ರ ನಮ್ಮ ಬೆಳೆ ಬರುತ್ತದೆ, ಇಲ್ಲದಿದ್ದರೆ ಬೆಳೆ ಬರುವುದಿಲ್ಲವೆಂದು ತಪ್ಪು ಕಲ್ಪನೆ ಇಟ್ಟುಕೊಂಡಿದ್ದಾರಲ್ಲ ಅದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ಆ ಕೆಲಸವನ್ನು ಮಾಡಿ. ಇವತ್ತು ಕೃಷಿಗೆ ಹೆಚ್ಚಿನ ಪ್ರಚಾರವನ್ನು ಕೊಡಬೇಕಾಗುತ್ತದೆ. ಇವತ್ತು ಪ್ರಚಾರವನ್ನು ಕೊಡಬೇಕಾದಾಗ ಮಾಧ್ಯಮ ಗಳಲ್ಲಿ ಸಾಕಷ್ಟು ರೀತಿಯಲ್ಲಿ ಪ್ರಚಾರ ಮಾಡುವುದರ ಜೊತೆಗೆ ಎಲ್ಲೋ ಒಂದು ಕಡೆ ರೈತರ ಮುಖೇನ ಕೂಡ ಹೆಚ್ಚು ಪ್ರಚಾರ ಆಗತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಆ ರೀತಿಯಾದ organization ಅನ್ನು ಮಾಡಿ ಪ್ರಗತಿ ಪರ ರೈತರನ್ನು ಕೃಷಿ ಸಂಪರ್ಕ ಕೇಂದ್ರಗಳಲ್ಲಿ identify ಮಾಡಿ ಅವರ ಜೊತೆ ಮೀಟಿಂಗ್‌ಗಳನ್ನು ಮಾಡಿ ಹೆಚ್ಚು ಪ್ರಚಾರ ಆಗತಕ್ಕಂತಹ ರೀತಿಯಲ್ಲಿ ಕೆಲಸ ಮಾಡಬೇಕೆನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ಅನೇಕ ವಿಚಾರಗಳು ಕೃಷಿ ಬಗ್ಗೆ ಹೇಳುವುದಿದೆ. ರೈತ ಇವತ್ತು ಏಕೆ ಕಂಗಾಲಾಗಿದ್ದಾನೆ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ನನ್ನ ಕ್ಷೇತ್ರದಲ್ಲಿ ಕಳೆದ ಒಂದು ತಿಂಗಳಿನಿಂದ ಆರು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆರು ಜನರಲ್ಲಿ ನಾವು ಇಬ್ಬರಿಗೆ ಚೆಕ್ ಕೊಟ್ಟಿದ್ದೇವೆ, ಇನ್ನು ನಾಲ್ಕು ಜನರಿಗೆ ಚೆಕ್ ಕೊಡಬೇಕಾಗಿದೆ. ಪ್ರಾರಂಭದಲ್ಲಿಯೇ ಹೀಗೆ ಆಯಿತು ಎಂದರೆ, ಮುಂದೆ ಏನಾಗುತ್ತದೆ? ರೈತನನ್ನು ಯಾವ ರೀತಿ ನಾವು ಸಬಲನನ್ನಾಗಿ ಮಾಡುವುದು? ನಮ್ಮಲ್ಲಿ minimum support price ಇದೆ. minimum support price ಎಂದರೆ

ನಾವು ಏನು ತಿಳಿದುಕೊಂಡಿದ್ದೇವೆಂದರೆ, ಯಾವಾಗಲೂ ಭಾರತ ಸರ್ಕಾರದಿಂದ ಬರುವುದು ಸ್ವಲ್ಪ ತಡವಾಗುಬಹುದು. ಫಿಕ್ಸ್ ಮಾಡತಕ್ಕಂತಹವರು ಅವರು. ನೀವು ಸೀಸನ್‌ಗಿಂತ ಮೊದಲೇ minimum support price ಏನು ಎನ್ನುವುದನ್ನು ಫಿಕ್ಸ್ ಮಾಡಬೇಕು. ಫಿಕ್ಸ್ ಮಾಡುವುದರ ಜೊತೆಗೆ ರೆಗ್ಯುಲೇಟೆಡ್ ಮಾರ್ಕೆಟ್ ಮುಖೇನ ಕೊಳ್ಳುವಂತಹ ವಾತಾವರಣ ನಿರ್ಮಾಣವಾಗಬೇಕು. ನಿಮಗೆ ಕ್ವಾಲಿಟಿ ಯಾವ ರೀತಿಯಾಗಿ ಬೇಕು, FAQ ಎಂದು ಹೇಳುತ್ತೀರಲ್ಲ ಅದಕ್ಕೆ ರೈತರಿಗೆ ಈ ರೀತಿಯಾಗಿ ಬೆಳೆ ಬರಬೇಕೆಂದು ಪ್ರಚಾರ ಮಾಡಬೇಕು. ನಿಮಗೆ ಸೀಸನ್ ಪ್ರಾರಂಭವಾಗುವುದಕ್ಕಿಂತ ಮುಂಚೆ ಭತ್ತ IR 8 ಈ ರೇಟು, ಸೋನ ಮಸೂರಿ ಈ ರೇಟು, ನಾವು ಈ ರೀತಿಯಾಗಿ ಕ್ವಾಲಿಟಿ ಇರಬೇಕು, ಇಷ್ಟು ಒಣಗಿರಬೇಕು, ಇಷ್ಟು ತೇವಾಂಶ ಇರಬೇಕು ಎನ್ನುವುದನ್ನು ನೀವು ಪಾಂಪ್ಲೆಟ್ ಮಾಡಿ ರೆಗ್ಯುಲೇಟೆಡ್ ಮಾರುಕಟ್ಟೆಯಿಂದ ಹಂಚುವುದಾದರೆ, ರೈತ ಏಕೆ ಮೋಸ ಹೋಗುತ್ತಾನೆ? ನಾನು ಒಂದು ಮಾತನ್ನು ಹೇಳುತ್ತೇನೆ, ಒಂದು ವರ್ಷದಲ್ಲಿ ಪ್ರತಿ ಸಂತೆ ದಿವಸ ನಾನು ಮಾರುಕಟ್ಟೆಗೆ ಹೋಗುತ್ತೇನೆ. ರೈತರನ್ನು ವರ್ತಕರನ್ನು ಕೂರಿಸಿ ಮಾತನಾಡುತ್ತೇನೆ. ವರ್ತಕರನ್ನು ಮನವೊಲಿಸುವಂತಹ ಕೆಲಸವನ್ನು ಮಾಡುತ್ತೇನೆ. ಆದರೆ ಯಾವತ್ತೂ ಕೂಡ, ಯಾವುದೋ ಒಂದು ಸಂದರ್ಭದಲ್ಲಿ ಸೋನ ಮಸೂರಿ ಬಿಟ್ಟರೆ, ಬೇರೆ ಯಾವ ವಿಚಾರದಲ್ಲಿಯೂ ಕೂಡ ಇವತ್ತು MSP ಗೆ ಭತ್ತ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಕೇವಲ 600 ರಿಂದ 700 ರೂ. ಕೊಡುತ್ತಾರೆ. ಲೋಕಲ್‌ನಲ್ಲಿರುವವರು ನಾಲಕ್ಕು ಜನ ಮಿಲ್‌ನವರು ಬಂದು ಕೊಂಡುಕೊಳ್ಳುತ್ತಾರೆ. ದಾವಣಗೆರೆಯವಂತಹವರು ದೊಡ್ಡ ದೊಡ್ಡ ವರ್ತಕರು ಬನ್ನಿ ಎಂದರೆ, ಲೋಕಲ್‌ನವರು ಗಲಾಟೆ ಮಾಡುತ್ತಾರೆಂದು ಬರುವುದಿಲ್ಲ ಅವರು. ಇದು ರೆಗ್ಯುಲೇಟೆಡ್ ಮಾರುಕಟ್ಟೆಯಲ್ಲಿ ಆಗುತ್ತಿರುವುದು. ರೆಗ್ಯುಲೇಟೆಡ್ ಮಾರುಕಟ್ಟೆಯಲ್ಲಿ ಆಗುತ್ತಿರುವಂತಹ ಮೋಸದಿಂದ ರೈತನ ಕೊಲೆ ಆಗುತ್ತಿದೆ. ನಿಜವಾಗಿ ರೈತರ ಕಷ್ಟ ಏನೆಂದು ನಿಮಗೆ ಅರ್ಥವಾಗಬೇಕಾದರೆ, ರೆಗ್ಯುಲೇಟೆಡ್ ಮಾರುಕಟ್ಟೆಗೆ ಬರುವಾಗ ಅವನು ಎಷ್ಟು ನಗು ನಗುತ್ತಾ ಬರುತ್ತಾನೆ, ಆದರೆ ಅವನಿಗೆ ಬೆಲೆ ಸಿಕ್ಕಿ, ಬೆಲೆ ತೀರ್ಮಾನವಾಗಿ, ಅವನ ಸಾಲ ಎಲ್ಲಾ ಮುರಿದುಕೊಂಡು ವಾಪಸ್ ಬಸ್ ಛಾರ್ಜ್‌ಗೆ ದುಡ್ಡು ತೆಗೆದುಕೊಂಡು ಹೋಗುವಾಗ ಅವನ ಕತೆ ನೋಡಬೇಕು. ಯಾಕಪ್ಪ ಈ ಕೃಷಿ ಮಾಡಬೇಕೆಂದು ನಮಗೆ ಅನ್ನಿಸುತ್ತದೆ. ಇಂತಹ

ಪರಿಸ್ಥಿತಿಯಲ್ಲಿ ರೈತರು ಇರುವಾಗ ದಯಮಾಡಿ ಯೋಚನೆ ಮಾಡಿ, minimum support price ಇವತ್ತು ನೀವು ಬಜೆಟ್ ಭಾಷಣದಲ್ಲಿ ಹೇಳಿದಿರಿ 300 ಕೋಟಿ, 500 ಕೋಟಿ ರೂ. ಕೊಡುತ್ತೇವೆಂದು ಲೆಕ್ಕ ಪತ್ರ ಇಲ್ಲದೆ ಹೇಳಿದ್ದೀರಿ. ಆದರೆ ಎಲ್ಲಿ ನೀವು ನಿಜವಾಗಿ MSP ಇಟ್ಟುಕೊಂಡು ಪರ್ಚೇಸ್ ಮಾಡತಕ್ಕಂತಹ ಕೆಲಸ ಮಾಡಿದ್ದೀರಿ? MSP ಯನ್ನು ನೀವು ಅಡ್‌ಹಾಕ್ ಆಗಿ ಮಾಡಬೇಕು. ನೀವು ಮಾಡಿದ ಪರ್ಚೇಸ್‌ನ ಎಂಟೈರ್ ಮನಿ Government of India ದವರು ಇವತ್ತು reimburse ಮಾಡುತ್ತಾರೆ. ಏಕೆ ನೀವು ಮಾಡಬಾರದು? FAQ ಬಗ್ಗೆ ಏಕೆ ಪ್ರಚಾರ ಕೊಡಬಾರದು? ಈ ಕೆಲಸ ಏನಾದರೂ ಆಗುತ್ತಿದೆಯಾ? ಯಾವುದಾದರೂ ಒಂದು ಮಾರುಕಟ್ಟೆ ಯಲ್ಲಿ ಒಬ್ಬ ರೈತ ನನಗೆ ಭತ್ತಕ್ಕೆ 850 ರೂ. ಫಿಕ್ಸ್ ಮಾಡಿದರೆ, 800 ರೂ. ಸಿಕ್ಕಿತು ಎಂದು ಯಾರಾದರೂ ಒಬ್ಬ ರೈತ ಹೇಳುತ್ತಾನಾ? ಸೋನ ಮಸೂರಿ ಬಿಟ್ಟರೆ ಇನ್ನು ಯಾವುದಕ್ಕೂ ಸಿಗುತ್ತಿಲ್ಲ. ಅಂದಾಗ ಅನಿವಾರ್ಯವಾಗಿ ಸೋನ ಮಸೂರಿಗೆ ಹೋಗುವುದಾ? ಬೇರೆ ಬೇರೆ ತಳಿಗಳು ಏನಾಗಬೇಕು? ಹೈಬ್ರಿಡ್ ವೆರೈಟಿಗಳು ಏನಾಗಬೇಕು? ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ ರೆಗ್ಯುಲೇಟರ್ ಮಾರ್ಕೆಟ್‌ನವರೂ ನೀವೂ ಕುಳಿತು ಯೋಚನೆ ಮಾಡಿ. ಕೃಷಿ ಬಿಟ್ಟು ರೆಗ್ಯುಲೇಟೆಡ್ ಮಾರ್ಕೆಟ್ ಇಲ್ಲ, ಅದು ಬಿಟ್ಟು ನೀವಿಲ್ಲ. ನೀವು ಅದನ್ನು ಪೂರ್ಣ ಯೋಚನೆ ಮಾಡತಕ್ಕಂತಹ ಕೆಲಸವನ್ನು ಮಾಡಿದರೆ ಮಾತ್ರ ರೈತರ ಮಟ್ಟಿಗೆ ಸ್ವಲ್ಪ ಸಹಾಯ ಆಗುವುದಕ್ಕೆ ಸಾಧ್ಯವಾಗುತ್ತದೆ. ಪ್ರೈಸ್ ಕಮಿಷನ್ ಎಂದು ಡಾ: ಬಿಸಲಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದೆವು ನಾವು. ಯಾವ ಬೆಳೆಗೆ ಎಷ್ಟು ಬೆಲೆ ಕೊಡಬೇಕು, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾದಾಗ, ನಾವು ಹೋದಾಗ ಕೇಳುತ್ತಿದ್ದರು, ನೀವು ರಾಗಿಗೆ MSP ಕೇಳುತ್ತೀರಿ, what data is there? ಆ ಡೇಟಾ ಕೊಡಬೇಕಾದಾಗ ಒಂದು ಕಮಿಷನ್‌ನನ್ನು ಅಪಾಯಿಂಟ್ ಮಾಡಿ. ಕಮಿಷನ್ ಆಧಾರದ ಮೇಲೆ ಇವತ್ತು ರಾಗಿಗೆ ದರ ಹೆಚ್ಚಿಗೆ ಮಾಡಿಸುವುದಕ್ಕೆ ಸಾಧ್ಯವಾಯಿತು. ಇವತ್ತು ನೀವು ಕಮಿಷನ್‌ನ್ನು ರಿವ್ಯೆವ್ ಮಾಡಿದ್ದೀರಾ? ಕಮಿಷನ್‌ಗೆ ಏನಾದರೂ ಟಾರ್ಗೆಟ್ ಕೊಟ್ಟಿದ್ದೀರಾ? ಎಂಥದ್ದೂ ಇಲ್ಲ. ಅದನ್ನು ಮಾಡಿ. ಒಂದೇ ತಿಂಗಳು ಕೆಲಸ ಮಾಡಲಿ, ಎರಡೇ ತಿಂಗಳು ಕೆಲಸ ಮಾಡಲಿ, ಅದನ್ನು ರಿವ್ಯೆವ್ ಮಾಡಿ. ರಿವ್ಯೆವ್ ಮಾಡತಕ್ಕಂತಹ ಕೆಲಸವನ್ನು ಮಾಡಿದರೆ ಆಗ ಅದಕ್ಕೆ ಒಂದು ಅರ್ಥ ಬರುತ್ತದೆ. ನಾನು ಒಂದು ಮಾತು

ಹೇಳತಕ್ಕಂಥದ್ದು, ದಯಮಾಡಿ Yield per acre, we are very low. Yield per acre increase ಮಾಡಬೇಕಾದಾಗ ಒಂದು ಕಡೆ ನೀವು ಹೈಬ್ರಿಡೈಸೇಷನ್ ಕಡೆಗೆ ಹೋಗಬೇಕು. ಇನ್ನೊಂದು ಕಡೆಗೆ ಏನು ಮಾಡಬೇಕಾಗುತ್ತದೆ, ಹೈಬ್ರಿಡೈಸೇಷನ್ ಇಲ್ಲ ಎಂದ ಹೇಳಿದಾಗ ಯಾವ ಯಾವ ರೀಜನ್‌ನಲ್ಲಿ ಯಾವ ಯಾವ ಬೆಳೆಗಳಿಗೆ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಒಳ್ಳೆಯ ಈಲ್ಡ್ ಬರುತ್ತದೆ ಎನ್ನತಕ್ಕಂಥದ್ದನ್ನು identify ಮಾಡಬೇಕು. ಉದಾಹರಣೆಗೆ ಶಿಕಾರಿಪುರದಲ್ಲಿ ದಾವಣಗೆರೆಯಲ್ಲಿ ಭಾರೀ ಭತ್ತ ಬೆಳೆಯುತ್ತಿದ್ದರು. ಈಗ ಎಲ್ಲರೂ ಮೆಕ್ಕೆ ಜೋಳಕ್ಕೆ ಹೋಗಿದ್ದಾರೆ. ಶಿಕಾರಿಪುರದಿಂದ ಹಿಡಿದು ದಾವಣಗೆರೆಯವರೆಗೂ ಎಲ್ಲರೂ ಮೆಕ್ಕೆ ಜೋಳಕ್ಕೆ ಹೋಗುತ್ತಿದ್ದಾರೆ. ಏಕೆಂದರೆ, ಇವತ್ತು ಅವರಿಗೆ 40 ರಿಂದ 50 ಕ್ವಿಂಟಾಲ್‌ವರೆಗೆ ಈಲ್ಡ್ ಬರುತ್ತಿದೆ. ಅಂದರೆ ಅದು ಲಾಭದಾಯಕವಾಗಿದೆ. ಆ ರೀತಿಯಾಗಿರತಕ್ಕಂತಹ ಈಲ್ಡ್ ಎಲ್ಲಿ advantage ಇದೆ, advatage ಗೆ ತಕ್ಕನಾಗಿ crops specify ಮಾಡತಕ್ಕಂತಹ ಕೆಲಸವನ್ನು ಮಾಡಿ. crop plan ನಿಂದ ರೆಗ್ಯುಲೇಟ್ ಮಾಡತಕ್ಕಂತಹ ಕೆಲಸವನ್ನು ಮಾಡಿ. ಅದನ್ನೆಲ್ಲಾ ಮಾಡುವುದಕ್ಕೆ ನೀವು ಒಂದು ಕೃಷಿ ಕಮಿಷನ್‌ನನ್ನು ಮಾಡಿದಿರಿ. ನಾನು ಏನೋ ಬಹಳ ನಿರೀಕ್ಷೆ ಮಾಡಿದ್ದೆ. S.A. ಪಾಟೀಲರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಒಳ್ಳೆಯ ಸಲಹೆಗಳನ್ನು ಕೊಡುತ್ತಾರೆಂದು. ಒಳ್ಳೆಯ ವೈಸ್ ಛಾನ್ಸಲರ್ ಅವರು. ರೈತರ ಬಗ್ಗೆ ಕಾಳಜಿ ಇದೆ. ಉತ್ತರ ಕರ್ನಾಟಕ ಭಾಗದವರು ಆ ಭಾಗದ ಜನರ ಜೀವನ ರೈತರ ನಾಡಿಯನ್ನು ಅರಿತಿರತಕ್ಕಂಥವರು. ಆದರೆ ಆ ಯಾವ ವರದಿಯಗಳೂ ಕೂಡ ಈಚೆ ಬರಲಿಲ್ಲ. ನಿಮ್ಮ ಬಿಜೆಟ್ ಬಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಮಿಷನ್ ಮಾಡುತ್ತೇವೆಂದು ಹೇಳಿದಿರಿ, ಆ ಮೇಲೆ ಎಸ್.ಎ.ಪಾಟೀಲರ ಅಧ್ಯಕ್ಷತೆಯಲ್ಲಿ ಮಾಡಿದಿರಿ. ಪರವಾಗಿಲ್ಲ ಏನೋ ಆಗುತ್ತದೆ ಎಂದರೆ ಇದುವರೆಗೂ ಯಾವ ವರದಿ ಕೂಡ ಬರಲಿಲ್ಲ. ಏಕೆ ಬರಲಿಲ್ಲ? ಇವತ್ತು ಈ ರೀತಿಯಾದ ಹೊಸ ಹೊಸ ಅವಿಷ್ಕಾರಗಳ ಬಗ್ಗೆ ಈ ರೀತಿಯಾದ ಕಮಿಷನ್‌ಗಳನ್ನು ಮಾಡಿ ಅವರ ಸಲಹೆಯನ್ನು ಪಡೆಯಬೇಕಾಗುತ್ತದೆ. ನಾವು ಹಿಂದೆ ಡಾ: ಸ್ವಾಮಿನಾಥ್ ಎನ್ನುವವರನ್ನು ಕರೆದುಕೊಂಡು ಬಂದು ಧಾರವಾಡದಲ್ಲಿ ಆಗ್ರೋ ಸಮ್ಮಿಟ್ ಎನ್ನತಕ್ಕಂಥದ್ದನ್ನು ಮಾಡಿದ್ದೆವು. ಡಾ: ದ್ವಾರಕಿನಾಥ್ ಎಂಬ ರಿಟೈರ್ಡ್ ವೈಸ್ ಛಾನ್ಸಲರ್‌ರವರನ್ನು

ಅಪಾಯಿಂಟ್ ಮಾಡಿ ಕೃಷಿಯಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕಾದರೆ ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ನಿರ್ದಿಷ್ಟವಾದ ಅಜೆಂಡಾ ಕೂಡ ಕೊಟ್ಟಿದ್ದೆವು. ಅವರು ರೆಕಮಂಡೇಷನ್ಸ್ ಕೊಟ್ಟರು ಆ ರೆಕಮಂಡೇಷನ್ಸ್ ಮೇಲೆ ನಾವು ಇವತ್ತು implement ಮಾಡಿದ್ದೇವೆ. ಅದರಲ್ಲಿ ಹೈಬ್ರಿಡ್ ರೈಸ್ ಕೂಡ ಒಂದು. ಆದರೆ ಹೈಬ್ರಿಡ್ ರೈಸನ್ನು ಇವತ್ತು ಏನು ಮಾಡಿದಿರಿ, ಒಂದು ಕಾಲದಲ್ಲಿ ರೆಕಮಂಡೇಷನ್ಸ್ ಕೊಟ್ಟರು, ರೆಕಮಂಡೇಷನ್ ಸ್ವಲ್ಪ ದಿವಸ implement ಆಯಿತು ಅಲ್ಲಿಗೆ ಹೊರಟು ಹೋಯಿತು. ಈಗ ಇನ್ನೊಂದು ಹೊಸ ಕೃಷಿ ಮಿಷನ್ ಬಂದಿದೆ. ಇದು continues ಆಗಿರತಕ್ಕಂತಹ ರೀತಿಯಲ್ಲಿ ಮಾಡಿದಾಗ ಮಾತ್ರ ಅದಕ್ಕೆ ಒಂದು ಅರ್ಥ ಬರುತ್ತದೆ, ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಮುಖ್ಯವಾದ ಅಂಶ ಎಂದರೆ, ರೆಗ್ಯುಲೇಟೆಡ್ ಮಾರುಕಟ್ಟೆಯಲ್ಲಿ ರೈತ ಬಂದಂತಹ ಸಂದರ್ಭದಲ್ಲಿ ಅದನ್ನು ಕೊಂಡು ವಾಪಸ್ ಕೊಡತಕ್ಕಂತಹ ಶಕ್ತಿಯನ್ನು ಮಾರುಕಟ್ಟೆ ಕಮಿಟಿಗಳಿಗೆ ಕೊಡಿ. MSP ಗಿಂತ ಕಡಿಮೆ ಬಂದಂತಹ ಸಂದರ್ಭದಲ್ಲಿ ವಾಪಸ್ ಕೊಳ್ಳುತ್ತಾರೆ ಎಂದು ಗೊತ್ತಾದರೆ, ಮಧ್ಯವರ್ತಿಗಳಾಗಿರತಕ್ಕಂತಹ ವರ್ತಕರು ರೈತರಿಗೆ ಮೋಸ ಮಾಡುವುದಿಲ್ಲ. ಇಲ್ಲವೆಂದರೆ ಮೋಸ ಎನ್ನುವುದು ಕಟ್ಟಿಟ್ಟ ಬುತ್ತಿ. ಒಬ್ಬ ಶಾಸಕನಾಗಿರ ತಕ್ಕಂಥವನು ಪ್ರತಿನಿತ್ಯ ಒಬ್ಬ ವರ್ತಕನಿಗೆ ಮಾನಿಟರ್ ಮಾಡುವುದಕ್ಕಾ ಗುವುದಿಲ್ಲ. ಈ ಕಷ್ಟಗಳೆಲ್ಲವೂ ಕೂಡ ಇದೆ. ಎಲ್ಲೋ ಒಂದು ಕಡೆ buy back ಮಾಡತಕ್ಕಂತಹ ಒಂದು ರೀತಿಯಲ್ಲಿ ನೀವು ಮಾಡಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಟೆಕ್ನಾಲಜೀಸ್ ಹೊಸ ಹೊಸ ಅವಿಷ್ಕಾರಗಳು ಎಂದು ನಾನು ಏನು ಹೇಳುತ್ತೇನೆ, ನಿಮ್ಮ ವಿಶ್ವವಿದ್ಯಾ ನಿಲಯಗಳಲ್ಲಿ ಸಾಕಷ್ಟು ಇದೆ. ವಿಶ್ವವಿದ್ಯಾನಿಲಯಗಳಲ್ಲಿ ಇತಕ್ಕಂಥದ್ದನ್ನು "Lab to Land" ಎನ್ನತಕ್ಕಂತಹ ರೀತಿಯಲ್ಲಿ ಕೃಷಿ ಸಂಪರ್ಕ ಕೇಂದ್ರಗಳಿಗೆ ಹೆಚ್ಚಿನ ಶಕ್ತಿಯನ್ನು ಕೊಡತಕ್ಕಂತಹ ಕೆಲಸವನ್ನು ಮಾಡಿ, ಮಾನ್ಯ ಸುರೇಶ್ ಕುಮಾರ್‌ರವರೇ ನೀವು ನೋಡಬೇಕು. ನಿಮ್ಮ ಯೂನಿವರ್ಸಿಟಿಗಳಲ್ಲಿ ಬರೀ ಟೀಚಿಂಗ್ ಅವರಿಗೆ ದೊಡ್ಡ ಪ್ರೊಫೆಷನ್. ಅವರ ಮ್ಯಾನ್‌ಡೇಟ್ ಏನಿದೆ ಎಂದರೆ, ಟೀಚಿಂಗ್ ಇದೆ, extension ಇದೆ, extension ಇದೆ ಎಂದು ಪ್ರೊಫೆಸರ್‌ಗಳಿಗೆ ಗೊತ್ತಿಲ್ಲ. ಫೀಲ್ಡ್‌ನಲ್ಲಿ ಯಾರೂ ಹೋಗುವುದಿಲ್ಲ. ರೈತರ ಹತ್ತಿರ inter act ಮಾಡುವುದಿಲ್ಲ. Research, teaching and extension.

ರಿಸರ್ಚ್ ಮಾಡುತ್ತಾರಾ? ಅದೂ ಮಾಡುವುದಿಲ್ಲ. ಪ್ರೈವೇಟ್ ಕಂಪನಿಯವರು successful ಆಗುತ್ತಿದ್ದಾರೆ.

ಅವರು ಇವತ್ತು ಶುರು ಮಾಡಿದರೆ 3 ವರ್ಷಕ್ಕೆ ಅವರ varieties fieldಗೆ ಬರುತ್ತವೆ. ಆದರೆ ಯೂನಿವರ್ಸಿಟಿಗಳಲ್ಲಿ 7 ವರ್ಷವಾದರೂ ಬರುವುದಿಲ್ಲ, 10 ವರ್ಷವಾದರೂ ಬರುವುದಿಲ್ಲ. ಎಲ್ಲಾ out dated ಸಂಶೋಧನೆಗಳಾಗಿವೆ. ನೀವು ಅವರನ್ನು ಚುರುಕುಗೊಳಿಸಿ. ನೀವು ಅವರಿಗೆ incentives ಕೊಡಿ, ಶಕ್ತಿ ಕೊಡಿ. ಅವರು ಒಳ್ಳೆಯ ಸಂಶೋಧನೆ ಮಾಡಿದರೆ, ಅವರಿಗೆ ಪ್ರೋತ್ಸಾಹ ಕೊಡಿ. ಹೊರಗಡೆ ಕಂಪನಿಯವರಿಗೆ ಆ ಸಂಶೋಧನೆಯನ್ನು ಕೊಟ್ಟು, ಅವರಿಗೆ ದುಡ್ಡು ಬರುವಂತೆ ಮಾಡಿ. ಯೂನಿವರ್ಸಿಟಿಗಳಿಗೆ ನೀವು ಈ ರೀತಿಯಾಗಿ ಸಂಶೋಧನೆಗೆ ಹೆಚ್ಚು ಪ್ರೋತ್ಸಾಹ ನೀಡತಕ್ಕ ಕೆಲಸವನ್ನು ಮಾಡದಿದ್ದರೆ, ಏನೂ ಪ್ರಯೋಜನವಾಗುವುದಿಲ್ಲ. ನೀವು ದಿನ ಒಂದೊಂದು ಯೂನಿವರ್ಸಿಟಿ ಮಾಡುತ್ತಿದ್ದೀರಿ. ನನಗೇನೂ ಅದಕ್ಕೆ ಅಭ್ಯಂತರವಿಲ್ಲ. ಇವತ್ತು ಕೇಂದ್ರ ಸರ್ಕಾರ ವಿವಿಧ ಯೋಜನೆಗಳ ಅಡಿಯಲ್ಲಿ ಸಾಕಷ್ಟು ಹಣ ಕೊಡುತ್ತಿದೆ. ನಿಮಗೆ ಆ ಹಣ ಸಾಕಷ್ಟು ಸಿಗುತ್ತಿದೆ. ಆದ್ದರಿಂದ ನೀವು ವಿಶ್ವವಿದ್ಯಾನಿಲಯಗಳನ್ನು ಜಾಸ್ತಿ ಮಾಡುತ್ತಿದ್ದೀರಿ. ನಾನು ನಿಮಗೆ ದಯಮಾಡಿ ಹೇಳುತೇನೆ. ವಿಶ್ವವಿದ್ಯಾನಿಲಯಗಳನ್ನು ಜಾಸ್ತಿ ಮಾಡುವುದರಿಂದ politics ಆಗುತ್ತದೆಯೇ ವಿನಃ ಸಂಶೋಧನೆಗೆ ಸಹಾಯವಾಗುವುದಿಲ್ಲ, ರೈತರಿಗೆ ಸಹಾಯವಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರನ್ನು ಮೆಚ್ಚಿಸುವುದಕ್ಕಾಗಿ ಮೊನ್ನೆ ಮಲೆನಾಡಿನ ಶಿವಮೊಗ್ಗಲ್ಲೊಂದು ಯುನಿವರ್ಸಿಟಿ ಮಾಡುತ್ತೇವೆಂದು ಹೇಳಿದ್ದೀರಿ. ನನಗೆ ಯೂನಿವರ್ಸಿಟಿಗಳ ಬಗ್ಗೆ ಏನೂ ಇಲ್ಲ. ಅದರಿಂದ ಒಳ್ಳೆಯದು ಆಗುತ್ತದೆ ಎನ್ನುವುದಾದರೆ ಅದನ್ನು ಮಾಡಿ. ಆದರೆ ನನ್ನ ಅನುಭವದಿಂದ ಹೇಳುವುದಾದರೆ, ಖಂಡಿತ ಅದರಿಂದ ಒಳ್ಳೆಯದಾಗುವುದಿಲ್ಲ. ಬರೇ politics ಬಿಟ್ಟರೆ ಬೇರೆ ಏನೂ ಆಗುವುದಿಲ್ಲ. ಸಂಶೋಧನೆಗಳಿಗಿಂತ ಹೆಚ್ಚಾಗಿ ಒಂದೊಂದು ಯೂನಿವರ್ಸಿಟಿಗಳಿಗೆ ಒಂದೊಂದು mandate ಅನ್ನು ಕೊಡಿ. ಎಷ್ಟೆಷ್ಟು varieties ಅನ್ನು ನೀವು ಬಿಡುಗಡೆ ಮಾಡುತ್ತೀರಿ? ಎಷ್ಟು ಮಾರ್ಕೆಟ್‌ನಲ್ಲಿ sustain ಆಗಿವೆ? Private companies ಜೊತೆಗೆ ಏಕೆ ನೀವು compete ಮಾಡಲಿಕ್ಕಾಗುತ್ತಿಲ್ಲ? ಆ ರೀತಿಯಾದಂತಹ mandate

ಗಳನ್ನು ಕೊಡುವಂತಹ ಕೆಲಸವನ್ನು ಮಾಡಿ. ನೀವು ಅವರ ಮೇಲೆ control ಇಟ್ಟುಕೊಳ್ಳದಿದ್ದರೆ ಯೂನಿವರ್ಸಿಟಿಗಳಲ್ಲಿ ಬರೇ politics ಬಿಟ್ಟರೆ ಬೇರೇನೂ ಆಗುವುದಿಲ್ಲ. ನೀವು ಯಾವ professor ಬೇಕಾದರೂ ನೋಡಿ, ಅವರು ಯೂನಿವರ್ಸಿಟಿ premisesನಲ್ಲಿ ಇರುವುದಿಲ್ಲ. ಅವರು ಸಾಯಂಕಾಲ ಬೇರೆ ಜಾಗದಲ್ಲಿ ಸಿಗುತ್ತಾರೆ. ಇದು ಈ ದೇಶದ ದೇಶದ ದೌರ್ಭಾಗ್ಯ. ಇನ್ನೊಂದು ಬಹಳ ಮುಖ್ಯವಾಗಿ ಹೇಳಬೇಕೆಂದರೆ, ನೀವು ರಾಷ್ಟ್ರೀಯ ಕೃಷಿ ಬಿಮಾ ಯೋಜನೆ ಜಾರಿಗೆ ಆದ್ಯತೆ ಕೊಡಿ. ಇಲ್ಲಿಯವರೆಗೂ ರೈತರು ಆತ್ಮಹತ್ಯೆಗೆ ಒಳಗಾಗುತ್ತಿದ್ದಾನೆ. ರೈತರಿಗೆ ಒಳ್ಳೆಯದಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ನಿಜ, ರೈತರಿಗೆ ಒಳ್ಳೆಯದಾಗಬೇಕು. ಅದಕ್ಕೇನು ಮಾಡಬೇಕು? ಏನೂ ಮಾಡಲಿಕ್ಕೆ ಹೋಗಬೇಡಿ. ಹೋಬಳಿಗೊಂದು unit ಎಂದಿರುವುದನ್ನು ಹಳ್ಳಿಗೊಂದು ಅಥವಾ ಪಂಚಾಯಿತಿಗೊಂದು unit ಎಂದು ಮಾಡಿ. ಅದರಿಂದ ರೈತರಿಗೆ ಲಾಭವಾಗುತ್ತದೆ. Insurance ಬಗ್ಗೆ ಇವತ್ತು ರೈತರಿಗೆ ನಂಬಿಕೆ ಬರುತ್ತದೆ. ಇವತ್ತು ಪಂಚಾಯಿತಿ ಮಟ್ಟಕ್ಕೆ ಏಕೆ ನೀವು ಹೋಗುತ್ತಿಲ್ಲ? ನಿಮ್ಮ ಇಲಾಖೆಯವರು ಇದಕ್ಕಾಗಿ 6 ವರ್ಷದ್ದು data ಬೇಕು ಎಂದು ಹೇಳಬಹುದು. ಇವತ್ತು RKBY ಜಾರಿಗೆ ಬಂದು ಹತ್ತು ವರ್ಷಗಳಾಯಿತು. 10 ವರ್ಷಗಳಾದರೂ ಸಹ, ಇನ್ನೂ ನಿಮಗೆ 6 ವರ್ಷದ್ದು data ಸಿಕ್ಕಿಲ್ಲವೇ? Statistics ಅನ್ನು develop ಮಾಡಿ. ನಿಮ್ಮ ಹತ್ತಿರ ಯಾವುದು ಇಲ್ಲವೋ, ಆ ಅಂಕಿ ಅಂಶಗಳನ್ನು ಸಂಗ್ರಹಿಸಿ. ನಿಮ್ಮಲ್ಲಿ ಇರತಕ್ಕಂಥ ಅಂಕಿ ಅಂಶಗಳನ್ನು ಇಟ್ಟುಕೊಂಡು, ಅದನ್ನು develop ಮಾಡಿದರೆ ಸಾಧ್ಯವಾಗುತ್ತದೆ. ನೀವು ಮೂರು ದಿವಸ ವಿಶೇಷ ಅಧಿವೇಶನ ಕರೆದಿದ್ದೀರಿ. ದಯಮಾಡಿ ಕೊನೆಯ ಪಕ್ಷ ಅದನ್ನು ನೀವು ಗ್ರಾಮ ಪಂಚಾಯಿತಿ ಮಟ್ಟಕ್ಕೆ ತಂದರೆ, ಅದೊಂದು ದೊಡ್ಡ ಸಾಧನೆಯಾಗುತ್ತದೆ. ಆ ಕೆಲಸವನ್ನಾದರೂ ಸಹ ಇವತ್ತು ಮಾಡಿ. ಇವತ್ತು ಮಳೆ ಆಧಾರಿತದ ಮೇಲೆ ಮಾಡುತ್ತಿರುವುದು ಹೆಚ್ಚು ಜನಕ್ಕೆ ಲಾಭವಾಗುತ್ತಿಲ್ಲ General Insuranceನಲ್ಲಿ ಹೆಚ್ಚು ಜನ participate ಆಗತಕ್ಕ ರೀತಿಯಲ್ಲಿ ಮಾಡಬೇಕಾದಾಗ ನೀವು ಈ ರೀತಿಯಾದಂತಹ ಬದಲಾವಣೆಯನ್ನು ತರಬೇಕು. Loss ಆಗಿ ಎರಡೆರಡು ವರ್ಷಗಳಾದರೂ ಇನ್ನೂವರೆಗೆ ಅವರಿಗೆ payments ಆಗಿಲ್ಲ. ಏಕೆ insurance companyಯವರು ಕೊಡುತ್ತಿಲ್ಲವೋ? ಅಥವಾ ನೀವು crop

cutting experiment ಅನ್ನು ಮಾಡಿ ಕಳುಹಿಸಿಕೊಡುವುದರಲ್ಲಿ ವ್ಯತ್ಯಾಸವಾಗುತ್ತಿದೆಯೇ? ಏನಾಗುತ್ತಿದೆ? ಏಕೆ ಇಷ್ಟೊಂದು ತಡವಾಗುತ್ತಿದೆ? ಅಥವಾ ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ತುಂಬಿ ಕೊಡುವುದರಲ್ಲಿ ಏನಾದರೂ ವಿಳಂಬವಾಗುತ್ತಿದೆಯೇ? ದಯಮಾಡಿ ಅದನ್ನು monitor ಮಾಡಿ ಇವತ್ತು loss ಆಗಿದ್ದಕ್ಕೆ ಯಾವತ್ತೋ ದುಡ್ಡು ಬಂದರೆ ಪ್ರಯೋಜನ ವಾಗುವುದಿಲ್ಲ. In-time ನಲ್ಲಿ ದುಡ್ಡು ಬರತಕ್ಕ ರೀತಿಯಲ್ಲಿ ಮಾಡಿ ಎನ್ನುವಂತಹ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಉದ್ಯೋಗ ಖಾತರಿ ಯೋಜನೆ ಬಗ್ಗೆ ಹೇಳುವುದಾದರೆ, ಈ ಯೋಜನೆ ಬಡವರ ಪರವಾಗಿ ಇರತಕ್ಕಂಥ ಯೋಜನೆಯಾಗಿದೆ. ಅದು ಕೃಷಿ ಮೇಲೆ ಯಾವ ರೀತಿಯಾಗಿ ಪರಿಣಾಮ ಬೀರಿದೆ ಎನ್ನುವುದನ್ನು ಇಲ್ಲಿ ಯೋಚನೆ ಮಾಡಬೇಕು. ಅಂದರೆ ನಾನು ಯಾವುದೇ ರೀತಿಯಲ್ಲಿ ಉದ್ಯೋಗ ಖಾತರಿ ಯೋಜನೆಗೆ ವಿರುದ್ಧವಾಗಿ ಮಾತನಾಡುತ್ತಿದ್ದೇನೆ ಎಂಬ ಅಭಿಪ್ರಾಯಕ್ಕೆ ಬರುವುದು ಬೇಡ. ಅದು ಕೃಷಿ ಮೇಲೆ ಯಾವ ರೀತಿಯಾಗಿ ಪರಿಣಾಮ ಬೀರಿದೆ? ಎಂದು ನೋಡಬೇಕು. ಕೇಂದ್ರ ಸರ್ಕಾರ ಕೂಲಿಯನ್ನು 100 ರೂ. ಕೊಡುವುದಾಗಿ ಹೇಳಿದೆ. ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ಅದು ಜಾರಿಗೆ ಬರುತ್ತದೆ. 100 ರೂ.ಗಳನ್ನು ನೀವು ಅವನಿಗೆ ಕೊಡುವುದಾದರೆ, ಅವನು ಏಕೆ ಬಂದು ಕೆಸರನ್ನು ಮೈಮೇಲೆ ಹಾಕಿಕೊಳ್ಳುತ್ತಾನೆ? ರೈತರೆಲ್ಲ ಬರುತ್ತಾರೆ? 200 ರೂ.ಗಳನ್ನು ಕೊಟ್ಟರೂ ಕೂಡ ಆತ ಆ ಕೆಲಸ ಮಾಡಲಿಕ್ಕೆ ಬರುವುದಿಲ್ಲ. ಮಂತ್ರಿಗಳಾದರೂ ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕು. ಇದರ ಪರಿಣಾಮ ಕೃಷಿ ಮೇಲೆ ಏನಾಗಿದೆ? Labour problem ಏಕಾಗಿದೆ? ಎಂದು ಯೋಚಿಸಬೇಕು. ಇವತ್ತು hard labour ಮಾಡುವುದಕ್ಕೆ ಯಾರೂ ಕೂಡ ತಯಾರಿರುವುದಿಲ್ಲ. ಹಾಗಾಗಿ ಕೃಷಿಯನ್ನು ಇವತ್ತು ಸಂಪೂರ್ಣವಾಗಿ ಕೈಬಿಡತಕ್ಕ ಪರಿಸ್ಥಿತಿ ಉಂಟಾಗುತ್ತಿದೆ. ಆದ್ದರಿಂದ, ಇವತ್ತು mechanization is very important. Mechanisation ಅನ್ನು ಮಾಡಬೇಕಾದಾಗ ಹೆಚ್ಚೆಚ್ಚು equipments ಬೇಕಾಗುತ್ತದೆ. ಇದಕ್ಕಾಗಿ ನೀವು ದೊಡ್ಡ ದೊಡ್ಡ ಟ್ರಾಕ್ಟರ್‌ಗಳನ್ನು ತನ್ನಿ ಎಂದು ನಾನು ಹೇಳುವುದಿಲ್ಲ. ಇವತ್ತು 4–5 ಎಕರೆಗೆ ಸಹಾಯ ಆಗತಕ್ಕಂಥ ಸಣ್ಣ ಸಣ್ಣ equipments ಏನಿವೆ, ಅವೆಲ್ಲವನ್ನೂ ಕೂಡ ಇವತ್ತು ಸಬ್ಸಿಡಿ ವ್ಯಾಪ್ತಿಗೆ ತಂದು, ಅದನ್ನು ಸುಲಭದ ಬೆಲೆಗೆ ರೈತರಿಗೆ

ಕೊಡತಕ್ಕ ಕೆಲಸವನ್ನು ಮಾಡಿ. ನೀವು ಏನೊಂದು ಸಬ್ಸಿಡಿಯನ್ನು ಕೊಡುತ್ತೀರೋ, ಅದು ನೇರವಾಗಿ ರೈತರಿಗೆ ಹೋಗಬೇಕೇ ವಿನಃ ಕಂಪನಿಗೆ ಹೋಗಬಾರದು. ಕಂಪನಿಗೆ ಹೋದರೆ ತಿರುಗಿ ಅದು ಗೋಲ್‌ಮಾಲೇ! ನೇರವಾಗಿ ಅದು ರೈತರಿಗೆ ಹೋಗತಕ್ಕ ರೀತಿಯಲ್ಲಿ ಯೋಚನೆ ಮಾಡಿದರೆ, ಅದು ಬಹಳಷ್ಟು ಸಹಾಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನಿನ್ನೂ ಸಲಹೆಗಳನ್ನು ಕೊಡಬೇಕಾದುದು ಸಾಕಷ್ಟು ಇದೆ. ಹೇಳಬೇಕಾದಂತಹ ವಿಚಾರಗಳು ಸಾಕಷ್ಟಿವೆ. ಬಹುಶಃ ಇನ್ನು ಎರಡು ಗಂಟೆಗಳಾದರೂ ಕೂಡ ಅದೆಲ್ಲದರ ಬಗ್ಗೆ ಮಾತನಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನೀವು ಎಲ್ಲೋ ಒಂದು ಕಡೆ, ರೈತ ಇವತ್ತು ಮಳೆಯನ್ನು ನಂಬಿ ವ್ಯವಸಾಯ ಮಾಡುತ್ತಿರುವ ಪರಿಸ್ಥಿತಿಯಿಂದ ಹೊರ ತರತಕ್ಕಂಥ ಕೆಲಸವನ್ನು ಮಾಡಬೇಕು. ಆ ರೀತಿ ಮಾಡಲು ನೀವು irrigation potential ಅನ್ನು ಜಾಸ್ತಿ ಮಾಡಬೇಕು. irrigation potential ಅನ್ನು ನೀವು ಜಾಸ್ತಿ ಮಾಡಬೇಕಾದಾಗ ನೀವು ಏನು ಮಾಡಬೇಕಾಗುತ್ತದೆ? ನಾವು ನೀರಾವತಿ ಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಸಾಧನೆಯನ್ನು ಮಾಡಿದ್ದೇವೆ? ಎನ್ನತಕ್ಕಂಥ ವಿಚಾರವನ್ನೂ ಸಹಿತ ನಾವು ಅವಲೋಕನ ಮಾಡಬೇಕಾ ಗುತ್ತದೆ, ಚಿಂತನೆ ಮಾಡಬೇಕಾಗುತ್ತದೆ. ನಾವು ಇವತ್ತು ಬೆಳಿಗ್ಗೆ ಸಂತಾಪ ಸೂಚನೆಯನ್ನು ವ್ಯಕ್ತಪಡಿಸುವಾಗ, ಬಹಳ ದುಃಖದಿಂದ ಮಾತನಾಡಿದೆವು. ಅವರು ಈ ಮನೆಯ ಸದಸ್ಯರಲ್ಲದಿದ್ದರೂ, ನೆರೆ ರಾಜ್ಯದ ಮುಖ್ಯಮಂತ್ರಿ ಳಾಗಿದ್ದರೂ ಅವರ ಬಗ್ಗೆ ಬಹಳ ಮೆಚ್ಚಿ ಮಾತನಾಡತಕ್ಕ ಕೆಲಸವನ್ನು ಮಾಡಿದೆವು. ಅವರು ಒಳ್ಳೆಯ ಕೆಲಸ ಮಾಡಿದ್ದರಿಂದಲೇ ಇವತ್ತು ದಿವಂಗತ ರಾಜಶೇಖರ ರೆಡ್ಡಿಯವರನ್ನು ನೆನೆಸತಕ್ಕ ಕೆಲಸವನ್ನು ಮಾಡಿದ್ದೇವೆ. ಅವರ ನಿಧನದ ವಾರ್ತೆ ಕೇಳಿದ ತಕ್ಷಣ, 430 ಜನ ಇವತ್ತು ಆತ್ಮಹತ್ಯೆಯನ್ನು ಮಾಡಿಕೊಂಡರು ಅಥವಾ heart attack ಆಗಿ ಸತ್ತು ಹೋದರು ಎಂದರೆ, ಜನರೊಂದಿಗೆ ಅವರ attachment ಎಷ್ಟರ ಮಟ್ಟಿಗೆ ಇತ್ತು ಎನ್ನುವುದು ಗೊತ್ತಾಗುತ್ತದೆ. ಅವರಿಗೆ ಏಕೆ ಈ ರೀತಿಯ attachment ಇತ್ತು ಎನ್ನುವುದನ್ನು ತಿಳಿಯಲು ಅವರು ಮಾಡಿದ ಸಾಧನೆ ಏನು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅವರು ಬಜೆಟ್‌ನಲ್ಲಿ ಒಂದು ವರ್ಷಕ್ಕೆ 10 ಸಾವಿರ ಕೋಟಿ ರೂ.ಗಳನ್ನು ಕೊಡುತ್ತೇನೆಂದು ಹೇಳಿದರು. ಅವರು ಹೇಳಿದಂತೆ ನಡೆದುಕೊಂಡರು. 5 ವರ್ಷದಲ್ಲಿ 64 ಸಾವಿರ ಕೋಟಿ

ರೂ.ಗಳನ್ನು ಖರ್ಚು ಮಾಡಿದರು. 1 ಲಕ್ಷದ 50 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚದ ಯೋಜನೆಗಳನ್ನು ಕೈಗೊಂಡು 60-65 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿ 71 ಲಕ್ಷ ಎಕರೆಯನ್ನು irrigation ವ್ಯಾಪ್ತಿಯಲ್ಲಿ ತರಬೇಕೆಂದು ದಿವಂಗತ ರಾಜಶೇಖರ ರೆಡ್ಡಿಯವರು ಹೊರಟಿದ್ದರು. ಅದಕ್ಕಾಗಿ ಇವತ್ತು ಜನ ಅವರಿಗೋಸ್ಕರ ಪ್ರಾಣ ತೆತ್ತರು. ಆ ರೀತಿಯಾದಂತಹ ಕೆಲಸ ಇವತ್ತು ಆಗಬೇಕಾಗಿದೆ. ಇವತ್ತು ಏನಾದರೂ ನಮ್ಮ ಕರ್ನಾಟಕದ ಮಟ್ಟಿಗೆ ಆ ರೀತಿ ಆಗುತ್ತಿದೆಯೇ? ಎಂದು ಯೋಚಿಸಬೇಕು. ದಯವಿಟ್ಟು ಮಾನ್ಯ ಸುರೇಶ್‌ಕುಮಾರ್‌ರವರು ಇದರ ಬಗ್ಗೆ ಯೋಚನೆ ಮಾಡಬೇಕು. ನಾವು ನಮ್ಮ irrigation sectorಗೆ ಹೋದ ವರ್ಷ ಕೊಟ್ಟಿದ್ದು 4 ಸಾವಿರ ಕೋಟಿ ರೂ.ಗಳು ಮಾತ್ರ. ಅದರಲ್ಲಿ ನಾವು ಬಿಡುಗಡೆ ಮಾಡಿದ್ದು 3 ಸಾವಿರ ಕೋಟಿ ರೂ.ಗಳು ಮಾತ್ರ. ಸಾಲ 1200 ಕೋಟಿ ರೂ.ಗಳಷ್ಟಿದೆ. ಹೀಗಾದರೆ ಕೃಷಿ ಎಲ್ಲಿ ಉದ್ಧಾರವಾಗುತ್ತದೆ? ಇವತ್ತು 38 on going projects ನಮ್ಮ ಕೈಯ್ಯಲ್ಲಿದೆ. ಆ Projects complete ಮಾಡಿ ನೀರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ನಾವು ಬರೇ ಮಾತನಾಡುತ್ತಿದ್ದೇವೆಯೇ ವಿನಃ ನೀರನ್ನು ಉಪಯೋಗಿಸಕೊಳ್ಳುವುದಕ್ಕೆ ಏನನ್ನೂ ಮಾಡುತ್ತಿಲ್ಲ. ಹೆಚ್ಚು ಹಣವನ್ನು ಕೊಡದಿದ್ದರೆ ನೀವು ಇವತ್ತು ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ನಾನು ಇದಕ್ಕೆ ಪರಿಹಾರವೇನಿದೆ? ಎಂದು ನೋಡಿ. ರೈತರ ಆತ್ಮಹತ್ಯೆಯನ್ನು ತಪ್ಪಿಸಬೇಕು, ಹಳ್ಳಿಯಿಂದ ಅವರು ಇವತ್ತು ಪಟ್ಟಣಕ್ಕೆ ಬರುವುದನ್ನು ಬಿಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಆ ರೀತಿ ಆಗಬೇಕಾದರೆ, ನೀವು ನಿಗದಿತ ವೇಳೆಯಲ್ಲಿ ನೀರಾವರಿ ಯೋಜನೆಗಳನ್ನು ಮುಗಿಸತಕ್ಕಂಥ ಕೆಲಸವನ್ನು ಮಾಡಬೇಕು. ನಮ್ಮ ದುರಾದೃಷ್ಟ, ನಾವು upper riparian stateನವರಾಗಿದ್ದೇವೆ. ನಾವು ನಮ್ಮ ಎಲ್ಲಾ ನೀರನ್ನೂ ಹಿಡಿದಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಕೆಳಕ್ಕೆ ಹೋಗಲೇಬೇಕಾಗುತ್ತದೆ. ತಮಿಳುನಾಡಿಗೆ ನೀರು ಹರಿಯಲೇಬೇಕಾಗುತ್ತದೆ, ಆಂಧ್ರ ಪ್ರದೇಶಕ್ಕೆ ಹೋಗಲೇಬೇಕಾಗುತ್ತದೆ. ಕರ್ನಾಟಕದವರು ಬಳಸಿಕೊಳ್ಳದ ನೀರನ್ನು ನಮ್ಮ ನೆರೆ ರಾಜ್ಯಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕೃಷ್ಣ ವ್ಯಾಪ್ತಿಯಲ್ಲಿ ಬರುವಂತಹ 'ಎ' ಸ್ಕೀಮ್ ಇರಬಹುದು, ಕಾವೇರಿ ಬೇಸಿನ್‌ನಲ್ಲಿ ಬರುವಂತಾದ್ದು ಇರಬಹುದು, ಅದೆಲ್ಲದರ ವ್ಯಾಪ್ತಿಯ ಹೆಚ್ಚುವರಿ ನೀರನ್ನು ಅವರು ಬಳಸಿಕೊಳ್ಳುತ್ತಿದ್ದಾರೆ. Flood ನಿಂದ ಬರತಕ್ಕಂಥ ನೀರನ್ನು ಮತ್ತು

ಕರ್ನಾಟಕ ಉಪಯೋಗಿಸಿದ ನೀರನ್ನು, ಹೀಗೆ ಎಲ್ಲವನ್ನೂ ಬಳಕೆ ಮಾಡಿಕೊಳ್ಳತಕ್ಕ ಕೆಲಸವನ್ನು ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳು ಮಾಡುತ್ತಿವೆ. ಈ ಸಂದರ್ಭದಲ್ಲಿ ನಮ್ಮ ಪಾಲಿನ ಎಲ್ಲಾ ನೀರನ್ನೂ ನಾವು ಬಳಕೆ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಸುಪ್ರೀಂ ಕೋರ್ಟಿನ ತೀರ್ಪು ಬಂದ ತಕ್ಷಣ ನೋಡೋಣ ಎಂದು ನಾವು ಹೇಳುವುದು ಬೇಡ. ನಮ್ಮ ನೀರಿನ ಹಕ್ಕು ಏನಿದೆಯೋ, ಅದಕ್ಕಿಂತ ಹೆಚ್ಚನ್ನು ನಿಗದಿತ ಅವಧಿಯಲ್ಲಿ ನಾವು ಬಳಕೆ ಮಾಡಿಕೊಳ್ಳಲೇಬೇಕು ಎನ್ನತಕ್ಕ ರೀತಿಯಲ್ಲಿ ಹಣವನ್ನು ತೊಡಗಿಸತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು.

ಆ ರೀತಿಯಾದ ಚಿಂತನೆಯನ್ನು ನೀವು ಮಾಡದೇ ಇದ್ದರೆ ರೈತರ ಬಗ್ಗೆ ನೀವು ಏನೇ ಮಾತನಾಡಿದರು ಮೊಸಳೆ ಕಣ್ಣೀರಾಗುತ್ತದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಮಗೆ ಈಗಿರುವ ಯೋಜನೆಗಳನ್ನು ಮುಗಿಸುವುದಕ್ಕೆ ಅಧಿಕಾರಿಗಳು ಬಹಳ ಸುಲಭವಾಗಿ ಸುಪ್ರೀಂ ಕೋರ್ಟಿನಲ್ಲಿದ್ದಾವೆ, ಕಾವೇರಿ ಮತ್ತು ಕೃಷ್ಣಾ ಅಥಾರಿಟಿ ಇವೆ, ಜಡ್ಜಮೆಂಟ್ ಬರಲಿ ಎಂದು ಹೇಳುತ್ತಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ನೀವು ಎಲ್ಲೋ ಒಂದು ಕಡೆ ತಮಿಳುನಾಡಿಗೆ ಹೋಗಿ ಇವತ್ತು ತಿರುವಳ್ಳುವರ್ ಅವರ ಮತ್ತು ಸರ್ವಜ್ಞ, ಪ್ರತಿಮೆಗಳನ್ನು ಅನಾವರಣ ಮಾಡಿದಿರಿ, ಆ ರೀತಿಯಾದ ರಿಲೇಷನ್‌ಶಿಫ್ ಆಗಬೇಕು. ನೆರೆ ರಾಜ್ಯಗಳೊಡನೆ ಇವತ್ತು ನಮ್ಮ ಸಂಪರ್ಕ ಚೆನ್ನಾಗಿ ಇರಬೇಕು. ಆದರೆ ಅವರು ಎಲ್ಲೊ ಒಂದು ಕಡೆ, ನಾವು ಕಾವೇರಿ ವಿಚಾರವನ್ನೆ ತೆಗೆದುಕೊಂಡರೆ, ಅದು ಇವತ್ತಿನ ಕಾಲದ್ದಲ್ಲ ಹಿಂದೆ ಬ್ರಿಟಿಷರ ಕಾಲದಿಂದಲೂ ನಮಗೂ ಅವರಿಗೂ ದ್ವೇಷ ನಡೆದುಕೊಂಡು ಬಂದಿರುವುದು. ಆ ಬ್ರಿಟಿಷರ ಕಾಲದಿಂದ ನಡೆದುಕೊಂಡು ಬಂದಿರುವ ದ್ವೇಷ ಅಷ್ಟು ಸುಲಭವಾಗಿ ಹೋಗಿ ಬಿಡುತ್ತದೆ ಎನ್ನುವ ಮಾತನ್ನು ಹೇಳುವುದಕ್ಕಾಗುವುದಿಲ್ಲ. ಎಲ್ಲೊ ಒಂದು ಕಡೆಗೆ ನಿಮ್ಮ ಭಾಂದವ್ಯ ಚೆನ್ನಾಗಿರಬೇಕು. ನೀರಾವರಿ ವಿಚಾರಗಳಲ್ಲಿ ಎಲ್ಲವೂ ಕೋರ್ಟಿನಲ್ಲಿ ಇತ್ಯರ್ಥವಾಗುತ್ತದೆ ಎಂದು ಹೇಳತಕ್ಕಂತಹವನು ನಾನಲ್ಲ. ಎಲ್ಲಾ ಟ್ರೈಬುನಲ್ ಮುಖಾಂತರ ಹೋಗಬೇಕಾಗುತ್ತದೆ ಎಂದಲ್ಲ, ಪೊಲಿಟಿಕಲ್ ಸಲ್ಯೂಷನ್ ಕೂಡ ಬಹಳ ಬೇಕಾಗುತ್ತದೆ. ಬಹುಶಃ ಸುಪ್ರೀಂ ಕೋರ್ಟಿನಲ್ಲಿ ಅಥವಾ ಟ್ರೈಬುನಲ್‌ನಲ್ಲಿ ಎಲ್ಲೇ ಎದ್ದರೂ ಕೂಡ ಪೊಲಿಟಿಕಲ್ ರಿ–ಕನ್ಸಿಲಿಯೇಷನ್‌ಗೆ ಬನ್ನಿ ಎನ್ನುವ ಮಾತನ್ನು ಅವರೂ ಕೂಡ ಹೇಳುತ್ತಾರೆ. ಅದಕ್ಕೇನಾದರೂ ಬರುವುದಕ್ಕೆ ಅವಕಾಶವಿದ್ದರೆ ದಯಮಾಡಿ ಅದನ್ನು ಮಾಡಿದರೆ ಒಳ್ಳೆಯದಾಗುತ್ತದೆ.

ಏಕೆಂದರೆ, ಯಡಿಯೂರಪ್ಪನವರು ತಮಿಳುನಾಡಿಗೆ ಹೋದ ತಕ್ಷಣವೇ, ತಂಬಿ ಎಂದ ತಕ್ಷಣವೇ ಬಹಳ ಖುಷಿಯಾಗಿಬಿಟ್ಟರು. ಅವರು ಆ ರೀತಿಯಾಗಿ ಮಾತನಾಡುವುದಕ್ಕೆ ಒಂದು ಸಂದರ್ಭವಿದೆ, ಇವತ್ತು ಅವರು ಏನು ಮಾಡುತ್ತಿದ್ದಾರೆ ಎಂದರೆ, ಕಾವೇರಿ ತೀರ್ಪು ಬಂದ ಮೇಲೆ ಇವತ್ತು ಸುಪ್ರೀ ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇರುವಂಥ ಸಂದರ್ಭದಲ್ಲಿ ಅಲ್ಲಿ ಬರುವ ಹೆಚ್ಚುವರಿ ನೀರನ್ನು ನಮ್ಮ interlinking of rivers, peninsula rivers ಗಳನ್ನು ಅನ್ನು ಲಿಂಕ್ ಮಾಡಬೇಕು. ಗೋಧಾವರಿ, ಮಹಾನದಿ, ಕೃಷ್ಣಾ, ಕಾವೇರಿ, ಎಂದು ತಮಿಳುನಾಡಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರು ವಿಚಾರ ಮಾಡುತ್ತಿದ್ದಾರೆ. ಕಾವೇರಿ ಮತ್ತು ವೈಗೈಹಿ ನದಿಗಳು ಇವತ್ತು ಒಂದಾಗಬೇಕು. ಹೆಚ್ಚುವರಿ ನೀರನ್ನು ಬಳಸಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತಾರೆ. ಈಗಾಗಲೇ ಕೇಂದ್ರ ಸರ್ಕಾರದ NWDA ಮುಖಾಂತರ ಹೋಗಿ, ಇವತ್ತು ಕೇಂದ್ರ ಸರ್ಕಾರದಿಂದಲೂ ಕೂಡ ಹಣ ಪಡೆಯಲು ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಕರ್ನಾಟಕದ ಮುಖ್ಯಮಂತ್ರಿ ಯನ್ನು goodbooks ನಲ್ಲಿಟ್ಟುಕೊಂಡು ಆ ನೀರಿಗೆ ಒಪ್ಪಿಗೆ ತೆಗೆದು ಕೊಳ್ಳಬೇಕೆನ್ನುವ ಸನ್ನಾಹ ಇದ್ದರೂ ಇರಬಹುದು. ದಯಮಾಡಿ ಅದಕ್ಕೆ ಯೀಲ್ಡ್ ಆಗುವ ಪ್ರಶ್ನೆ ಇಲ್ಲ, ಅದನ್ನು ಅವರು ಮಾಡುತ್ತಾರೆನ್ನುವ ಮಾತನ್ನು ಕೂಡ ನಾನು ಹೇಳುವುದಿಲ್ಲ. ಇವತ್ತು ಸೌಹಾರ್ದವಾಗಿರುವ ನಿಮ್ಮ ಸ್ನೇಹ ಇರಲಿ. ಸುರೇಶ್‌ಕುಮಾರ್ ಅವರೆ ಈಗ ತಾವು ಲಾ ಮಿನಿಸ್ಟರ್ ಆಗಿದ್ದೀರಿ, ನಾವು 192 ಟಿಎಂಸಿ ನೀರನ್ನು ಬಿಡಬೇಕು, ಅದರ ಮೇಲೆ ಒಂದು ತೊಟ್ಟು ನೀರನ್ನು ಬಿಡಬೇಕಾಗಿಲ್ಲ. 192 ಟಿಎಂಸಿಗಿಂತ ಹೆಚ್ಚು ಬರುವ ನೀರನ್ನು, ಡೈವರ್ಟ್ ಮಾಡಿ ನೀವು ಕೆರೆಕಟ್ಟೆಗಳಿಗೆ ಕೊಡುವುದಕ್ಕೆ ನಿಮಗೇನು ತೊಂದರೆ ಯಾಗಿರುವುದು, ಏಕೆ ಮಾಡಬಾರದು? ಈಗ ತುಮಕೂರಿನಲ್ಲಿ ಹೆಬ್ಬೂರು-ಹೊನವಳ್ಳಿ ಯೋಜನೆಯನ್ನು ಮಾಡಿದಿರಿ, ಅದು ಯಶಸ್ವಿಯಾಗಬೇಕೆನ್ನುವುದಾದರೆ ಇಂಥ ಕೆಲಸಗಳನ್ನು ಮಾಡಿ, ಮೂರು ವರ್ಷಕ್ಕೆ ಒಂದು ಸಾರಿ ನೀರು ಕೊಟ್ಟರೂ ಪರವಾಗಿಲ್ಲ ಜನರು ಬದುಕುತ್ತಾರೆ, ಆ ದಿಕ್ಕಿನಲ್ಲಿ ಯೋಚನೆ ಮಾಡಿ, ನೀವು ಸುಮ್ಮನೆ ಮಾತನಾಡುವುದರಿಂದ ಏನು ಪ್ರಯೋಜನ ವಾಗುವುದಿಲ್ಲ. ಅದೇ ರೀತಿಯಾಗಿ ಕೃಷ್ಣಾ ನದಿಗೆ ಸಂಬಂಧಿಸಿದಂತೆ ಇನ್ನು 6 ತಿಂಗಳೊಳಗೆ ತೀರ್ಪು ಬರುತ್ತದೆ. ಆ ಸಂದರ್ಭದಲ್ಲಿ ತೀರ್ಪು ನಮ್ಮ ಪರವಾಗಿಯೇ ಬರುತ್ತದೆ ಎನ್ನುವ ನಂಬಿಕೆ ಇದೆ, ಕಾರಣ, ನೀವು ಇವತ್ತು

ಎಷ್ಟೆ ಯೋಜನೆಗಳನ್ನು ಮಾಡಿದರೂ ಕೂಡ ನೀರಿಗೆ ನಿಮಗೆ ಹಕ್ಕು ಬರುವುದಿಲ್ಲವೆಂದು ಆಂಧ್ರ ಪ್ರದೇಶಕ್ಕೆ ಸುಪ್ರೀಂ ಕೋರ್ಟ್ ಹೇಳಿರುವ ಹಿನ್ನೆಲೆಯಲ್ಲಿ, ನಾಳೆ ಟ್ರೈಬುನಲ್ ತೀರ್ಪು ಕೂಡ ಕರ್ನಾಟಕದ ಪರವಾಗಿ ಬರುತ್ತದೆ ಎನ್ನುವುದಿದೆ. ನಮಗೆ 734 ಟಿಎಂಸಿನಲ್ಲಿ ತಮಿಳುನಾಡಿಗೆ ಕುಡಿಯು ವುದಕ್ಕೆ ನೀರು ಬಿಟ್ಟರೆ ನಾವು ಇದುವರೆವಿಗೆ ಬಳಕೆ ಮಾಡುವುದಕ್ಕಾಗಿರುವುದು ಕೇವಲ 600 ಟಿಎಂಸಿ, ಇನ್ನು 120–130 ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕಾಗಲಿಲ್ಲ. ರೈತ ಉದ್ಧಾರವಾಗಬೇಕೆಂದರೆ, ಅವನು ಹೇಗೆ ಆಗುತ್ತಾನೆ ಅಥವಾ ನಿಮ್ಮ ಒಬ್ಬರಿಂದಲೇ ಆಗಬೇಕೆಂದಲ್ಲ, ಬಹಳ ವರ್ಷಗಳಿಂದಲೂ ರೈತರ ಶೋಷಣೆಯಾಗುತ್ತಲಿದೆ. ನಾವು ನೀರಾವರಿ ಕ್ಷೇತ್ರದಲ್ಲಿ ಆಲಸ್ಯ ಮಾಡುತ್ತಿದ್ದೇವೆ, ಈಗ ಆ ಕೆಲಸಗಳನ್ನು ಮುಗಿಸುವಂಥ ಕೆಲಸವನ್ನು ಮಾಡಬೇಕು. ನಾಳೆ ತೀರ್ಪು ನಿಮ್ಮ ಪರವಾಗಿ ಬಂದಂಥ ಸಂದರ್ಭದಲ್ಲಿ, ನೀವು ಆಲಮಟ್ಟಿ ಲೆವೆಲ್ ಅನ್ನು 729ಕ್ಕೆ ಏರಿಸುವುದಕ್ಕೆ ಅವಕಾಶ ಕೊಟ್ಟರೆ, ಇನ್ನು 100 ಟಿಎಂಸಿ ಅನ್ನು ಬಳಕೆ ಮಾಡುವುದಕ್ಕೆ ನೀವು ಅವಕಾಶ ಕೊಟ್ಟರೆ ಏನಾಗುತ್ತದೆ? ನೀವು ನೀರನ್ನು ತುಂಬಿಸಿ ಆಂಧ್ರಪ್ರದೇಶಕ್ಕೆ ಬಿಡುತ್ತೀರಿ. ಇಲ್ಲಿ ಹೇಳಿಕೊಳ್ಳುವುದಕ್ಕೆ ಅಷ್ಟೆ, ನೋಡಿ ನಾವು 729ಕ್ಕೆ ಆಯಿತು, ನೀರ ಶೇಖರಣೆ ಮಾಡಿದ್ದೇವೆ ಎಂದು ಹೇಳುತ್ತೀರಿ, ಅದರಲ್ಲಿ ಆಂಧ್ರ ಪ್ರದೇಶಕ್ಕೆ ನೀರು ಬಿಡುವುದಕ್ಕಾಗುತ್ತದೆಯೇ ವಿನಹ ಇವತ್ತು ನಮ್ಮ ರೈತರಿಗೆ ಸಹಾಯವಾಗುವುದಿಲ್ಲ. ನಮ್ಮ ರೈತರಿಗೆ ನೀರು ಬಿಡುವ ಕೆಲಸಗಳಾಗ ಬೇಕಾದಾಗ ನಮ್ಮ ಯೋಜನೆಗಳನ್ನು ಆದಷ್ಟು ಬೇಗ ಮುಗಿಸಬೇಕು. ಅವನ್ನು ಮುಗಿಸುವುದರ ಜೊತೆಗೆ ಮಳೆಯನ್ನು ನಂಬಿರುವ ರೈತರಿಗೆ assured irrigation ಕೊಡತಕ್ಕಂತ ರೀತಿಯಲ್ಲಿ ಮಾಡಿದಾಗ ಮಾತ್ರ ಇವತ್ತು ಸಾಧ್ಯವಾಗುತ್ತದೆ. ನಾವು ಗೋದಾವರಿ ನೀರಿನ ಬಳಕೆಯ ವಿಚಾರದಲ್ಲಿ ಈಗಾಗಲೇ ತೀರ್ಮಾನವಾಗಿದೆ, ನಮಗೆ ಸುಮಾರು 21 ಟಿಎಂಸಿ ಅಷ್ಟು ನೀರು ಲಭ್ಯವಾಗುತ್ತದೆ, Central Water Commission ತೀರ್ಮಾನ ಮಾಡಿದೆ. ಇವತ್ತಿನವರೆಗೆ ನೀರು ಬಳಕೆ ಮಾಡುವುದರ ಬಗ್ಗೆ ನೀವು ವಿಚಾರ ಮಾಡಿದ್ದೀರಾ? ಖಂಡಿತಾ ಇಲ್ಲ. ಇವತ್ತು ಗೋದಾವರಿ–ಪಲ್ಲಾವರಂ ಯೋಜನೆಯಲ್ಲಿ ಬರುವ 21 ಟಿಎಂಸಿ ನೀರು ಏನಿದೆ, ಅದನ್ನು ಉಪಯೋಗಿ ಸಿಕೊಳ್ಳುವ ದಿಕ್ಕಿನಲ್ಲಿ ನೀವು ಇವತ್ತು ಯಾವುದೇ ಕೆಲಸವನ್ನು ಮಾಡುತ್ತಿಲ್ಲವೆನ್ನುವ ಆರೋಪದ ಮಾತನ್ನು ನಾನು ಹೇಳಬೇಕಾಗುತ್ತದೆ.

ಬಹಳ ಮುಖ್ಯವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ, NWDA agency Government of India Organisation. ಇವತ್ತು Himalayan rivers, peninsula riversನ linking ಗೆ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಎಲ್ಲಾ ರಾಜ್ಯದವರೂ ಕೂಡ ಅಧ್ಯಯನ ಮಾಡಿದ ವರದಿ ಇವೆ. ನಮ್ಮ ಕರ್ನಾಟಕದಲ್ಲಿ ಮೂರು ಯೋಜನೆಗಳನ್ನು ಗುರುತಿಸಿದ್ದೇವೆ, ಒಂದು ವಾರಾಹಿ, ಇನ್ನೊಂದು ನೇತ್ರಾವತಿ ಮತ್ತೊಂದು Alamatti to Pennar. ಈ ಯೋಜನೆಗಳಿಗೆ ಕೇಂದ್ರ ಸರ್ಕಾರ ಹಣ ಕೊಡುವುದಾದರೆ ನೀವು ಏತಕ್ಕೆ ಒಪ್ಪಿಗೆ ಕೊಡಲಿಲ್ಲ, ಕೊಡುವುದಕ್ಕೆ ಏನು ತೊಂದರೆ ಇತ್ತು? ಅದರ ಬಗ್ಗೆ ನೀವು ಏತಕ್ಕೆ ಚರ್ಚೆ ಮಾಡಲಿಲ್ಲ? ಇವತ್ತು ಏಕಾಏಕಿ ಪವರ್ ಜನರೇಷನ್‌ಗೋಸ್ಕರ, ಆ ಗುಂಡ್ಯಾದಲ್ಲಿ ಬಹುಶಃ ಬಹಳ ಹಿಂದಿನಿಂದಲೂ ಬರುವಂತಹದ್ದು, ನೀವು ಅದಕ್ಕೆ ಒಪ್ಪಿಗೆ ಕೊಡುತ್ತೀರಿ, ಇನ್ನೊಂದು ಕಡೆ ಕೇಂದ್ರ ಮಂತ್ರಿಗಳ ಒಪ್ಪಿಗೆ ಸಿಕ್ಕಲ್ಲವೆಂದು ಹೇಳುತ್ತೀರಿ, ನೀವು ಫೌಂಡೇಷನ್ ಹಾಕುತ್ತೀರಿ, ಅದೇನಾದರೂ ಇದ್ದುಕೊಳ್ಳಲಿ. ಆದರೆ ಸಕಲೇಶಪುರದ ಹತ್ತಿರವಿರುವ ಕೇರಿ ಹಳ್ಳ, ಮೇಣಸಿನ ಹಳ್ಳದಲ್ಲಿ ಬರುವ ಸುಮಾರು 6–7 ಟಿಎಂಸಿ ನೀರನ್ನು gravity flow ನಲ್ಲಿ ಇವತ್ತು ಹೇಮಾವತಿಗೆ ನೀರು ಕೊಡಲು ಸಾಧ್ಯವಿದೆ. ಅಂಥ ಪ್ರಾಜೆಕ್ಟ್‌ಗಳನ್ನು ಐಡೆಂಟಿಫೈ ಮಾಡಿಕೊಟ್ಟಿದ್ದರೂ ಕೂಡ, ಇವತ್ತು ನೀರಾವರಿ ಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಲ್ಲ, ನಾನು ಮೊನ್ನೆ ಪ್ರಶ್ನೆ ಕೇಳಿದೆ, ಅದಕ್ಕೆ ಇದ್ಯಾವುದು ನಮಗೆ ಗೊತ್ತೇ ಇಲ್ಲ, ಸರ್ಕಾರಕ್ಕೆ ಬಂದಿಲ್ಲವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರ ಗುಂಡ್ಯಾ ಯೋಜನೆಯನ್ನು, ಇವತ್ತು ವೇದಾವತಿಗೆ ಲಿಂಕ್ ಮಾಡುವುದಕ್ಕೆ ಮಾಡಿರುವ ಯೋಜನೆಯನ್ನು, ನಾನೇ ಸ್ವತಃ ಹೋಗಿ ಅವರಿಗೆ ಒಂದು ಯೋಜನೆಯ ಕಾಗದ ಕೊಟ್ಟಿರುವುದನ್ನು, ಆದೇಶವನ್ನು ಕೊಟ್ಟಿರುವುದನ್ನು ಇಲ್ಲವೆಂದು ಉತ್ತರ ಕೊಡುತ್ತಾರೆಂದರೆ, ಏನಾಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅಥವಾ ಇದನ್ನು ವಿಧಾನ ಸಭೆಯಲ್ಲಿ ಹೇಳಬಾರದೆನ್ನುವ ವಿಚಾರವೂ ಕೂಡ ಇರಬಹುದು, ನಾನು ಅದೂ ಇಲ್ಲವೆನ್ನುವ ಮಾತನ್ನು ಹೇಳುತ್ತಿಲ್ಲ. ಇಲ್ಲಿ ಎಲ್ಲೊ ಒಂದು ಕಡೆ ಕರ್ನಾಟಕದಲ್ಲಿ ನೀರಿದೆ, ತಮ್ಮ ಪಾಲಿಗೋಸ್ಕರ ಬೇರೆ ರಾಜ್ಯದವರು ಕೇಳುತ್ತಾರೆನ್ನುವ ಭಯವಿರಬಹುದು. ಆದರೆ ಅಂಥ ಯೋಜನೆಗಳಿಗೆ ನೀವು ಎಲ್ಲೊ ಒಂದು ರೀತಿಯಲ್ಲಿ ಪೊಲಿಟಿಕಲ್ ಸಲೂಷನ್ ಅನ್ನು ಕಂಡುಹಿಡಿದು

ಆ ಯೋಜನೆಗಳನ್ನು ಅನುಷ್ಠಾನ ಮಾಡುವುದರ ಬಗ್ಗೆ ಯೋಚನೆ ಮಾಡಬೇಕು ಎನ್ನುವ ಒತ್ತಾಯವನ್ನೂ ಕೂಡ ನಾನೂ ಈ ಸಂದರ್ಭದಲ್ಲಿ ಮಾಡುತ್ತೇನೆ. ಇವತ್ತು ಆಲಮಟ್ಟಿಯಿಂದ ಆಂಧ್ರ ಪ್ರದೇಶದ ಶ್ರೀಶೈಲಂಗೆ ನೀರು ಹೋಗುತ್ತಿದೆ, ಹೋಗುತ್ತಿರುವ ನೀರಿನ ಪ್ರಮಾಣವೇನು? ಕೊಯ್ನಾದಲ್ಲಿ ಅವರೂ ಕೂಡ ನೀರು ಬಳಕೆ ಮಾಡುತ್ತಿಲ್ಲ, ಕರ್ನಾಟಕದಲ್ಲಿ ಬಳಕೆ ಮಾಡುತ್ತಿಲ್ಲ, ಆದರೆ ಅದರ ಲಾಭವಾಗುತ್ತಿರುವುದು ಆಂಧ್ರಪ್ರದೇಶದ ವರಿಗೆ, ಅವರಿಗೂ ಸಂಪೂರ್ಣವಾಗುತ್ತಿಲ್ಲ, ಎಲ್ಲಾ ಹರಿದು ಸಮುದ್ರಕ್ಕೆ ಹೋಗುತ್ತಿದೆ. ಇವತ್ತು ಆ ರೀತಿಯಾದ ಆಲಮಟ್ಟಿ–ಪೆನ್ನಾರ್ ಅನ್ನು ಲಿಂಕ್ ಮಾಡುವುದಕ್ಕೆ ಯೋಚನೆ ಮಾಡದೇ ಇದ್ದರೆ, ಈಗಾಗಲೇ ಆಂಧ್ರಪ್ರದೇಶದವರು ಉತ್ಸಹಕವಾಗಿದ್ದಾರೆ, ಈ ಯೋಜನೆಯಾಗಬೇಕೆಂದು ಹೇಳುತ್ತಿದ್ದಾರೆ. ಅಂದ ಹಾಗೆ ಈ ಯೋಜನೆಯ ಸಾಧಕಬಾಧಕಗಳನ್ನು ಯೋಚನೆ ಮಾಡಿ, ಆ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದರಿಂದ ಇವತ್ತು ಬರಗಾಲಕ್ಕೆ ತುತ್ತಾಗಿರುವ, ಕೊಪ್ಪಳವಿರಬಹುದು, ಬಳ್ಳಾರಿ ಇರಬಹುದು, ಗುಲ್ಬರ್ಗಾದ ಕೆಲವು ಭಾಗಗಳಿರಬಹುದು ಈ ರೀತಿಯಾದ 4–5 ಜಿಲ್ಲೆಗಳಿಗೆ ನೀರು ಕೊಡುವುದಕ್ಕೆ ಇವತ್ತು ಅವಕಾಶವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದಷ್ಟ ನೀರಾವರಿಗೆ ಹೆಚ್ಚು ಒತ್ತನ್ನು ಕೊಡುವ ಸಂದರ್ಭದಲ್ಲಿ ನೀವೊಂದು ತೀರ್ಮಾನಕ್ಕೆ ಬನ್ನಿ, ಇವತ್ತು ರಾಜಶೇಖರ ರೆಡ್ಡಿಯವರನ್ನು ನೀವು ನೆನಪಿಸಿಕೊಳ್ಳುವ ಸಂದರ್ಭದಲ್ಲಿ ಇವತ್ತು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ ಮುಖ್ಯಮಂತ್ರಿಗಳಿಗೆ ಸಹಾಯ ಬೇಕೆನ್ನುವುದಾದರೆ ನೀವು ಒಂದು ಯೋಚನೆ ಮಾಡಿ. ನನ್ನ ಆದ್ಯತೆ ರೈತ, ನನ್ನ ಆದ್ಯತೆ ಅವನು ಆತ್ಮಹತ್ಯೆ ಮಾಡಿಕೊಳ್ಳ ಬಾರದು, ನನ್ನ ಆದ್ಯತೆ ಅವನು ಹೆಚ್ಚು ಮಳೆಯನ್ನು ನಂಬಿರುವುದನ್ನು ಬಿಟ್ಟು ನೀರಾವರಿ ಪ್ರದೇಶವನ್ನು ಇವತ್ತು ಮಾಡುತ್ತೇನೆ ಎನ್ನುವ ಆ ಘೋಷಣೆಯನ್ನು ನೀವು ಮಾಡಿ.

(5-30 PM)

ಒಂದು ವರ್ಷದಲ್ಲಿ ಇಷ್ಟು ಹಣವನ್ನಿಡುತ್ತೇನೆಂದು ತೀರ್ಮಾನ ಮಾಡಿ. ನಾವು ವಿರೋಧ ಪಕ್ಷದವರ್ಯಾರೂ ಅದನ್ನು ವಿರೋಧ ಮಾಡುವ ಪ್ರಶ್ನೆ ಇಲ್ಲ. ನಾವೆಲ್ಲರೂ ಕೂಡ ಅದಕ್ಕೆ ಒಪ್ಪಿಗೆ ಕೊಡುತ್ತೇವೆ. ಅಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂಥ ನೀರಾವರಿ ಯೋಜನೆಗೆ ಒಂದು ವರ್ಷದಲ್ಲಿ ಕೊನೆಯ ಪಕ್ಷ ಹತ್ತು ಸಾವಿರ ಕೋಟಿ ಹಣವನ್ನಾದರೂ

ಮೀಸಲಿಡುವ ಬಗ್ಗೆ ಯೋಚನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅದರ ಬಗ್ಗೆ ನಿರ್ಣಯ ಮಾಡಿ ತೀರ್ಮಾನ ಮಾಡಲೇ ಬೇಕು. ನೀವು ಬೋಕನಕೆರೆ ಬಗ್ಗೆ ಹೇಳಿದ್ದೀರಿ. ಬೋಕಿಕೆರೆ ಮತ್ತು ಶಿಕಾರಿಪುರದ ಪರಿಸ್ಥಿತಿಯನ್ನು ಹೋಲಿಕೆ ಮಾಡಲು ಆಗುತ್ತದೆಯೇ? ಶಿಕಾರಿಪುರದ ಇವತ್ತಿನ ಪರಿಸ್ಥಿತಿ ಏನಾಗಿದೆ? ಆ ಕುಮುದ್ವತಿ ನದಿಯ ನೀರು ಅಲ್ಲಿರುವುದರಿಂದ ಅದು ಒಂದು ಮನೆನಾಡಾಗಿದೆ. ಆದರೆ ಬೋಕನಕೆರೆ ಆ ರೀತಿ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ನಾವು ಎಲ್ಲಿ ನೀರಾವರಿ ಕ್ಷೇತ್ರವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಿದರೆ ಮಾತ್ರ ರೈತರಿಗೆ ಸಹಾಯ ಮಾಡಿದಂತಾಗುತ್ತದೆಯೇ ವಿನಹಃ ಇಲ್ಲಿದಿದ್ದರೆ ಆಗುವುದಿಲ್ಲ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಚಿತ್ರದುರ್ಗಕ್ಕೆ ಭದ್ರಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲನ್ನು ಹಾಕಿದ್ದೀರಿ. ಇದುವರೆಗೆ ಈ ವಿಚಾರ ನಿಮಗೆ ಗೊತ್ತಿಲ್ಲದೇ ಇರಬಹುದು, ಅಧಿಕಾರಿಗಳು ನಿಮ್ಮ ಗಮನಕ್ಕೆ ತಂದಿಲ್ಲದಿರಬಹುದು? ಆದರೆ, ಆ ಯೋಜನೆಗೆ ಇದುವರೆಗೂ ತಾಂತ್ರಿಕ ಮಂಜೂರಾತಿಯೇ ಆಗಿಲ್ಲ. ನೀವು ಬಜೆಟ್‌ನಲ್ಲಿ ಇದಕ್ಕಾಗಿ 500 ಕೋಟಿ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ, ನೀವು ಇಟ್ಟಿರತಕ್ಕದ್ದು 100 ಕೋಟಿ ರೂಪಾಯಿ ಮಾತ್ರ. ಆದರೆ, ಒಂದು ಕೋಟಿ ಸಹ ಬಿಡುಗಡೆಯಾಗುವ ಪ್ರಶ್ನೆ ಇಲ್ಲ. ಕಾರಣ ಯೋಜನೆಗೆ ಇನ್ನೂ ತಾಂತ್ರಿಕ ಮಂಜೂರಾತಿ ದೊರಕಿಲ್ಲ. ಆ project technical ಆಗಿ feasible ಆಗಬೇಕಾದರೆ ನೀವು ಸ್ಕೀಂ B ನಲ್ಲಿ ಬರಬೇಕಾದ ನೀರನ್ನೂ ಸೇರಿಸಿಕೊಂಡು ಸಮಗ್ರವಾಗಿರತಕ್ಕ ಒಂದು ಯೋಜನೆಯನ್ನು ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಸ್ಕೀಂ B ನಲ್ಲಿ 19 ಟಿ.ಎಂ.ಸಿ. ನೀರು ತುಮಕೂರು ರೈಟ್ ಬ್ರಾಂಚ್ ಕೆನಾಲ್‌ಗೆ ಇರತಕ್ಕದ್ದು. ವಾಣಿ ವಿಲಾಸಕ್ಕೆ 15 ಟಿ.ಎಂ.ಸಿ. ನೀರನ್ನು ಶೇಖರಣೆ ಮಾಡದ್ದೀರಿ. ಮುಂದಿನ ಡಿಸೆಂಬರ್, ಜನವರಿಗೆ judgment ಬರುತ್ತದೆ. ಆ ರೀತಿ judgment ಬಂದಂಥ ಸಂದರ್ಭದಲ್ಲಿ, ಈಗಾಗಲೇ ಭದ್ರಾಮೇಲ್ದಂಡೆ ಯೋಜನೆಗೆ ಸ್ಕಿಂ A ನಲ್ಲಿರತಕ್ಕ 23 ಟಿ.ಎಂ.ಸಿ., ಸ್ಕೀಂ B ನಲ್ಲಿ ಬರತಕ್ಕೆ 19 ಟಿ.ಎಂ.ಸಿ., ವಾಣಿ ವಿಲಾಸಕ್ಕೆ ಮೀಸಲಾಗಿಟ್ಟಿರುವ 15 ಟಿ.ಎಂ.ಸಿ. ಒಟ್ಟು 57 ಟಿ.ಎಂ.ಸಿ.ಗೆ ನೀವು ಸಮಗ್ರವಾಗಿರತಕ್ಕ ಯೋಜನೆಯನ್ನು ಮಾಡಿದರೆ ಅದು ತಾಂತ್ರಿಕವಾಗಿ ಹಣಕಾಸಿನ ದೃಷ್ಟಿಯಿಂದ ಒಂದು ಮಹತ್ತರವಾದ ಯೋಜನೆಯಾಗುತ್ತದೆ. ದಯಮಾಡಿ ಈ ಯೋಜನೆ ಕೇವಲ ಪೇಪರ್‌ನಲ್ಲಿರತಕ್ಕದ್ದಲ್ಲ. ನೀವು ಇವತ್ತು

ಕೆಲವು ಪುಸ್ತಕವನ್ನು ಮಾಡಿದ್ದೀರಿ. ಅದನ್ನು ನಾನು ನೋಡಿದೆ. ಅದರಲ್ಲಿ ಮೊದಲನೆ ವರ್ಷದ ಪ್ರಗತಿಯ ನೋಟ ಎಂದು ನೋಡುವುದಕ್ಕೆ ಬಹಳ ಚೆನ್ನಾಗಿದೆ. ಫೋಟೋಗಳು ಚೆನ್ನಾಗಿದೆ. ಆದರೆ, ಅದನ್ನು ಓದಿದರೆ ದುಃಖವಾಗುತ್ತದೆ. ಬಹಳ ಆಶಾಭಾವನೆಯಿಂದ ತಂದಿರತಕ್ಕ document ಅದಾಗಿದೆ. ಅದು ಆಗಬೇಕು ಎನ್ನುವುದಾದರೆ ನೀವು ಹೆಚ್ಚು ಹಣವನ್ನು ಕೊಡಿ. ಇದರ ಜೊತೆಗೆ ಇನ್ನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಇವತ್ತು ನಮ್ಮಲ್ಲಿ ಯಾವುದೇ tribunal case ಆಗಲಿ ನಮ್ಮಲ್ಲಿ ನೀರಾವರಿ ತಜ್ಞರಿಲ್ಲ. ನಮ್ಮ ಪುಣ್ಯಕ್ಕೆ ದೇಸಾಯಿಯವರೊಬ್ಬರು ಇದ್ದಾರೆ. ಅವರಿಗೆ 79 ವರ್ಷ. ಅವರಿಂದ ಇನ್ನು ಎಷ್ಟು ವರ್ಷಗಳ ಕಾಲ ಸೇವೆಯನ್ನು ಪಡೆಯಬಹುದು ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ದೇಸಾಯಿಯವರ ನಂತರ ಯಾರಾದರು ಇನ್ನೊಬ್ಬ ಅಧಿಕಾರಿ ಇದ್ದಾರೆಯೇ ಎಂದು ಯೋಚನೆ ಮಾಡಿ. ಒಬ್ಬರೇ ಒಬ್ಬರು ಅಧಿಕಾರಿ ನಮ್ಮಲ್ಲಿ ಇಲ್ಲ. ನೀರಾವರಿಯಂಥ ಇಲಾಖೆಯಲ್ಲಿ ನೀವು ಐ.ಎ.ಎಸ್. ಅಧಿಕಾರಿಗಳನ್ನು ಕೂರಿಸಿಕೊಂಡಿದ್ದೀರಿ. ಬೇಕಾದರೆ Engineer in Chief ಆಗಿರತಕ್ಕವರ ಇನ್ನೊಂದು ಪೋಸ್ಟ್‌ನ್ನು ಕ್ರಿಯೇಟ್ ಮಾಡಿ. ಅಥವಾ 3 ಎಂದು ಇಟ್ಟುಕೊಂಡು Chief Engineerರವರನ್ನು ಮಾಡಿ technical sanctionಗಳಿಗೆಲ್ಲಾ ಅವರ ಸಲಹೆಯನ್ನು ಪಡೆಯಿರಿ. ಕೇಂದ್ರ ಸರ್ಕಾರದಿಂದ ಹಣವನ್ನು ತರಬೇಕಾದಾಗ, ಆಡಳಿತವನ್ನು ಮಾಡಬೇಕಾದಾಗ ಐ.ಎ.ಎಸ್. ಅಧಿಕಾರಿಗಳು ಇರಬೇಕೆಂಬುದು ನಿಜ. ಅವರನ್ನು ಅಷ್ಟಕ್ಕೆ ಮಾತ್ರ ಸೀಮಿತವಾಗಿಡಿ. ಆದರೆ, technical ಆಗಿರತಕ್ಕ projectನ್ನು ತೀರ್ಮಾನ ಮಾಡಬೇಕಾದಾಗ ವಿಧಾನಸೌಧದಲ್ಲಿ ಕಾರ್ಯದರ್ಶಿ ಮಟ್ಟದ ಹುದ್ದೆಯನ್ನು ಇಟ್ಟುಕೊಂಡಿಲ್ಲವೆಂದರೆ ನೀವು ನಿಜವಾಗಿಯೂ ನೀರಾವರಿಗೆ ಆದ್ಯತೆ ಕೊಡುತ್ತೀರಾ? ಹೆಚ್ಚು ಹಣವನ್ನು ತೊಡಗಿಸುತ್ತೀರಾ? ಹೆಚ್ಚು ಹಣವನ್ನು ತರಲು ಸಾಧ್ಯವೇ ಎಂದು ಯೋಚನೆ ಮಾಡಬೇಕಾಗಿದೆ. ಐ.ಎ.ಎಸ್.ರವರನ್ನು ಇಟ್ಟಿರುವ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ಎಲ್ಲಾ ನಿಗಮಗಳಲ್ಲಿ ನೀವು ಬರೀ ಐ.ಎ.ಎಸ್. officersಗಳನ್ನೇ ಇಟ್ಟಿದ್ದೀರಿ. ಆದರೆ, ನೀವು ಎಷ್ಟರಮಟ್ಟಿಗೆ Chief Engineerಗಳನ್ನು ಬಳಕೆ ಮಾಡುತ್ತಿದ್ದೀರಿ? Technical aspect ಬಂದಾಗ ಅವರ ತೀರ್ಮಾನವೇ ಅಂತಿಮವಾಗಬೇಕು. ಆಡಳಿತ ಮಾಡಬೇಕಾದಾಗ, ಹಣವನ್ನು ತರಬೇಕಾದಾಗ ನೀವು ಐ.ಎ.ಎಸ್. officersಗಳನ್ನು

ಇಟ್ಟುಕೊಂಡು ಕೆಲಸ ಮಾಡಿ. ನಿಮಗೆ ನೀರಾವರಿ, ರೈತರ ಬಗ್ಗೆ ಕಾಳಜಿ ಇದ್ದರೆ ದಯಮಾಡಿ ಆ ಕೆಲಸವನ್ನು ಕೂಡಲೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಕುಡಿಯುವ ನೀರು. ಬರದ ಬಗ್ಗೆ ನಾವು ಚರ್ಚೆ ಮಾಡಲು ಹೊರಟಂಥ ಸಂದರ್ಭದಲ್ಲಿ ಬೇಡ, ಕೃಷಿಯ ಬಗ್ಗೆ ಚರ್ಚೆ ಮಾಡಿಯೆಂದು ಹೇಳುತ್ತೀರಿ. ಕೃಷಿಗೂ ಬರಕ್ಕೂ ವ್ಯತ್ಯಾಸವೇನಿದೆಯೋ ನನಗಂತೂ ಕಾಣಲಿಲ್ಲ. ಬರದ ಪರಿಣಾಮ ಏನಾಗಿದೆ, ನಾವು ಹಳ್ಳಿಯಲ್ಲಿ ವಾಸ ಮಾಡುತ್ತಿರುವ ರೈತರಿಗೆ ಎಷ್ಟರಮಟ್ಟಿಗೆ ಯೋಗ್ಯವಾದ ಕುಡಿಯುವ ನೀರನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸ್ವಲ್ಪ ಭಾಗ ಮಾತ್ರ ನಾನು ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ. ಕುಡಿಯುವ ನೀರಿನ ವಿಚಾರದಲ್ಲಿ ಹೇಳುವುದಾದರೆ, ನಮ್ಮಲ್ಲಿ ಕುಡಿಯುವ ನೀರು ಎಷ್ಟರಮಟ್ಟಿಗೆ ಚೆನ್ನಾಗಿದೆಯೆಂದರೆ, ಮಾನ್ಯ ಸುರೇಶ್‌ರವರೇ ಒಂದು ಉದಾಹರಣೆ. ನೀವು ತುಮಕೂರಿನ ಜಿಲ್ಲಾ ಮಂತ್ರಿಗಳಾಗಿದ್ದೀರಿ. ಇಡೀ ಕರ್ನಾಟದಲ್ಲಿ highest fluoride ನೀರು ಇರತಕ್ಕದ್ದು ತುಮಕೂರು ಜಿಲ್ಲೆಯಲ್ಲಿ. ಅದೂ ನಮ್ಮ ನಾಲ್ಕು ತಾಲ್ಲೂಕುಗಳಲ್ಲಿ. ಮಂತ್ರಿಗಳಾದ ಶೋಭಾರವರಿಗೆ ಅದು ಗೊತ್ತಿದೆ. ಇದನ್ನು ಶಾಶ್ವತವಾಗಿ ತೆಗೆಯಬೇಕಾದರೆ ಏನು ಕೆಲಸ ಮಾಡಬೇಕು? ಯಾವ ರೀತಿ ಕಾರ್ಯಯೋಜನೆಗಳನ್ನು ಮಾಡಬೇಕಾದರೆ ಏನು ಕೆಲಸ ಮಾಡಬೇಕು? ಯಾವ ರೀತಿ ಕಾರ್ಯ ಯೋಜನೆಗಳನ್ನು ಮಾಡಬೇಕು? ಕೇಂದ್ರ ಸರ್ಕಾರ ನಿಮಗೆ ಎಲ್ಲಾ ಕಾಂಪೊನೆಂಟ್‌ನಲ್ಲೂ ಸೇರಿಸಿ ಒಂದು ವರ್ಷಕ್ಕೆ 486 ಕೋಟಿ ಹಣವನ್ನು ಕೊಡುತ್ತಾರೆ. ನೀವು ಯೋಜನೆಗಳನ್ನು ಸಾಕಷ್ಟು ಮಾಡಿದ್ದೀರಿ. ರಾಜೀವ್‌ಗಾಂಧಿ ಸಬ್‌ಮಿಷನ್ ಯೋಜನೆಯಲ್ಲಿ ಬೇಕಾದಷ್ಟು ಕಾರ್ಯಕ್ರಮ ಗಳನ್ನು ಮಾಡಿದ್ದೀರಿ. ಆದರೆ, ಅವುಗಳನ್ನು ಪೂರ್ಣ ಮಾಡುವುದು ಯಾವಾಗ? ಆ ಫ್ಲೋರೈಡ್ ಸಮಸ್ಯೆಯಿಂದ ಹೊರಕ್ಕೆ ಬರಬೇಕಾದ ಸಂದರ್ಭದಲ್ಲಿ ನೀವು sustainability component ಗೆ ಹೆಚ್ಚು ಹಣವನ್ನು ತರತಕ್ಕ ರೀತಿಯಲ್ಲಿ ಕೇಂದ್ರ ಸರ್ಕಾರದ ಜೊತೆ ವ್ಯವಹಾರವನ್ನು ಮಾಡಬೇಕು. ಶಾಶ್ವತವಾಗಿರತಕ್ಕ ಯೋಜನೆಗಳನ್ನು ತರತಕ್ಕ ರೀತಿಯಲ್ಲಿ sustainability componentಗೆ ಹೆಚ್ಚು ಹಣವನ್ನು ತರಬೇಕು. ನಾವು ವಿರೋಧ ಪಕ್ಷದವರಾಗಿ ಕೂತಿದ್ದರೂ ಹೆಚ್ಚು ಹಣವನ್ನು ತರುವ ವಿಚಾರದಲ್ಲಿ

ನಮ್ಮ ಸಹಕಾರವಿದೆ. ಯಾವ ಯೋಜನೆಗಳಲ್ಲಿ ಹೆಚ್ಚು ಹಣವನ್ನು ತರಬಹುದು ಎಂಬುದೂ ನಮಗೆ ಗೊತ್ತಿದೆ. Planning Commission ವ್ಯಾಪ್ತಿಯಲ್ಲೂ ಹೆಚ್ಚು ಹಣವನ್ನು ಕೊಡಲು ಅವಕಾಶವಿದೆ. ಮೊನ್ನೆ Study report ಬಂದಾಗ Planning Commission ನವರು ಕರ್ನಾಟಕದಿಂದ ಕುಡಿಯುವ ನೀರಿನ ವಿಚಾರದಲ್ಲಿ ಒಂದೇ ಒಂದು ಪ್ರಪೋಸಲ್ ಬಂದಿಲ್ಲವೆಂದು ಹೇಳಿದರು. ನಿಮ್ಮ officers ಏನಿದ್ದಾರೆ, ದೆಹಲಿಯಲ್ಲಿ Special Representative ಮಾಡಿದ್ದೀರಿ. ಈಗ ಇನ್ನೊಬ್ಬರನ್ನು ಮಾಡಿಕೊಂಡು ಕುಳಿತಿದ್ದೀರಿ. ದಯಮಾಡಿ ಅವರನ್ನು ಕಳುಹಿಸಿ ಕುಡಿಯುವ ನೀರಿನ ವಿಚಾರದಲ್ಲಿ ಯಾವ್ಯಾವ ಯೋಜನೆಗಳಿದೆ ಎಂಬುದನ್ನು ಕೇಳಿ ತರಿಸಿ ಆ ಯೋಜನೆಗಳನ್ನು ಮಾಡುವ ಕೆಲಸ ಮಾಡಿ. ಕುಡಿಯುವ ನೀರಿನ ಯೋಜನೆಗಳನ್ನು ಮಾಡಬೇಕಾದಾಗ ಇವತ್ತು world Bank ಯಿಂದ ಹಣವನ್ನು ತರುತ್ತೇವೆಂದು ಹೇಳುತ್ತೀರಿ. world Bankನಿಂದ ದುಡ್ಡನ್ನು ತಂದು submission ವ್ಯಾಪ್ತಿಯಲ್ಲಿರತಕ್ಕ ಎಲ್ಲಾ ಯೋಜನೆಗಳನ್ನು ಮುಗಿಸತಕ್ಕ ಕೆಲಸವನ್ನು ಮಾಡದಿದ್ದರೆ ರೈತರಿಗೆ ಯಾವುದೇ ರೀತಿಯಾದ ನೆರವು, ಸಹಾಯವನ್ನು ಮಾಡಿದಂತೆ ಆಗುವುದಿಲ್ಲ.

ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಈ ಯೋಜನೆಯ ಬಗ್ಗೆ ಈಗಾಗಲೇ ನಿಮಗೂ ಗೊತ್ತಿದೆ. ನೆರೆ ರಾಜ್ಯಗಳಾದ ಆಂಧ್ರ, ರಾಜಾಸ್ತಾನ, ಗುಜರಾತ್‌ಗಳಲ್ಲಿ ಯೋಜನೆಯಲ್ಲಿ ಎಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ನಾವು ಏಕೆ ಹಣವನ್ನು ಖರ್ಚು ಮಾಡಲು ಆಗುತ್ತಿಲ್ಲ. ಇದರಲ್ಲಿ ಆಡಳಿತಾತ್ಮಕ ವಾಗಿರುವ ತೊಂದರೆಗಳ ಬಗ್ಗೆ ಕುಳಿತು ಚರ್ಚೆ ಮಾಡಿ ಬಗೆಹರಿಸುವ ಕೆಲಸವನ್ನು ನೀವು ಮಾಡಬೇಕಾಗಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಈ ಯೋಜನೆ ಹೆಚ್ಚು ಸಮರ್ಪಕವಾಗಿ ಆಗುವ ಕೆಲಸವನ್ನು ಮಾಡಬೇಕು. ಬೆಳಗಾಂ ಅಂಥ ಜಿಲ್ಲೆಯಲ್ಲಿ ಒಂದು ದಿನಕ್ಕೆ ಒಂದು ಕೋಟಿ ಇದರಲ್ಲಿ ಖರ್ಚಾಗುತ್ತದೆ ಎನ್ನುವುದಾದರೆ ಬೇರೆ ಜಿಲ್ಲೆಗಳಲ್ಲಿ ಏಕೆ ಆಗುತ್ತಿಲ್ಲ? ಅಲ್ಲಿ ತೊಂದರೆಯೇನಿದೆ? ಕೆಲಸ ಮಾಡಿ ಒಂದು ತಿಂಗಳಾದರೂ ಪೇಮೆಂಟ್ ಆಗುತ್ತಿಲ್ಲ. ಇಲ್ಲಿ Secretariat ನಲ್ಲಿ on line payment ಕೊಡುತ್ತಿದ್ದೇವೆಂದು ಹೇಳುತ್ತಾರೆ. on line payment ಕೊಟ್ಟರೂ adjust ಆಗುತ್ತಿಲ್ಲ. ಕೂಲಿ

ಮಾಡಿರುವವರಿಗೆ ಇವತ್ತಿನವರೆಗೆ ಕೂಲಿಯ payment ಆಗುತ್ತಿಲ್ಲ. ಏಕೆ ಈ ರೀತಿ ಆಗುತ್ತಿದೆ? ಎಲ್ಲೋ ಒಂದು ಕಡೆ ಅಧಿಕಾರಿಗಳ ಮಟ್ಟದಲ್ಲಿ ವಿಶೇಷ ವಾಗಿ ಗಮನಹರಿಸಿ ಈ ಯೋಜನೆಯ ಕೆಲಸ ಮಾಡಬೇಕು.

ಇವತ್ತು ನೀವು ಬರ ಬಂದಿರುವುದಕ್ಕೋಸ್ಕರ ಕೇಂದ್ರ ಸರ್ಕಾರದ ಮುಂದೆ ಹಣ ಬೇಕೆಂದು ಹೋಗುತ್ತಿದ್ದೀರಿ. ನೀವು study report ಕೊಡತ್ತೀರಿ, ಒಂದೂವರೆ ಕೋಟಿ ರೂಪಾಯಿ ಹಣ ಬೇಕೆಂದು ಕೇಳುತ್ತೀರಿ. ನೀವು ಅದನ್ನು ಏಕೆ ಕೇಳುತ್ತೀರಿ? ನೀವು ಉದ್ಯೋಗ ಖಾತ್ರಿಯಲ್ಲಿ ಸರಿಯಾಗಿ ಕೆಲಸ ಮಾಡಿದರೆ ನೀವು ಅದರ ನಾಲ್ಕರಷ್ಟು ಲಾಭ ತೆಗೆದುಕೊಳ್ಳಬಹುದು. ಉದ್ಯೋಗ ಖಾತ್ರಿ ಯೋಜನೆ ನಮ್ಮ ರಾಜ್ಯ ಸರ್ಕಾರಗಳಿಗೆ ಒಂದು ವರದಾನ. ಅದೊಂದು ಮಹತ್ತರವಾದಂತಹ ಯೋಜನೆ. ಆ ಯೋಜನೆಯ ಪ್ರಯೋಜನವನ್ನು ಪಡೆಯುವಂತಹ ಕೆಲಸವನ್ನು ನಾವು ಏಕೆ ಮಾಡುತ್ತಿಲ್ಲ. ಆ ಪ್ರಯೋಜನ ವನ್ನು ಪಡೆಯಬೇಕಾದಾಗ ಇವತ್ತು ನಮ್ಮಲ್ಲಿ ಆಡಳಿತಾತ್ಮ ಕವಾಗಿ ಇರುವಂತಹ ತೊಂದರೆಗಳೇನಿದೆ, ಹಣಕಾಸಿನ ಅಡ್ಜಸ್ಟ್‌ಮೆಂಟ್ ಇವತ್ತು ನೇರವಾಗಿ ಪಂಚಾಯಿತಿಗೆ ಹೋಗುತ್ತದೆ. ಹಣ ನೇರವಾಗಿ ಪಂಚಾತಿಯಿಗೆ ಹೋದರೂ ಕೂಡ ಆ ಹಣ ಸದ್ವಿನಿಯೋಗವಾಗುತ್ತಿಲ್ಲ, ಬಿಡುಗಡೆಯಾಗುತ್ತಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಬಹಳ ಮುಖ್ಯವಾದ ವಿಚಾರ ಮಾನ್ಯ ಈಶ್ವರಪ್ಪನವರ ಇಲಾಖೆಗೆ ಸಂಬಂಧಪಟ್ಟಿದ್ದಾಗಿದ್ದು, ನೀವು ಬಹಳ ಉತ್ಸಾಹದಿಂದ ಏನೆಲ್ಲಾ ಸಾಧನೆ ಮಾಡಬಹುದು ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಗಳಲ್ಲಿ ಹೇಳಿರುವುದನ್ನು ನೋಡಿದ್ದೇನೆ. ನಮ್ಮಲ್ಲಿ ಇವತ್ತು ಏನು ಆಗುತ್ತಿರುವುದು? ನಮ್ಮ ವಿದ್ಯುತ್ ಉತ್ಪಾದನೆ ಎಷ್ಟಿರತಕ್ಕಂಥಾದ್ದು ಎಂದರೆ Installed capacity is 9,559 ಮೆಗಾವ್ಯಾಟ್. Installed capacityನಲ್ಲಿ generation ಎಷ್ಟಾಗುತ್ತದೆ ಎನ್ನುವುದನ್ನು ಕೂಡ ನೀವು ಅರ್ಥ ಮಾಡಿಕೊಳ್ಳಬೇಕು. ಬಹುಶಃ ಯಾವ ಸಂದರ್ಭದಲ್ಲಿ ಕೂಡ ಶೇಕಡ 60 ರಿಂದ 65 ರಷ್ಟು ಇವತ್ತು generation ಆಗುವುದಕ್ಕೆ ಸಾಧ್ಯವಾಗಿಲ್ಲ. ನಿಮಗೆ generation ಬರುತ್ತಿರುವುದು ಜಾಸ್ತಿಯೆಂದರೆ 6,000 ಮೆಗಾವ್ಯಾಟ್ ಬರಹುದು. ನಿಮಗೆ ಕೊರತೆ ಬೀಳುತ್ತಿರುವುದು ಎಷ್ಟು? ಇವತ್ತು ರೈತರು ಏಕೆ ಈ ಮಟ್ಟಕ್ಕೆ ಆಗಿದ್ದಾರೆ? ಇವತ್ತು ಕೃಷಿಕರು ಏಕೆ ಬಡವರಾಗಿದ್ದಾರೆ? ಇವತ್ತು

ವಿದ್ಯುಚ್ಛಕ್ತಿಯನ್ನು ನಂಬಿಕೊಂಡು ಇಟ್ಟಂತಹ ಬೆಳೆ ಹಾಳಾಗಿ ಹೋಗಿದೆ, ಬರ ಬಂದಿದೆ, ಈಗ ಅವರಿಗೆ ವಿದ್ಯುಚ್ಛಕ್ತಿ ವ್ಯವಸಾಯಕ್ಕೆ ಅಲ್ಲ, ಅವರ ದೈನಂದಿನ ಚಟುವಟಿಕೆಗಳಿಗೋಸ್ಕರ ಎಂದರೆ ಮಕ್ಕಳನ್ನು ಓದಿಸುವುದಕ್ಕೆ ಆಗದಿರುವಂತಹ ಪರಿಸ್ಥಿತಿ ಬಂದಿದೆಯಲ್ಲ ಏಕೆ? ಈ ಅಂಕಿ ಅಂಶಗಳು ನಿಮ್ಮ ಹತ್ತಿರ ಇಲ್ಲವೆಂದು ಅಲ್ಲ, ನಿಮ್ಮ ಹತ್ತಿರ ಇದೆ. ಆದರೆ ಇವತ್ತು ನಿಮ್ಮ ಪುಣ್ಯಕ್ಕೆ ಎಲ್ಲಾ ನದಿಗಳು ತುಂಬುತ್ತಿವೆ. ನಿಮಗೆ Hydro- generation ಗೆ ಏನೂ problem ಇಲ್ಲ. ಯಾವತ್ತು ಶರಾವತಿ ತುಂಬದಿರುವುದು ಈಗ ತುಂಬುತ್ತಿದೆ. ಅದು ಹೋದ ವರ್ಷ ಕೂಡ ತುಂಬಿತ್ತು, ಈ ವರ್ಷ ಕೂಡ ತುಂಬುತ್ತಿದೆ. ಹಾಗಿದ್ದಾಗ ಈ ರೀತಿಯಾದಂತಹ ವಾತಾವರಣ ಇದ್ದಾಗ ಮಳೆಗಾಲದಲ್ಲಿ ಕೂಡ ನೀವು power cut ಮಾಡುತ್ತೀರಿ. ಹಳ್ಳಿಗಳಲ್ಲಿ 14 ಗಂಟೆ power cut ಮಾಡುತ್ತೀರಿ. ಇವತ್ತು ಬೆಂಗಳೂರು ನಗರವೊಂದರಲ್ಲಿ ಬಿಟ್ಟರೆ ಎಲ್ಲಾ ಕಡೆ power cut ಮಾಡುತ್ತೀರೆಂದರೆ ಏಕೆ ಈ ರೀತಿ ಮಾಡುತ್ತೀರಿ? ರೈತರು ಯಾವ ರೀತಿಯಾಗಿ ಇದನ್ನು ನಂಬಿ ಜೀವನ ಮಾಡುವುದು? ಇವತ್ತು demand ಜಾಸ್ತಿಯಾಗಿದೆ. ಇವತ್ತು ರೈತರು ಅವರ ತೋಟ ತುಡಿಕೆಗಳನ್ನು ಉಳಿಸಿಕೊಳ್ಳಬೇಕಾದರೆ ಅನಿವಾರ್ಯವಾಗಿ ವಿದ್ಯುಚ್ಛಕ್ತಿ ಮೊರೆ ಹೋಗಬೇಕಾಗಿದೆ. ಮೊದಲಿನಿಂದಲೂ ಆ ರೀತಿಯಾಗಿ ವಿದ್ಯುಚ್ಛಕ್ತಿಯನ್ನು ಅವಲಂಬಿಸಿ ಇವತ್ತು horticulture crop ಅನ್ನು ಅವರು ಬೆಳೆಸಿಕೊಂಡು ಬಂದಿದ್ದಾರೆ ಎಂದು ಮೇಲೆ ಅವರು ಯಾವ ರೀತಿಯಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ? ಇವತ್ತು ಮುಖ್ಯವಾಗಿ ನೀವು ವಿದ್ಯುಚ್ಛಕ್ತಿಯಲ್ಲಿ ಹೆಚ್ಚು ಸಾಧನೆಯನ್ನು ಮಾಡಬೇಕು. ನೀವು ಸಾಧನೆ ಮಾಡುತ್ತಿದ್ದೀರೋ, ಬಿಡುತ್ತಿದ್ದೀರೋ ಎನ್ನುವುದಕ್ಕೆ ಹೋದ ವರ್ಷ ನೀವೇ ಹೇಳಿದ ಪ್ರಕಾರ ಎರಡು–ಮೂರು ಸಾವಿರ ಕೋಟಿ ರೂಪಾಯಿಯಷ್ಟು ವಿದ್ಯುಚ್ಛಕ್ತಿಯನ್ನು high priceಗೆ ತಂದು ಕೊಟ್ಟೆವು, ಹಾಗಾಗಿ ನಮಗೆ ಕೊಡುವುದಕ್ಕೆ ಆಗಲಿಲ್ಲವೆಂದು ಹೇಳಿದಿರಿ. ನನಗೆ ಅನಿಸುತ್ತಿರುವುದು ನಿಮ್ಮ ಅಂಕಿ ಅಂಶಗಳ ಪ್ರಕಾರ ಕೇವಲ ಒಂದೂವರೆ ಸಾವಿರ ಮೆಗಾವ್ಯಾಟ್ ವಿದ್ಯುತ್ ಕೊರತೆ ಇದ್ದಾಗ ಏಕೆ 14 ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕಟ್ ಮಾಡುವಂತಹ ಪ್ರಶ್ನೆ ಬಂತು? ಇದನ್ನು ನೋಡಿದಾಗ ಎಲ್ಲೋ ಒಂದು ಕಡೆ managementನಲ್ಲಿ ತಪ್ಪಾಗುತ್ತಿದೆ. Generation pointನಲ್ಲಿ ತಪ್ಪಾಗುತ್ತಿದೆ. Generation ಆಗುತ್ತಿಲ್ಲ ಎನ್ನುವ ಭಾವನೆ ಇವತ್ತು ಯಾರಿಗಾದರೂ ಬರುವುದಕ್ಕೆ ಸಾಧ್ಯವಿದೆ. ಇವತ್ತು ಆ

ವಿಚಾರದಲ್ಲಿ ತಾವು ಏನು ಉತ್ತರ ಹೇಳುತ್ತೀರಿ ಎನ್ನುವುದನ್ನು ನಾವು ನೋಡ ಬೇಕಾಗುತ್ತದೆ. ಇವತ್ತು ನಿಜವಿದೆ, installed capacity ಯಲ್ಲಿ ಕಡಿಮೆ generation ಇರತಕ್ಕಂಥಾದ್ದು ಏನಿದೆ, ಇದನ್ನು ನಾವು ಯಾರೂ ಆರೋಪ ಮಾಡುವುದಲ್ಲ. ಯಾವುದೇ ಒಂದು generation ಮಾಡಬೇಕಾದರೂ ಕೂಡ ಆ ಯೋಜನೆಗಳು ಪರಿಪೂರ್ಣವಾಗಿ ಮುಗಿಯಬೇಕಾದಾಗ, ಅವುಗಳು commission ಆಗಬೇಕಾದಾಗ ಮೂರು ವರ್ಷ, ನಾಲ್ಕು ವರ್ಷ, ಐದು ವರ್ಷ, ಆರು ವರ್ಷ ಬೇಕಾಗುತ್ತದೆ. ಈಗ ಒಂದು ವರ್ಷಕ್ಕೆ ಒಂದು ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತೇವೆಂದು ಎಂದು ನೀವು ಹೇಳಿದಿರಿ. ಈ ರೀತಿ ಹೇಳುತ್ತೀರಲ್ಲ, ಈಗ ನೀವು 1,160 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಈ ವರ್ಷಕ್ಕೆ ಏನು ಮಾಡಿದ್ದೀರಿ, ಅದು ಯಾವ ಮೂಲದಿಂದ ಬಂದಿರುವಂತಾದ್ದು? ಆ ಯೋಜನೆಗಳು ನಿಮ್ಮಿಂದ ಆಗಿದ್ದವೇ ಅಥವಾ ಆ ಯೋಜನೆಗಳನ್ನು ಹಿಂದೆ ಯಾರಾದರೂ ಹಾಕಿದ್ದರೇ? ಇದು ನಿರಂತರವಾಗಿ ಐದಾರು ವರ್ಷಗಳಿಂದ, ಅದು ವರಾಹಿ ಇರಬಹುದು, ಬಿಟಿಪಿಎಸ್ ಪ್ರಾಜೆಕ್ಟ್ ಇರಬಹುದು, ಹತ್ತಾರು ವರ್ಷಗಳಿಂದ ಮಾಡಿಕೊಂಡು ಬಂದಿರುವಂತಹ ಪ್ರಾಜೆಕ್ಟ್‌ಗಳಿಂದ ಬಂದಿರುವಂತಹ 1,160 ಮೆಗಾವ್ಯಾಟ್ ವಿದ್ಯುತ್‌ಗೆ, ಇವತ್ತು ನಾವು promise ಮಾಡಿರುವುದಕ್ಕಿಂತ ಜಾಸ್ತಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದ್ದೇವೆನ್ನುವ ಮಾತನ್ನು ಹೇಳಿದ್ದೀರಿ. ಇವತ್ತು ನೀವು ಯಾವುದೇ ಒಂದು ಯೋಜನೆಯನ್ನು ಕೈಗೆತ್ತಿಕೊಂಡರೆ ಅದರ ಫಲ ಸಿಗಬೇಕಾದರೆ ನಾಲ್ಕೈದು ವರ್ಷ ಬೇಕಾಗುತ್ತದೆ. ನಿಮ್ಮ ಯೋಜನೆಗಳು ಬಹಳಷ್ಟು ಇವೆ, ನೀವು ಬಹಳಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಆದರೆ ಅವೆಲ್ಲವೂ ಎಷ್ಟರಮಟ್ಟಿಗೆ success ಆಗುತ್ತದೆ ಎನ್ನುವುದು ಒಂದು ವಿಚಾರ. ಅವುಗಳು success ಆಗಲಿ ಎನ್ನುವುದು ನಮ್ಮ ಭಾವನೆ. ಅದಕ್ಕೆ ನೀವು ಮಾಡಬೇಕಾಗಿರುವುದು ಏನೆಂದರೆ ಬೆಳಿಗ್ಗೆ ಎದ್ದತಕ್ಷಣ ನೀವು ಡೆಲ್ಲಿ ಕಡೆಗೆ ನೋಡಬೇಕು, ಬಯ್ಯುವುದಕ್ಕೆ ಹೋಗಬೇಡಿ. ನಿಮಗೆ ರಾಜ್ಯದ ಹಿತದೃಷ್ಟಿಯಿದ್ದರೆ ಕೇಂದ್ರ ಸರ್ಕಾರದ ಸಹಾಯವನ್ನು ಪಡೆದು ವಿದ್ಯುಚ್ಛಕ್ತಿಯನ್ನು ಹೆಚ್ಚು ಮಾಡುವುದರ ಬಗ್ಗೆ ಯೋಚನೆ ಮಾಡಬೇಕು. ನೀವು ಈಗ powerನ್ನು ಕೇಂದ್ರ ಸರ್ಕಾರದ ಜೊತೆಯಲ್ಲಿ ತರುವುದಕ್ಕೆ ಹೊರಟಿದ್ದೀರಿ. ಈಗ ನಿಮಗೆ 1,243 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಬರುತ್ತಿರುವುದು. ಅವರಿಗೂ ಕೂಡ ಇವತ್ತು 60% ಮೇಲೆ production

ಮಾಡುವುದಕ್ಕಾಗುತ್ತಿಲ್ಲ. ತಿಂಗಳಿಗೆ 50 ಮೆಗಾವ್ಯಾಟ್ ವಿದ್ಯುತ್‌ನ್ನು ಕಟ್ ಮಾಡಿದರೂ ರಾಜಕೀಯ ಉದ್ದೇಶದಿಂದ ಮಾಡಿದ್ದಾರೆ ಎಂದು ನೀವು ಹೇಳುತ್ತೀರಿ. ವಾಸ್ತವಿಕವಾದಂತಹ ಅಂಶಗಳನ್ನು ನೀವು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ದಯಮಾಡಿ ನೀವು ಕೇಂದ್ರಕ್ಕೆ ಹೋಗಿ ಬೇರೆ ಬೇರೆ ರಾಜ್ಯಗಳಿಗೆ ಕೊಡುವಂತಹ ಅವರ ಪಾಲಿನಲ್ಲಿ ಎಷ್ಟು ವಿದ್ಯುಚ್ಛಕ್ತಿಯನ್ನು ಕಟ್‌ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಬಹುಶಃ ನೀವು ಅರ್ಥ ಮಾಡಿಕೊಂಡಿದ್ದರೆ ರಾಜಕೀಯವಾಗಿ ಈ ರೀತಿಯ ಹೇಳಿಕೆಯನ್ನು ಕೊಡುತ್ತಿರಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ನೀವು ಕೇಂದ್ರ ಸರ್ಕಾರದ ಮುಂದೆ ಹೋಗಿ ಈಗ ಕೊಡುತ್ತಿರುವಂತಹ 1,500 ಮೆಗಾವ್ಯಾಟ್ ಸಾಲದು, ಇನ್ನೂ 1,000 ಮೆಗಾವ್ಯಾಟ್ ವಿದ್ಯುತ್ ಜಾಸ್ತಿ ಕೊಡಬೇಕೆಂದು ಒತ್ತಾಯವನ್ನು ಮಾಡಿ. ಅದಕ್ಕೆ ಎಲ್ಲರ ಸಹಾಯವನ್ನು ಪೂರ್ಣವಾಗಿ ಪಡೆಯಿರಿ. ನಮ್ಮ ಸಂಸತ್ ಸದಸ್ಯರ ಸಹಾಯವನ್ನು ಪಡೆಯಿರಿ. ಆ ರೀತಿಯಾಗಿ ನೀವು ಅವರನ್ನು ಒಲಿಸಿಕೊಂಡು ಮಾಡುವಂತಹ ಕೆಲಸವನ್ನು ಮಾಡ ಬೇಕಾಗುತ್ತದೆ. ಅದರಲ್ಲಿ ಎಲ್ಲೋ ಒಂದು ಕಡೆ ನೀವು ಎಡವುತ್ತಿದ್ದೀರಿ ಎನ್ನುವಂತಹ ಭಾವನೆ ನನ್ನಲ್ಲಿದೆ. ಈಗ ನೀವು ಮಾಡುತ್ತಿರುವಂತಹ ಯೋಜನೆಗಳು ಏನಿವೆ, ಅವುಗಳು ಬಹಳ ambitious projectಗಳನ್ನು ಹಾಕುವುದಕ್ಕೆ ಹೊರಟಿದ್ದೀರಿ. ನಿಮಗೆ ಇವತ್ತಿನವರೆಗೂ ಕೂಡ coal allotment ಸಿಕ್ಕಿದೆಯಾ? Linkage ಸಿಕ್ಕಿದೆಯಾ? Coal allotment ಸಿಕ್ಕಿಲ್ಲ, Linkage ಕೂಡ ಸಿಕ್ಕಿಲ್ಲ. ನೀವು ಅದನ್ನು KPTCL ಮುಖೇನನಾದರೂ ಮಾಡಿ, NTPC ಮುಖೇನನಾದರೂ ಮಾಡಿ, IPP methodನಲ್ಲಾದರೂ ಮಾಡಿ, ಎಲ್ಲೇ ಮಾಡಿದರೂ ಕೂಡ ನಿಮಗೆ coal linkage ಸಿಕ್ಕಿಲ್ಲದಿದ್ದಾಗ ನಿಮಗೆ ಯಾವ ರೀತಿಯಾಗಿ ಯೋಜನೆಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ? ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಸಾಧ್ಯವಾ ಗುತ್ತದೆ? ಇಲ್ಲಿ ನೀವು ಗಮನಹರಿಸಬೇಕಾಗಿರುವಂತಾದ್ದು. ಅದೆಲ್ಲಕ್ಕಿಂತ ಹೆಚ್ಚಾಗಿ ನೀವು ಗ್ಯಾಸ್ ಬಗ್ಗೆ ಮಹಾರಾಷ್ಟ್ರದಿಂದ ಬೆಂಗಳೂರಿನವರೆಗೂ ಕೂಡ ನಾವು pipeline ಹಾಕಬಹುದು ಎಂದು ಆಸೆಯನ್ನು ಕೂಡ ಇಟ್ಟು ಕೊಂಡಿದ್ದೀರಿ. ನಿಮ್ಮ proposal ಅನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ತಕ್ಷಣ ಅದು ಒಪ್ಪಿಗೆ ಆಗಿ ಹೋಯಿತು, ಅದು ಆಗಿ ಹೋಯಿತು ಎನ್ನುವ ಭಾವನೆ ಬೇಡ. ನೀವು ಅದನ್ನು pursue ಮಾಡಬೇಕಾಗುತ್ತದೆ, ಅವರ ತಲೆ ಮೇಲೆ

ಕೂರ ಬೇಕಾಗುತ್ತದೆ. ಅದಕ್ಕೆ formalities ತುಂಬಾ ಇದೆ, formalities ತುಂಬಾ ಇದ್ದಾಗ ಅದಕ್ಕೆ clearances ಪಡೆಯುವುದರ ಬಗ್ಗೆ ಏನು ಮಾಡಿದ್ದೀರಿ ಎನ್ನುವುದು ಬಹಳ ಮುಖ್ಯ. ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ ಮಾನ್ಯ ಪ್ರಧಾನ ಮಂತ್ರಿಯವರು ಕೂಡ ಬಹಳ ಆಸಕ್ತಿಯನ್ನು ವಹಿಸುತ್ತಿದ್ದಾರೆ. ಕೈಗಾದಲ್ಲಿ ಕೇವಲ 700 ಮೆಗಾವ್ಯಾಟ್ ನಿಮ್ಮ ಉತ್ಪಾದನೆ ಬರುತ್ತಿರುವುದು. ನೀವು ಅದನ್ನು ಏಕೆ ಡಬಲ್ ಅಥವಾ ತ್ರಿಬಲ್ ಮಾಡಬಾರದು? ಇಂತಹ ವಿಚಾರಗಳನ್ನು ನೀವು ಕೇಂದ್ರ ಸರ್ಕಾರದ ಮುಂದೆ ಇಟ್ಟು ನಾವು ಎಲ್ಲೋ ಒಂದು ಕಡೆಗೆ ಗ್ರೀನ್ ಪವರ್‌ನ್ನು ಹೆಚ್ಚು ಮಾಡಬೇಕು, ಅದರ ಮುಖೇನ ನಾವು ಹೆಚ್ಚು ಪವರ್ ಅನ್ನು ತರಬೇಕು ಎನ್ನುವುದರ ಬಗ್ಗೆ ನೀವು ಯೋಚನೆ ಮಾಡದಿದ್ದರೆ ಬಹಳಷ್ಟು ಕಷ್ಟವಾಗುತ್ತದೆ. ನೀವು ಹೇಳಿದಂತಹ ಮಾತನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ನೀವು ಏನು ಪ್ಲಾನ್ ಅನ್ನು ಹಾಕಿಕೊಂಡಿದ್ದೀರಿ, ಅವುಗಳಿಗೆ ಇನ್‌ವೆಸ್ಟ್‌ಮೆಂಟ್ ಎಲ್ಲಿ? ನಿಮ್ಮ ಸರ್ಕಾರ ಬಂದು ಒಂದು ವರ್ಷ ನಾಲ್ಕು ತಿಂಗಳಲ್ಲಿ ಎಷ್ಟು ಇನ್‌ವೆಸ್ಟ್‌ಮೆಂಟ್ ಮಾಡಿದ್ದೀರಿ? Power proposal ಕೊಟ್ಟಿರುವುದರ ಜೊತೆಗೆ ನೀವೇ ಸ್ವತಃ ಎಷ್ಟು ಬಂಡವಾಳ ಹಾಕಿದ್ದೀರಿ ಎಂದು ಹೇಳಬೇಕು. ಇನ್ನೊಂದು ಮುಖ್ಯವಾಗಿರುವಂಥ ವಿಚಾರವೇನೆಂದರೆ, ನಾನು ಅರ್ಥ ಮಾಡಿಕೊಂಡಿರುವ ಪ್ರಕಾರ 500–600 ಕೋಟಿ ರೂಪಾಯಿಗಳ ಲಾಭವಿದ್ದಂಥ ಎಸ್ಕಾಂಗಳು ಇವತ್ತು ನಷ್ಟ ಅನುಭವಿಸುತ್ತಿವೆ. ಇವತ್ತು ಎಸ್ಕಾಂನಲ್ಲಿದ್ದಂಥ ದುಡ್ಡನ್ನು power purchaseಗೋಸ್ಕರ high price ಕೊಟ್ಟು purchase ಮಾಡುವುದಕ್ಕೆ ಹೋಗಿ ಇವತ್ತು ಅವೆಲ್ಲಾ defunct ಆಗಿವೆ. ಅವರಿಗೆ ನೀವು ಹಣವನ್ನು ಏನು ಬಿಡುಗಡೆ ಮಾಡಬೇಕಾಗಿತ್ತೋ ಆ ಹಣವನ್ನು ಬಿಡುಗಡೆ ಮಾಡಲಿಲ್ಲ. ನೀವು ಏನು ಮಾಡಿದ್ದೀರೆಂದರೆ ಎಸ್ಕಾಂನಲ್ಲಿದ್ದಂಥ ದುಡ್ಡನ್ನು ಖಾಲಿ ಮಾಡಿಸಿದ್ದೀರೇ ವಿನಃ ನೀವು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಬೇಕಾದಂಥ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ಅವರು capital expenditure ಏನು ಮಾಡಬೇಕೆಂದು planning ಮಾಡಿಕೊಂಡಿದ್ದಾರೆ, ಅದು ಯಾವುದು ಒಂದೂ ಕೂಡ ಸಾಧನೆಯಾಗುವುದಿಲ್ಲ. ಅದು transmission line ಹಾಕುವಂಥಾದ್ದು ಇರಬಹುದು, power station install ಮಾಡುವಂಥಾದ್ದು

ಇರಬಹುದು, ಅವು ಯಾವುದನ್ನೂ ಮಾಡುವುದಕ್ಕಾಗುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಸ್ಕಾಂ financial position problem ನಲ್ಲಿದ್ದಂಥ ಸಂದರ್ಭದಲ್ಲಿ ನೀವು ಯಾವುದೇ ಯೋಜನೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ನಿಮಗೆ transmission loss ಆಗುತ್ತದೆ. ಈಗಾಗಲೇ ನೀವು ಸಾಕಷ್ಟು power stationಗಳನ್ನು ಮಾಡಿದ್ದೇವೆಂದು ಹೇಳುತ್ತೀರಿ, ಸಾಧನೆಯನ್ನು ಮಾಡಿದ್ದೇವೆಂದು ಹೇಳುತ್ತೀರಿ, transmission loss ಅನ್ನು ಕೂಡ ಕಡಿಮೆ ಮಾಡಿದ್ದೇವೆಂದು ಮಾತನ್ನು ಹೇಳುತ್ತೀರಿ. ನಿಜ, ಅದನ್ನು ನೀವು ಮಾಡಬೇಕಾಗುತ್ತದೆ, ಅದನ್ನು ಒಂದೇ ದಿವಸದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ನೀವು ಅದನ್ನು ಒಂದೇ ದಿವಸದಲ್ಲಿ ಮಾಡಬೇಕಾದಾಗ ಹೆಚ್ಚು ಬಂಡವಾಳವನ್ನು ತೊಡಗಿಸಬೇಕಾಗುತ್ತದೆ. ಸರ್ಕಾರದಿಂದ ಯಾವುದಕ್ಕೂ ಹಣವನ್ನು ಕೊಡದೇ, ನಾವು power generation ಬಗ್ಗೆ ಹಳೆಯ ಯೋಜನೆಗಳಿಂದ ಒಂದು ಸಾವಿರ ಮೆಗಾವ್ಯಾಟ್ add ಮಾಡಿದ್ದೇವೆ, ಮುಂದಕ್ಕೆ ಒಂದೊಂದು ವರ್ಷಕ್ಕೆ 1,000 ಮೆಗಾವ್ಯಾಟ್ add ಮಾಡುತ್ತೇವೆಂದು ಹೇಳುತ್ತೀರಲ್ಲಾ, ಅದಕ್ಕೆ basis ಏನು? ನಿಮ್ಮ financial involvement ಏನು? ಯಾವ್ಯಾವ ರೀತಿಯಾದ ನೀವು ತಂದಿದ್ದೀರಿ. ದಯಮಾಡಿ ಇದೆಲ್ಲದರ ಬಗ್ಗೆ ತಾವು ಉತ್ತರ ನೀಡುವಾಗ ಮಾಹಿತಿಯನ್ನು ಕೊಡಬೇಕು. ನಿಮ್ಮ ಪುಣ್ಯಕ್ಕೆ ಈ ಸಾರಿ ಮಳೆ ತುಂಬಾ ಚೆನ್ನಾಗಿ ಬಂದಿದೆ. ಆದರೂ ಕೂಡ ವಿದ್ಯುತ್‌ನ ಬೇಡಿಕೆ ಏನೂ ಕಡಿಮೆಯಾಗುವುದಿಲ್ಲ. ಎಲ್ಲೋ ಒಂದು ಕಡೆಗೆ ಮುಂಗಾರು ಮಳೆಯನ್ನೇ ನೆಚ್ಚಿಕೊಂಡಿದ್ದಂಥ ಜಿಲ್ಲೆಗಳು ಏನು ಇವೆ ಅವುಗಳು ಇವತ್ತು ಬರಗಾಲಕ್ಕೆ ತುತ್ತಾಗಿರುವಂಥಾದ್ದಕ್ಕೆ electricityಯ ಮೇಲೆ ಹೆಚ್ಚಿನ ಒತ್ತಡವಿರುತ್ತದೆ. ಅವರನ್ನು ನೀವು satisfy ಮಾಡಲೇ ಬೇಕಾಗುತ್ತದೆ. ಈ ವಿಷಯವಾಗಿ ತಾವು ಯೋಚನೆ ಮಾಡಿ. ಇನ್ನೊಂದು ಕಡೆಗೆ ನಮ್ಮ ನೀರಾವರಿ ಯೋಜನೆಗಳೆಲ್ಲವೂ ಅದು ಆಲಮಟ್ಟಿಯಲ್ಲಿ ಬಳಕೆಯಾಗದೇ ಇರುವಂಥ 120 ಟಿ.ಎಂ.ಸಿ, 130 ಟಿ.ಎಂ.ಸಿ. ನೀರು ಏನು ಇದೆ. ನೀವು ಈಗ lift irrigationಗೆ propose ಮಾಡುತ್ತಿದ್ದೀರಿ. ಆ Lift irrigationಗೆ electricity ಹೆಚ್ಚಿಗೆ ಬೇಕಾಗುತ್ತದೆ, ಇಲ್ಲವೆಂದರೆ ಇವತ್ತು ನೀವು ಹಾಕಿರುವಂಥ ಬಂಡವಾಳ ಏನೂ ಉಪಯೋಗವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು

lift irrigationಗೆ ಸಾಕಷ್ಟು ಮುಂದುವರೆದ ಯೋಜನೆಗಳು ಆಗಿವೆ. ಇವತ್ತು ಅನಿವಾರ್ಯವಾಗಿ ಇರುವ ನೀರನ್ನು ಬಳಕೆ ಮಾಡಿಕೊಳ್ಳಬೇಕಾದಾಗ ನಾವು lift irrigationಗೆ ಹೋಗಲೇ ಬೇಕಾದಂಥ ಅನಿವಾರ್ಯ ಪರಿಸ್ಥಿತಿ ಇದೆ. ಇವತ್ತು domesticಗೆ ಆಗಲಿ, industries ಗಳಿಗಾಗಲಿ, ನೀರಾವರಿ ಯೋಜನೆಗಳಿಗೆ ವಿದ್ಯುಚ್ಛಕ್ತಿ ಬೇಕೆಂದಾಗ ನಿಮ್ಮ ಕನಸಿನ ಯೋಜನೆಗಳು ಏನು ಇವೆ ನೀವು ಪ್ರಸ್ತಾವನೆಯನ್ನು ಮಾಡಿರುವಂಥ ಯೋಜನೆಗಳು ಅನುಷ್ಠಾನಕ್ಕೆ ಬರಬೇಕೆಂದರೆ ಅದಕ್ಕೆ ಪ್ರಾಮಾಣಿಕವಾಗಿ ಹಣವನ್ನು ತುಂಬುವಂಥ ಕೆಲಸ ಮಾಡಬೇಕು. ಆ ಕೆಲಸವನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಈಗಾಗಲೇ ನಿಮಗೆ 1,000 ಕೋಟಿಗಳಿಗೂ ಮೀರಿ ಲಾಸ್‌ನಲ್ಲಿವೆ. ನೀವು ಇದನ್ನು ಹೇಗೆ manage ಮಾಡುತ್ತೀರಿ? ನೀವು ಈ power transmission loss ಅನ್ನು ಹೇಗೆ ಮಾಡುತ್ತೀರಿ? ನೀವು ಹೇಳಿದ ವಿಷಯವನ್ನು ನಾನು ಎಲ್ಲೋ ಒಂದು ಕಡೆ ನೋಡಿದೆ. ನಿಮಗೆ ರಾಜೀವ್ ಗಾಂಧಿ ವಿದ್ಯುತ್ ಯೋಜನೆಯಿಂದ 388 ಕೋಟಿ ರೂಪಾಯಿಗಳು ಬಂತೆಂದು ನೀವು ಕೇಂದ್ರಸರ್ಕಾರವನ್ನು ಅಭಿನಂದಿಸಿದ್ದೀರಿ. ನೀವು ಕೇಂದ್ರ ಸರ್ಕಾರದೊಂದಿಗೆ ವಿಚಾರ ಮಾಡುವಂಥ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ನೀವು ನಿಮ್ಮಲ್ಲಿರುವಂಥ special representatives, special commissionerಗಳು ಇದ್ದಾರಲ್ಲಾ, ಅವರ ಹತ್ತಿರ ಹೋಗಿ ನೀವು ಮತ್ತು ಮಾನ್ಯ ಮುಖ್ಯಮಂತ್ರಿಯವರು day to day information ತರಿಸಿಕೊಳ್ಳು ತ್ತಿದ್ದರೆ ಮಾತ್ರ ಈ ಯೋಜನೆಗಳು ಮುಂದುವರೆಯುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲವೆಂದರೆ ಇಲ್ಲವೆಂದು ನಾನು ನನ್ನ ಅನುಭವದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಇಲ್ಲವೆಂದರೆ ಜನರು ಶಾಪ ಹಾಕುತ್ತಾರೆ. ಇವತ್ತು ಯಾವುದೇ ರೀತಿಯಲ್ಲೂ ಕ್ರಾಂತಿಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಮಾತನ್ನು ತಾವು ಒಪ್ಪಬೇಕಾಗುತ್ತದೆ. ಇವತ್ತು industrial meetನ್ನು ಮಾಡುತ್ತೇವೆ. ಹೊರದೇಶದಿಂದ ಸಾಕಷ್ಟು ರೀತಿಯಲ್ಲಿ ಬಂಡವಾಳ ಹರಿದು ಬರುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಾವು ಈಗಾಗಲೇ ಬೀಜಿಂಗ್‌ಗೆ, ಚೈನಾ ದೇಶಕ್ಕೆ ಹೋಗಿ ಬಂದಿದ್ದೀರಿ. ಆ ಉದ್ದೇಶ ತಮಗೆ ಸರಿ ಇರಬಹುದು. ಅದರೆ ನೀವು ಅವರಿಗೆ ಮೂಲಭೂತವಾಗಿ ಎಲ್ಲಿಯವರೆಗೆ ವಿದ್ಯುಚ್ಛಕ್ತಿಯನ್ನು ಕೊಡುವಂಥ ವಾತಾವರಣವನ್ನು ಸೃಷ್ಟಿ ಮಾಡುವುದಿಲ್ಲ, ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ,

ವಿದ್ಯುಚ್ಛಕ್ತಿಯನ್ನು reasonable rateಗೆ ಕೊಡುವುದಿಲ್ಲ, ಅಲ್ಲಿಯವರೆಗೂ ಕೂಡ ಇಲ್ಲಿ ಯಾವ ಕೈಗಾರಿಕೆಗಳು ಬಂಡವಾಳವನ್ನು ಹೂಡುವುದಕ್ಕೆ ಬರುವುದಿಲ್ಲ. ಇದೆಲ್ಲಾ ಪೇಪರ್‌ಗಳ ಮೇಲೆ ಇರುವಂಥ ಯೋಜನೆಗಳು ಆಗುತ್ತವೆಯೇ ವಿನಃ ಕಾರ್ಯಗತವಾಗುವುದಿಲ್ಲ. ಈಗ ಆರ್ಥಿಕ ಕುಸಿತ ವಾಗಿದೆ, ಇವತ್ತು ಸಂಪನ್ಮೂಲವನ್ನು ಕ್ರೋಢೀಕರಿಸುವಂಥಾದ್ದು ಕಷ್ಟವಿದೆ. ಈ ಪರಿಸ್ಥಿತಿಯಲ್ಲಿ ಕೈಗಾರಿಕೋದ್ಯಮಿಗಳು ನಿಮ್ಮ ಬಗ್ಗೆ ವಿಶ್ವಾಸವನ್ನು ಇಟ್ಟುಕೊಳ್ಳ ಬೇಕೆಂದರೆ ಅವರಿಗೆ full electricityಯನ್ನು ಕೊಡಬೇಕಾಗುತ್ತದೆ. ನೀವು ಅವರಿಗೆ electricityಯನ್ನು ಕೊಡಬೇಕೆಂದಾಗ ನೀವು ಕೇಂದ್ರ ಸರ್ಕಾರ ದಿಂದ ನಿಮ್ಮ ಹೊಸ ಯೋಜನೆಗಳಿಗೆ ಒಪ್ಪಿಗೆಯನ್ನು ಪಡೆಯುವಂಥ ಕೆಲಸವನ್ನು ಇವತ್ತು ಮಾಡಬೇಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ನಾನು ಇನ್ನೂ ಮಾತನಾಡಬೇಕೆಂದರೆ ಸಾಕಷ್ಟು ವಿಚಾರಗಳನ್ನು ಮಾತನಾಡುವಂಥಾದ್ದು ಇದೆ. ಆದರೆ ಇಲ್ಲಿ ಇನ್ನು ಬೇರೆ ಸದಸ್ಯರು ಮಾತನಾಡುವುದಕ್ಕೆ ಅವಕಾಶವಾಗಬೇಕು. ಆದರೆ ಒಂದು ವಿಚಾರವೇನೆಂದರೆ ಮಾನ್ಯ ಮುಖ್ಯಮಂತ್ರಿಯವರು ತಂದಿರುವಂಥ ಈ ಪ್ರಸ್ತಾವನೆ ಏನು ಇದೆ, ಆ ಪ್ರಸ್ತಾವನೆಗೆ ಅರ್ಥ ಬರಬೇಕೆಂದರೆ ನೀವು ಯಾವ ರೀತಿ ಮಾಡುತ್ತಿರೋ ನನಗೆ ಗೊತ್ತಿಲ್ಲ. ನಾವು ನಿಮಗೆ ಯಾವ ರೀತಿಯ ಸಹಕಾರ ಬೇಕೆಂದರೂ ಕೊಡುತ್ತೇವೆ. ನೀವು ಮಾಡಬೇಕೆಂದರೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ದಿವಂಗತ ರಾಜಶೇಖರ ರೆಡ್ಡಿ ಯವರು ಏನು ಮಾಡಿದ್ದರು. ಆ ರೀತಿಯಾದಂಥ ತೀರ್ಮಾನವನ್ನು ನೀವು ಮಾಡಿದಾಗ ಮಾತ್ರ ಇವತ್ತು ರೈತರನ್ನು ಸಾಂತ್ವಾನ ಮಾಡುವುದಕ್ಕಾಗುತ್ತದೆ, ಇಲ್ಲವೆಂದರೆ ಆಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಇದು ಕೇವಲ ಗಾಳಿಯಲ್ಲಿ ಬಿಟ್ಟಂಥ ಒಂದು document ಆಗುತ್ತದೆಂಬ ಮಾತನ್ನು ನೀವು ಅರ್ಥ ಮಾಡಿಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. ಈಗ ನೀವು ತಂದಿರುವಂಥ ಪ್ರಸ್ತಾವನೆಗೆ ನನ್ನ ಸಹಮತಿಯನ್ನು ವ್ಯಕ್ತಪಡಿಸಿದ್ದೇನೆ. ಆದರೆ ಇವತ್ತು ಅನುಮಾನವನ್ನು ವ್ಯಕ್ತಪಡಿಸಿದ್ದೇನೆ. ಆದರೆ ಎಲ್ಲೋ ಒಂದು ಕಡೆಗೆ ಅದು ಏನೇ ಇರಲಿ, ಆ ಗುರಿಯನ್ನು ಮುಟ್ಟುವಂಥ ರೀತಿಯಲ್ಲಿ ಈ ರಾಜ್ಯದ ರೈತರು ನಮ್ಮನ್ನು ನಂಬಿದ್ದಾರೆ. ಅವನಿಗೆ ಇವತ್ತು ಶಕ್ತಿ ಬರುವಂಥ ರೀತಿಯಲ್ಲಿ ನಾವು ಎಲ್ಲ ರೀತಿಯ ಸಹಕಾರವನ್ನು ನಿಮಗೆ ಕೊಡುತ್ತೇವೆಂಬ ಮಾತನ್ನು ಹೇಳುತ್ತೇನೆ. ಈಗ ಇನ್ನು ಮಾತನಾಡುವಂಥ ಸದಸ್ಯರುಗಳು ಇನ್ನೂ ಹೆಚ್ಚಿನ

ಸಲಹೆಗಳನ್ನು ಕೊಡುತ್ತಾರೆ. ಈಗ ಆ ಅವಕಾಶವೂ ಸಿಕ್ಕಿದೆ. ನಾನು ಕೂಡ ಬೇರೆ ಸಲಹೆಗಳನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಈಗ ನಾನು ಹೆಚ್ಚು ಸಮಯ ಮಾತನಾಡುವುದು ಬೇಡವೆಂದು ಹೇಳಿ, ಈಗ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದುಸವದಿ (ತೇರದಾಳ) : ಮಾನ್ಯ ಉಪಾಧ್ಯಕ್ಷರೆ, ನನಗೆ ಈ ವಿಶೇಷ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಮೇಲೆ ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಒಬ್ಬ ಸಾಮಾನ್ಯ ರೈತ ಕುಟುಂಬದಿಂದ ಬಂದಿರುವಂಥ ವ್ಯಕ್ತಿಯಾಗಿ ದ್ದೇನೆ. ನನಗೆ ಕೃಷಿ ಬಗ್ಗೆ ವಿಶೇಷ ಮಾಹಿತಿ, ಅದರ ಬಗ್ಗೆ ಹೆಚ್ಚಿನ ಆಸಕ್ತಿ ಇದೆ. ಈಗಾಗಲೇ ಸಾಕಷ್ಟು ವಿಷಯವನ್ನು ನಮ್ಮ ಹಿರಿಯ ಸದಸ್ಯರುಗಳು ಮಾತನಾಡಿರುವ ಪ್ರಕಾರ ನಮ್ಮ ರಾಜ್ಯದ ರೈತನ ಬದುಕು ಹಸನಾಗಬೇಕಾದರೆ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬ ವಿಚಾರವಾಗಿ ಬಹಳಷ್ಟು ಇಲ್ಲಿ ಚರ್ಚೆಯಾಗಿದೆ. ಈಗಾಗಲೇ ಸಾಕಷ್ಟು ಯೋಜನೆಗಳ ಮುಖಾಂತರ ಹೆಚ್ಚಿಗೆ ನೀರಾವರಿಯನ್ನು ಉಪಯೋಗ ಮಾಡಿಕೊಂಡರೂ ಸಹಿತ, ಇನ್ನೂ ಅದರ ಹತ್ತಾರು ಪಟ್ಟು ನೀರನ್ನು ಸದುಪಯೋಗ ಮಾಡಿಕೊಂಡರೆ ರೈತರ ಬದುಕು ಹಸನಾಗುವುದಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅದಕ್ಕೆ ಇನ್ನೂ ಸಾಕಷ್ಟು ಅವಕಾಶಗಳು ಇವೆ. ಅದು ಬಂದರುಗಳು ಇರಬಹುದು, ಕೆರೆಗಳು ಇರಬಹುದು, ಹೊಂಡಗಳು ಇರಬಹುದು. ಈ ರೀತಿಯಾಗಿ ಎಲ್ಲೆಲ್ಲಿ ಅವಕಾಶಗಳು ಇವೆ. ಅದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಿಡಿದಿಟ್ಟುಕೊಂಡು ಕೃಷಿಗೆ ಇದನ್ನು ಉಪಯೋಗ ಮಾಡಿಕೊಂಡರೆ ರೈತರಿಗೆ ಇದರಿಂದ ಹೆಚ್ಚಿನ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದು ಅಲ್ಲದೇ ಈಗಾಗಲೇ ನೀರಾವರಿ ಅನುಕೂಲವಾಗಿರುವಂಥ ಪ್ರದೇಶಗಳಲ್ಲಿ ನೀರನ್ನು ವೈಜ್ಞಾನಿಕವಾಗಿ ಉಪಯೋಗ ಮಾಡುವಂಥ ಮಾಹಿತಿಯನ್ನು ನಮ್ಮ ರೈತರಿಗೆ ಕೊಟ್ಟರೆ ಬಹಳ ಅನುಕೂಲವಾಗುವ ಸಾಧ್ಯತೆಗಳು ಇವೆ.

(6-00 PM)

ಏಕೆಂದರೆ, ಎಲ್ಲೆಲ್ಲಿ ನೀರಿನ ಅನುಕೂಲತೆಗಳಾಗಿವೆಯೋ ಅಲ್ಲಿ ಯಥೇಚ್ಛವಾಗಿ ಅವಶ್ಯಕತೆಗಿಂತ ಹೆಚ್ಚಿನ ನೀರನ್ನು ಉಪಯೋಗ ಮಾಡಿ ಕೊಳ್ಳುವ ಮುಖಾಂತರ ಭೂಮಿಯೂ ಸಹ ಬರಡು ಭೂಮಿಯಾಗುವಂಥ, ಸವಳು-ಜವಳು ಭೂಮಿಯಾಗುವಂಥ ದುಸ್ಥಿತಿಯನ್ನು ಅನೇಕ ಕಡೆ ನಾವು ಕಾಣುತ್ತಿದ್ದೇವೆ. ಅದಕ್ಕಾಗಿ, ವೈಜ್ಞಾನಿಕವಾಗಿ ಸುಧಾರಿಸಿದ ಬೇಸಾಯ ಮಾಡುವುದರ ಮುಖಾಂತರ ಮಿತವಾಗಿ ನೀರನ್ನು ಬಳಸಿಕೊಳ್ಳಬೇಕು. ಅದು sprinkler ಇರಬಹುದು, ಹನಿ ನೀರಾವರಿ ಇರಬಹುದು. ಇಂಥವುಗಳಿಗೆ ಹೆಚ್ಚಿನ ರಿಯಾಯಿತಿಗಳನ್ನು ಕೊಡುವುದರ ಮುಖಾಂತರ, ರೈತರು ಮಿತವಾಗಿ ನೀರನ್ನು ಬಳಸಿಕೊಳ್ಳುವುದರ ಮುಖಾಂತರ ನೀರಿನ ಉಪಯೋಗವನ್ನು ಮಾಡಿಕೊಳ್ಳಬೇಕು, ಅದರ ಜೊತೆಗೆ ಭೂಮಿಯನ್ನೂ ಸಹ ಉಳಿಸಿ ಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅದು ರೈತರಿಗೆ ಬಹಳ ದೊಡ್ಡ ವರದಾನವಾಗಲಿದೆ. ಇದರ ಜೊತೆಗೆ, ಬೇರೆ ಬೇರೆ ದೇಶಗಳ ಉದಾಹರಣೆಯನ್ನು ನಾವು ಕೇಳಿದ್ದೇವೆ. ಕಡಿಮೆ ನೀರು ಸಿಗುವಂಥ ದೇಶಗಳಲ್ಲಿ ನೀರಿನ ಕೋಟಾ (quota) ಪದ್ಧತಿಯನ್ನು ಜಾರಿಗೆ ತಂದಿದ್ದಾರೆ ಎನ್ನುವಂಥಾದನ್ನು ನಾವು ಕೇಳಿದ್ದೇವೆ. ಅದು ನಿಜವಿರಬಹುದು ಅಥವಾ ಇಲ್ಲದೆಯೂ ಇರಬಹುದು. ನಮ್ಮಲ್ಲಿಯೂ ಸಹ ಅಂಥಾದ್ದನ್ನು ಮಾಡಬೇಕು. ನೀರಿನ ಬಗ್ಗೆ ನಾವು ಇಷ್ಟೊಂದು ಚರ್ಚೆಯನ್ನು ಸದನದಲ್ಲಿ ಮಾಡುತ್ತಿ ರುವಂಥ ಹೊತ್ತಿನಲ್ಲಿ, ನೀರನ್ನು ಎಕರೆವಾರು ಅಥವಾ ಹೆಕ್ಟೇರ್‌ವಾರು ಕೋಟಾ ಪದ್ಧತಿ ಮೂಲಕ ಕೊಡುವಂತಾಗಬೇಕು. ಅಂದರೆ, ನಿನಗೆ ಇಷ್ಟು ಎಕರೆ ಜಮೀನು ಇದ್ದರೆ ನೀನು ಇಷ್ಟೇ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವಂಥ ಕೋಟಾ ಪದ್ಧತಿಯನ್ನು ಜಾರಿಗೆ ತಂದರೆ ನಾವು ಹೆಚ್ಚಿನ ನೀರನ್ನು ಸದುಪಯೋಗ ಮಾಡಿಕೊಳ್ಳಲು ಸಾಧ್ಯವಿದೆ. ನಮಗೆ ನೀರು ಕಡಿಮೆ ಸಿಗುತ್ತದೆ ಎಂದಾಗ drip irrigationಗೋ ಅಥವಾ sprinkler irrigationಗೋ ರೈತರ ಮನವೊಲಿಸಲು ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ಕಾರಣಕ್ಕಾಗಿ ಈ ಪದ್ಧತಿಯನ್ನು ಜಾರಿಗೆ ತಂದರೆ ಒಳ್ಳೆಯದಾಗುತ್ತದೆ ಎನ್ನುವ ಬಗ್ಗೆ ನಾನು ಈ ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಕೆಲವೊಂದು ನೀರಾವರಿ ಪ್ರದೇಶಗಳಲ್ಲಿ ಬಹಳಷ್ಟು ಹಳ್ಳಿಗಳಲ್ಲಿ ಹೆಚ್ಚಿನ ನೀರನ್ನು

ಉಪಯೋಗ ಮಾಡಿಕೊಳ್ಳುವುದರ ಮುಖಾಂತರ ಸುಮಾರು ಹತ್ತಾರು ಸಾವಿರ ಎಕರೆ ಜಮೀನು ಸವಳು-ಜವಳಾಗಿದ್ದು, ಬರಡಾಗಿರುವುದರಿಂದ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ ಮತ್ತು ತಾವು ಮಾಡಿದಂಥ ಸಾಲವನ್ನು ತೀರಿಸಲಾರದೇ ಸಾಲಗಾರರಾಗಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಪ್ರಸಂಗಗಳನ್ನು ಅನೇಕ ಕಡೆ ನಾವು ಕಾಣುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ನೀರಾವರಿ ಪ್ರದೇಶದಲ್ಲಿರತಕ್ಕಂಥ ಹಾಳಾಗಿರುವ, ಸವಳುಯುಕ್ತವಾಗಿರುವ ಅಥವಾ ಬೇಸಾಯಕ್ಕೆ ನಿರುಪಯುಕ್ತವಾಗಿರುವ ಜಮೀನುಗಳಲ್ಲಿ ಸವಳು-ಜವಳು ತೆಗೆಯುವಂಥ ಒಂದು ವಿಶೇಷ ಯೋಜನೆಯನ್ನು ರೂಪಿಸಿ ಯಾವಯಾವ ಭಾಗದಲ್ಲಿ ಯಾವಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜಮೀನು ಹಾಳಾಗಿದೆ ಎನ್ನುವ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು, ಅದಕ್ಕೆ ಅನುದಾನವನ್ನು ಬಿಡುಗಡೆ ಮಾಡುವುದರ ಮುಖಾಂತರ ಸವಳು-ಜವಳು ತೆಗೆಯುವಂಥ ಕೆಲಸವನ್ನು ಪರಿಣಾಮಕಾರಿಗಾಗಿ ಮಾಡಿದರೆ ಇನ್ನೂ ಹೆಚ್ಚಿನ ರೈತರು ಬದುಕಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಅವರು ತಮ್ಮ ಜಮೀನುಗಳನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಸಹ ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ನೀರನ್ನು ಹೆಚ್ಚಾಗಿ ಬಳಸಿಕೊಳ್ಳಬೇಕಾದರೆ, ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಕನಸಿನ ಯೋಜನೆಯಾಗಿರತಕ್ಕಂಥ ನದಿ ಜೋಡಣೆ ಯೋಜನೆಯನ್ನು ಈ ನಾಡಿನಲ್ಲಿ ತರುವುದು ಅತೀ ಅವಶ್ಯವಾಗಿದೆ. ಏಕೆಂದರೆ, ನಾನು ಕೇಳಿರುವ ಪ್ರಕಾರ, ನದಿ ಜೋಡಣೆ ಮುಖಾಂತರ ನಮ್ಮ ರಾಜ್ಯಗಳಿಗೆ ನೀರಾವರಿಗೆ ನೀರನ್ನು ಒದಗಿಸಲು ಸಾಧ್ಯವಾಗುತ್ತದೆ. "ಪ್ರತಿ ಜಮೀನಿಗೂ ನೀರು, ಪ್ರತಿ ಕೈಗೂ ಕೆಲಸ" ಎಂಬರ್ಥದ ಒಂದು ಹಿಂದಿ ನಾಣ್ಣುಡಿ ನಮ್ಮಲ್ಲಿದ್ದು, ಅದನ್ನೂ ಸಹ ಯಶಸ್ವಿಯಾಗಿ ಜಾರಿಗೆ ತಂದ ಹಾಗೆ ಆಗುತ್ತದೆ ಎನ್ನುವಂಥ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ, ನದಿ ಜೋಡಣೆಯಿಂದ ನಮ್ಮ ನದಿಗಳಲ್ಲಿ ವರ್ಷದ 12 ತಿಂಗಳೂ ನೀರು ಇರುವಂಥ, ನೀರಿನ ಮಟ್ಟವನ್ನು ಕಾಯ್ದುಕೊಳ್ಳುವಂಥ ಅನುಕೂಲತೆಯನ್ನೂ ಸಹ ಅದರಿಂದ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಅದೂ ಅಲ್ಲದೆ, ಅನೇಕ ಕಣಿವೆಗಳಿಂದ ಬೇರೆಬೇರೆ ನದಿಗಳನ್ನು ಜೋಡಣೆ ಮಾಡುವುದರಿಂದ ಅದರ ಮುಖಾಂತರ ನಮ್ಮ ದೇಶಕ್ಕೆ ಎಷ್ಟು ವಿದ್ಯುತ್ತಿನ ಅವಶ್ಯಕತೆ ಇದೆಯೋ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡಿಕೊಳ್ಳ

ಬಹುದು ಎನ್ನುವಂಥಾದ್ದನ್ನು ನಾನು ಕೇಳಿರುವುದರಿಂದ, ಇದರಿಂದ ನಮ್ಮ ದೇಶಕ್ಕೆ ವರದಾನವಾಗಿ, ನಮ್ಮ ದೇಶದ ಅಭಿವೃದ್ಧಿ ಆಗಲು ಸಾಧ್ಯವಿದೆ ಎನ್ನುವ ಮಾತನ್ನು ಈ ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ ಸುಮಾರು 4–5 ಕೋಟಿ ನಿರುದ್ಯೋಗಿ ಯುವಕರಿಗೆ ಉದ್ಯೋಗ ವನ್ನು ಸಹ ಕೊಡಲು ಸಾಧ್ಯವಿರುವಂಥ ಇಂಥ ಒಂದು ಯೋಜನೆಗೆ ಎಲ್ಲ ರಾಜ್ಯಗಳು ಒತ್ತು ಕೊಟ್ಟು, ಕೇಂದ್ರದ ಮೇಲೆ ಒತ್ತಾಯ ಪೂರ್ವಕವಾಗಿ ಒತ್ತಡ ಹೇರಿ ಈ ನದಿ ಜೋಡಣೆ ಯೋಜನೆಯನ್ನು ಆದಷ್ಟು ಬೇಗನೆ ರೈತರ ಅನುಕೂಲಕ್ಕಾಗಿ ಜಾರಿಗೆ ತರಬೇಕು ಎಂದು ಒತ್ತಾಯಿಸುವುದು ಬಹಳ ಒಳ್ಳೆಯದು ಎನ್ನುವ ಮಾತನ್ನು ಹೇಳುತ್ತೇನೆ. ಈ ವಿಷಯದಲ್ಲಿ ಒಂದು ವೇಳೆ ಕೇಂದ್ರದಿಂದ ವಿಳಂಬವಾದರೂ ಚಿಂತೆಯಿಲ್ಲ, ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಸಾಧ್ಯತೆ ಇದೆಯೋ, ಅಲ್ಲಿ ಬೇರೆಬೇರೆ ನದಿಗಳನ್ನು ಹಳ್ಳಗಳನ್ನು ಜೋಡಿಸುವುದರ ಮುಖಾಂತರ ಈ ಯೋಜನೆಯನ್ನು ಜಾರಿಗೆ ತಂದು ಎಲ್ಲೆಲ್ಲಿ ಒಣ ಬೇಸಾಯ ಇದೆಯೋ, ಅಲ್ಲಿಗೆ ನೀರು ಕೊಡುವಂಥ ವ್ಯವಸ್ಥೆಯಾದರೆ, ಬಹಳಷ್ಟು ರೈತರ ನೆರವಿಗೆ ನಾವು ಅನುಕೂಲತೆಗಳನ್ನು ಮಾಡಲು ಸಾಧ್ಯವಿದೆ ಎನ್ನುವ ಮಾತನ್ನು ಸಹ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈಗಾಗಲೇ ನಮ್ಮ ಹಿರಿಯ ಸದಸ್ಯರು ಮಾತನಾಡಿದ ಪ್ರಕಾರ, ರೈತರ ನೆರವಿಗೆ ನಾವು ಬರಬೇಕಾದರೆ ಅಥವಾ ನೀರಾವರಿಗೆ ಆದ್ಯತೆ ಕೊಡಬೇಕಾದರೆ ನಾವು ನೀರಿಗೆ ಎಷ್ಟು ಮಹತ್ವವನ್ನು ಕೊಡುತ್ತೇವೋ, ವಿದ್ಯುತ್ತಿಗೂ ಸಹ ಅಷ್ಟು ಮಹತ್ವವನ್ನು ಕೊಡುವುದು ಬಹಳ ಮುಖ್ಯವಾಗಿದೆ. ನಮ್ಮ ಭಾಗದಲ್ಲಿ ಮಳೆಗಾಲದಲ್ಲಿ ಮಳೆ ಬರುತ್ತಿದ್ದು, ನೀರು ಬರುತ್ತಿರುವು ದರಿಂದ ವಿದ್ಯುತ್ತಿನ ತೊಂದರೆಯಾಗಲಿಕ್ಕಿಲ್ಲ ಎನ್ನುವ ದೃಷ್ಟಿಯಲ್ಲಿ ರೈತರು ಬೇಸಿಗೆಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ, ತಮಗಿರುವ 1–2 ಎಕರೆ ಜಮೀನಿನಲ್ಲಿ ಕಬ್ಬು ಬೆಳೆಯಬೇಕು ಅಥವ ನೀರಾವರಿ ಬೇಸಾಯವನ್ನು ಮಾಡಬೇಕು, ಬೇಸಿಗೆಯಲ್ಲೂ ನಮಗೆ ಅಷ್ಟೇ ವಿದ್ಯುತ್ ಸಿಗುತ್ತದೆಯೇ ಎನ್ನುವ ಕಲ್ಪನೆಯಿಲ್ಲದೆ ಪ್ರತಿಯೊಬ್ಬ ರೈತರೂ, ಹತ್ತಾರು ಎಕರೆಗಳಲ್ಲಿ, 20 ಎಕರೆಗಳಲ್ಲಿ, ಬಹಳ ದೊಡ್ಡ ರೈತರಾದರೆ 50 ಎಕರೆಗಟ್ಟಳೆ ನೀರಾವರಿ ಬೆಳೆಯನ್ನು ಬೆಳೆಯುತ್ತಾರೆ. ಆದರೆ ಬೇಸಿಗೆಯಲ್ಲಿ ವಿದ್ಯುತ್ತಿನ ಕೊರತೆಯಿಂದ ಆ ಎಲ್ಲ ಬೆಳೆಯೂ ನಾಶವಾಗಿ ರೈತರು ಮತ್ತೆ ಸಾಲದ ಸುಳಿಗೆ ಸಿಗುವಂಥ ವ್ಯವಸ್ಥೆ ಪ್ರತಿವರ್ಷ ಪುನರಾವರ್ತನೆಯಾಗುತ್ತಿದೆ. ಇದರ ಬಗ್ಗೆಯೂ ಸಹ ರೈತರ ಗಮನ ಸೆಳೆಯುವಂಥ ಕೆಲಸ ಸರ್ಕಾರದ ಕಡೆಯಿಂದ ಆಗಬೇಕು.

ಏಕೆಂದರೆ, ಮುಂಚಿತವಾಗಿಯೇ, ನಾವು ಬೇಸಿಗೆಯಲ್ಲಿ ನಿಮಗೆ ಎಷ್ಟೇ ವಿದ್ಯುತ್ತನ್ನು supply ಮಾಡುತ್ತೇವೆ, ಹೆಚ್ಚಿಗೆ ವಿದ್ಯುತ್ ಕೊಡಲಾಗುವುದಿಲ್ಲ, ಇಷ್ಟು ವಿದ್ಯುತ್ತಿನಲ್ಲಿ ನಿಮಗೆ ಎಷ್ಟು ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೋ ಅಷ್ಟೇ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೋ ಅಷ್ಟೇ ಬೆಳೆಯನ್ನು ಬೆಳೆಯಬೇಕು ಎನ್ನುವ ಸೂಚನೆಯನ್ನು ಕೊಟ್ಟರೆ ರೈತರು ಮತ್ತಷ್ಟು ನೆಮ್ಮದಿಯಿಂದ ಬೆಳೆ ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ನಾನು ಸರ್ಕಾರವನ್ನು ಈ ವಿಷಯದಲ್ಲಿ ಅಭಿನಂದಿಸುತ್ತೇನೆ. ಏಕೆಂದರೆ, ಈ ಸಲ ನಮಗೆ ತೊಂದರೆಯಾಗದ ಹಾಗೆ, ಈಗಿನ ವಿದ್ಯುತ್ ಕ್ಷಾಮ ಪರಿಸ್ಥಿತಿಯಲ್ಲೂ ಸಹ ನಮಗೆ ಒಳ್ಳೆಯ ವಿದ್ಯುತ್ತನ್ನು ಕೊಟ್ಟಿದ್ದಾರೆ. ಆದರೂ ಸಹ ನಾನು ಸರ್ಕಾರವನ್ನು, ವಿಶೇಷವಾಗಿ ಈಶ್ವರಪ್ಪನವರನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಅವರು ನಮ್ಮ ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿಕೊಟ್ಟಿದ್ದಾರೆ, ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನೂ ಕೊಟ್ಟಿದ್ದಾರೆ. ರೈತರ ಜಮೀನಿಗೆ ನೀವು ಎಷ್ಟೇ ವಿದ್ಯುತ್ತನ್ನು ಕೊಡಿ, ಆದರೆ ಅದನ್ನು ನಿರ್ದಿಷ್ಟವಾಗಿ, ತಡೆರಹಿತವಾಗಿ ಕೊಟ್ಟರೆ ಮಾತ್ರ ರೈತರು ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ಅನಿಯಮಿತ ವಾಗಿ ನೀವು load shedding ಮಾಡಿದರೆ ರೈತರಿಗೆ ಬಹಳಷ್ಟು ಕಿರುಕುಳ ವಾಗುತ್ತದೆ ಮತ್ತು ಅವನು ಸಾಲದಿಂದ ಹೊರಗೆ ಬರಲು ಯಾವುದೇ ರೀತಿ ಸಾಧ್ಯವಿಲ್ಲ ಎನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ, ಡಾ: ಅಬ್ದುಲ್ ಕಲಾಂರವರ ಮಾರ್ಗದರ್ಶನದ ಪ್ರಕಾರ ಜೈವಿಕ ಇಂಧನಗಳನ್ನು ಹಾಗೂ ಸೂರ್ಯಕಿರಣದಿಂದ ಸಿಗುವಂಥ ಇಂಧನವನ್ನೂ ಸಹ ನಾವು ಉಪಯೋಗ ಮಾಡಿಕೊಳ್ಳಲಿಕ್ಕೆ ಸರ್ಕಾರದವರು ಇವುಗಳ ಉಪಕರಣ ಗಳಿಗೆ ರಿಯಾಯಿತಿಗಳನ್ನು ಘೋಷಣೆ ಮಾಡಿದರೆ ನಾವು ಸಾಕಷ್ಟು ಅಸಂಪ್ರದಾಯಿಕ ವಿದ್ಯುತ್ತನ್ನೂ ಸಹ ವೈಯಕ್ತಿಕವಾಗಿ ಅಂದರೆ ಮನೆಗಳ ದೀಪಗಳಿಗೋ, ನೀರು ಕಾಯಿಸಲಿಕ್ಕೋ ಉಪಯೋಗ ಮಾಡಲಿಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ಆ ರೀತಿ ಸಿಗುವಂಥ ವಿದ್ಯುತ್ತನ್ನು ನಾವು ಉಪಯೋಗ ಮಾಡಿಕೊಳ್ಳಲಿಕ್ಕೂ ಆಗುತ್ತದೆ. ಆ ಕಾರಣಕ್ಕಾಗಿ ಅವುಗಳಿಗೆ ನೀವು ವಿಶೇಷವಾದ ರಿಯಾಯಿತಿಯನ್ನು ಕಲ್ಪಿಸಿಕೊಟ್ಟರೆ ಸಾಕಷ್ಟು ಜನ ಮುಂದೆ ಬಂದು ಆ ಸಲಕರಣೆಗಳನ್ನು ಖರೀದಿ ಮಾಡಿ ವೈಯಕ್ತಿಕವಾಗಿ ಸ್ವಂತ ವಿದ್ಯುತ್ತನ್ನು ಉತ್ಪಾದನೆ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕಾರಣಕ್ಕಾಗಿ,

ಮುಂಬರುವಂಥ ದಿವಸಗಳಲ್ಲಿ ಸೋಲಾರ್ ಲೈಟ್ ಇರಬಹುದು, ಸೋಲಾರ್ ವಾಟರ್ ಹೀಟರ್ ಇರಬಹುದು ಇಂಥ ಉಪಕರಣಗಳಿಗೆ ಅಥವಾ ಜತ್ರೋಪಾದಂಥ ವಿದ್ಯುತ್ ಉತ್ಪಾದನೆ ಮಾಡುವಂಥ ಸಸ್ಯಗಳನ್ನು ಬೆಳೆಯಲಿಕ್ಕೆ ವಿಶೇಷ ರಿಯಾಯಿತಿಗಳನ್ನು ಘೋಷಣೆ ಮಾಡುವುದರ ಮುಖಾಂತರ ಅದಕ್ಕೆ ಪ್ರೋತ್ಸಾಹ ಕೊಟ್ಟರೆ ಈ ವಿದ್ಯುತ್ತಿನ ಸಮಸ್ಯೆಯನ್ನು ಸ್ವಲ್ಪವಾದರೂ ನೀಗಿಸಬಹುದು ಎನ್ನುವಂತ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ನಡೆದ ಚರ್ಚೆಯಲ್ಲಿ ನಾನು ಕೇಳಿದ ಹಾಗೆ, ಬಹಳಷ್ಟು ಜನ ರೈತರು, ಕೂಲಿ ಕಾರ್ಮಿಕರು, ಹಳ್ಳಿಗಳಿಂದ ಪಟ್ಟಣಗಳಿಗೆ ದೌಡಾಯಿಸುವಂಥ ಸಂಗತಿಗಳನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಕಾರಣವೆಂದರೆ ಅವರ ಭವಿಷ್ಯಕ್ಕೆ, ಅವರ ಭವಿಷ್ಯದ ಮಕ್ಕಳಿಗೆ ಸಿಗುವಂಥ ಮೂಲಭೂತ ಸೌಲಭ್ಯಗಳು ಹಳ್ಳಿಗಳಲ್ಲಿ ಸಿಗುವುದಿಲ್ಲ ಎನ್ನುವಂಥ ಏಕೈಕ ಕಾರಣದಿಂದ ಪಟ್ಟಣಗಳಿಗೆ ವಲಸೆ ಹೋಗುವಂಥ ಸಂದರ್ಭದಲ್ಲಿ ನಾವು ಕಾಣುತ್ತಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ಹಳ್ಳಿಗಳಲ್ಲಿ 7ನೇ ಇಯತ್ತೆ ಶಾಲೆ ಮುಗಿದರೆ, 8ನೇ ಇಯತ್ತೆಗೆ ಅಂದರೆ ಹೈಸ್ಕೂಲಿಗೆ ಸೇರಲು ಹಳ್ಳಿಗಳಲ್ಲಿ ಹೈಸ್ಕೂಲುಗಳಿರುವುದಿಲ್ಲ. ಆ ಹೈಸ್ಕೂಲಿನ ನೆಪಕ್ಕಾಗಿ ನಮ್ಮ ಮಕ್ಕಳಿಗಾಗಿ ನಾವು ಪೇಟೆಯಲ್ಲಿ ಒಂದು ಬಾಡಿಗೆ ಮನೆಯನ್ನು ಮಾಡುತ್ತೇವೆ, ನಂತರ ನಿರಂತರವಾಗಿ ಪರ್ಮನೆಂಟಾಗಿ ಅಲ್ಲೇ ಇರುವಂಥ ವ್ಯವಸ್ಥೆ ಮುಂದೆ continue ಆಗುತ್ತದೆ. ಅದನ್ನು ಹೋಗಲಾಡಿಸಬೇಕಾದರೆ ಕನಿಷ್ಟ ದೊಡ್ಡದೊಡ್ಡ ಹಳ್ಳಿಗಳಲ್ಲಿ ಒಂದು junior collegeಗಳನ್ನು ತೆರೆದರೆ, ಪ್ರೌಢಶಾಲೆಗಳನ್ನು ತೆರೆದರೆ ಆ ಹಳ್ಳಿಯ ಜನರನ್ನು ಅಲ್ಲೇ ಉಳಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಯಾರು ಪಟ್ಟಣಕ್ಕೆ ಹೋಗಿ ಕಲಿಸಕ್ಕೆ ಸಾಧ್ಯವಾಗುವುದಿಲ್ಲವೋ, ಅಂಥ ಬಡ ರೈತರು, ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತಾರೆ. ಅದಲ್ಲದೆ, ಅನುಕೂಲಸ್ಥರು ಮನೆ ಮಾಡಿ ತಮ್ಮ ಅರ್ಧ ಕುಟುಂಬವನ್ನು ಪೇಟೆಗೆ shift ಮಾಡಿ ಅಲ್ಲಿದ್ದು ಮಕ್ಕಳನ್ನು ಶಾಲೆಗೆ ಕಳುಹಿಸುವಂತಹ ವ್ಯವಸ್ಥೆ ಏನಿದೆ ಅದರ ಬದಲು ಹಳ್ಳಿಗಳಲ್ಲಿಯೇ ಪ್ರೌಢಶಾಲೆಗಳನ್ನು, Junior collegeಗಳನ್ನು ತೆರೆದು ಆ ಎಲ್ಲಾ ಸೌಲಭ್ಯಗಳನ್ನು ಕೊಟ್ಟರೆ ಪಟ್ಟಣಗಳಿಗೆ ವಲಸೆ ಹೋಗುವಂಥ ಪದ್ಧತಿ 50% ಆದರೂ ನಿಲ್ಲುತ್ತದೆನ್ನುವ ಮಾತನ್ನು ಹೇಳುತ್ತೇನೆ. ಒಕ್ಕಲುತನದ ಸಲುವಾಗಿ ಈಗಾಗಲೇ ಚರ್ಚೆಯಾದ ಹಾಗೆ ಗೊಬ್ಬರದ ಉಪಯೋಗದಲ್ಲಿ

ಈ ಸ್ಥಿತಿಗೆ ನಾವು ಬರಬಾರದು. ನಾವು ಚಿಕ್ಕವರಿದ್ದಾಗ ನೋಡಿದ ಹಾಗೆ ರೈತರು ಸರ್ಕಾರಿ ಗೊಬ್ಬರವನ್ನು ಉಪಯೋಗಿಸುವುದಕ್ಕೆ ಹೆದರುತ್ತಿದ್ದರು. ಇದು ನಮ್ಮ ಜಮೀನನ್ನು ಹಾಳು ಮಾಡುತ್ತದೆ, ಇದರಿಂದ ನಾವು ದೂರವಿರಬೇಕೆಂದು ಹೇಳುತ್ತಿದ್ದರು. ಆದರೆ, ಇತ್ತೀಚೆಗೆ ಭೂಮಿಗೂ ಒಂದು ಚಟ ಬಿದ್ದ ಹಾಗಾಗಿದೆ. ಆ ಸರ್ಕಾರಿ ಗೊಬ್ಬರ, ರಾಸಾಯನಿಕ ಗೊಬ್ಬರವಿಲ್ಲದೇ ನಾವು ಬೆಳೆಯನ್ನೇ ಬೆಳೆಯಲಾರದಂಥ ದುಸ್ಥಿತಿ ನಿರ್ಮಾಣವಾಗಿದೆ. ವರ್ಷದಿಂದ ವರ್ಷಕ್ಕೆ ಅದರ ಉಪಯೋಗವನ್ನು ಜಾಸ್ತಿ ಪ್ರಮಾಣದಲ್ಲಿ ಉಪಯೋಗ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಏಕೆಂದರೆ, ನಾವು ಮೊದಲು ಕಬ್ಬಿಗಾಗಲಿ, ಗೋವಿನ ಜೋಳಕ್ಕಾಗಲಿ, ಹತ್ತಿಗಾಗಲಿ ಎಕರೆ ಅಥವಾ ಹೆಕ್ಟೇರ್‌ಗೆ ಇಂತಿಷ್ಟು ಪ್ರಮಾಣದಲ್ಲಿ ಅಂದರೆ 50 ಕೆ.ಜಿ. ಅಥವಾ ಒಂದು ಕ್ವಿಂಟಲ್ ಗೊಬ್ಬರ ಬಳಸುತ್ತಿದ್ದೆವು. ಆದರೆ, ಈಗಿನ ಪರಿಸ್ಥಿತಿ ನೋಡಿದಾಗ, ಒಬ್ಬೊಬ್ಬ ರೈತರು ಸುಮಾರು 10–20 ಕ್ವಿಂಟಲ್‌ರ ವರೆಗೆ ರಾಸಾಯನಿಕ ಗೊಬ್ಬರವನ್ನು ನೀರಾವರಿ ಬೆಳೆಗೆ ಬಳಸುವುದನ್ನು ನೋಡಿದರೆ ದೊಡ್ಡ ಪ್ರಮಾಣದಲ್ಲಿ ಯಥೇಚ್ಛವಾಗಿ ಹಾನಿಯಗುವಂಥ ಸಂದರ್ಭವಿದೆ. ಕೇವಲ ಆರ್ಥಿಕವಾಗಿ ಆ ರೈತ ಕುಸಿಯುವುದಲ್ಲದೆ, ಆ ಭೂಮಿಯ ಸಾರವೂ ಸಹಿತ ನಶಿಸಿ ಹೋಗುವಂಥ ಸಂದರ್ಭವಿರುವುದರಿಂದ ಅದಕ್ಕೂ ಸಹ ವೈಜ್ಞಾನಿಕವಾಗಿ ಆ ಹಳ್ಳಿಗಳಲ್ಲಿ ರೈತರಿಗೆ ಮಾಹಿತಿಗಳನ್ನು ಕೊಡುವುದರ ಮುಖಾಂತರ, ಸಭೆ–ಸಮಾರಂಭಗಳನ್ನು ಮಾಡುವುದರ ಮುಖಾಂತರ ನೀವು ಇಂತಿಷ್ಟೇ ಗೊಬ್ಬರವನ್ನು ಬಳಸಿಕೊಳ್ಳಬೇಕೆನ್ನುವಂಥ ಮಾಹಿತಿಗಳನ್ನು ಪೂರೈಸಿ, ಗೊಬ್ಬರದ ಪ್ರಮಾಣವನ್ನು ಕಡಿಮೆ ಮಾಡಿದರೆ ಆ ಭೂಮಿಯ ಫಲವತ್ತತೆಯನ್ನು ಇನ್ನೂ ಹೆಚ್ಚು ದಿನ ಕಾಯ್ದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಇದರಿಂದ ಮತ್ತಷ್ಟು ಭೂಮಿ ಬಂಜರಾಗುವುದನ್ನು ತಡೆಯಲಿಕ್ಕೆ ಸಾಧ್ಯವಿದೆ. ಅದಲ್ಲದೆ, ಸಾವಯವ ಕೃಷಿಯ ಬಗ್ಗೆ ಹಿರಿಯ ಸದಸ್ಯರು ಸದನದ ಗಮನವನ್ನು ಸಾಕಷ್ಟು ಸೆಳೆದಿದ್ದಾರೆ. ಸಾವಯವ ಗೊಬ್ಬರಕ್ಕೆ ಸಂಬಂಧಿಸಿದ ಪಂಡಿತರನ್ನು ಅನೇಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ನಾವು ನೋಡಿದ್ದೇವೆ. ಅವರು ಕೊಡುವ ಸೂಚನೆ ಏನೆಂದರೆ, ಒಂದು ಎಕರೆಗೆ 10–15 ಸಾವಿರ ರೂ. ಖರ್ಚು ಮಾಡಿ ರಾಸಾಯನಿಕ ಗೊಬ್ಬರವನ್ನು ಹಾಕಿ ಏನು ಬೆಳೆ ಬೆಳೆಯುತ್ತೀರೋ ಅಷ್ಟೇ ಉತ್ಪಾದನೆಯನ್ನು, ಇಳುವರಿಯನ್ನು ಸಾವಯವ ಕೃಷಿಯಿಂದ ಬೆಳೆಯಬಹುದೆನ್ನುವ ಮಾತನ್ನು ಸಹ ಆಧಾರಸಹಿತವಾಗಿ ಅನೇಕ ಕಡೆ ಬೆಳೆದಿರುವುದನ್ನು ನಾವು ಕಂಡಿದ್ದೇವೆ.

ಸಾವಯವ ಕೃಷಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಸರ್ಕಾರ 100 ಕೋಟಿ ರೂಪಾಯಿಗಳನ್ನು ಇಡುವುದನ್ನು ನಾವು ನೋಡಿದ್ದೇವೆ. ಅದೇ ಪ್ರಕಾರ ಇನ್ನಷ್ಟು ಪರಿಣಾಮಕಾರಿಯಾಗಿ ನಾವು ಅದರ ಬಗ್ಗೆ ರೈತರ ಗಮನ ಸೆಳೆಯುವಂಥದ್ದಾಗಬೇಕು. ನೀರಾವರಿ ಪ್ರದೇಶದ ರೈತರನ್ನು ಸಾವಯವ ಗೊಬ್ಬರದ ಮುಖಾಂತರ ಎಲ್ಲಿ ಒಳ್ಳೆಯ ಬೆಳೆ ಬೆಳೆದಿರುತ್ತಾರೋ, ಆ ಪ್ರದೇಶಕ್ಕೆ ಇವರನ್ನು ಅಧ್ಯಯನ ಪ್ರವಾಸದಂತೆ ಕರೆದುಕೊಂಡು ಹೋಗುವ ಮುಖಾಂತರ ಆ ಪ್ರಾತ್ಯಕ್ಷತೆಯನ್ನು ಅವರಿಗೆ ತೋರಿಸಿ ಅವರ ಮನವೊಲಿಸಿ ಆ ಸಾವಯವ ಕೃಷಿಯನ್ನು ಅವರೂ ಸಹ ಬೆಳೆಸಬೇಕೆನ್ನುವ ಒತ್ತಾಯವನ್ನು ಮಾಡಬೇಕು. ಅದಲ್ಲದೆ, ಒಬ್ಬ ರೈತನಿಗೆ 10 ಎಕರೆ ಜಾಗ ಇದ್ದರೆ, ಅದರಲ್ಲಿ ಕನಿಷ್ಠ ಇಂತಿಷ್ಟು ಸಾವಯವ ಕೃಷಿ ಮಾಡಬೇಕೆನ್ನುವುದನ್ನು ಕಡ್ಡಾಯ ಗೊಳಿಸಿದರೆ ಭವಿಷ್ಯದಲ್ಲಿ ಒಳ್ಳೆಯದಾಗುತ್ತದೆ. ಹಾಗೆ ಮಾಡುವುದರಿಂದ, ಮತ್ತೊಮ್ಮೆ ಭವಿಷ್ಯದಲ್ಲಿ ಸಾವಯವ ಕೃಷಿಗೆ ತಿರುಗಲಿಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾವಯವ ಅಥವಾ ಗೋವು ಆಧಾರಿತ ಕೃಷಿ ಇದು ಬಹಳಷ್ಟು ಲಾಭದಾಯಕವಾಗುತ್ತದೆ. ನಾನು ವಿಶೇಷವಾಗಿ ನೀರಾವರಿ ಪ್ರದೇಶದಿಂದ ಬಂದಿರುವ ಶಾಸಕನಾಗಿರುವುದರಿಂದ ನಮ್ಮಲ್ಲಿ ಒಂದು ಅಭಿವೃದ್ಧಿಯಾದರೆ ಮತ್ತೊಂದು ಸಮಸ್ಯೆ ಹುಟ್ಟುತ್ತದೆ. ನಮ್ಮಲ್ಲಿ ನೀರಾವರಿ ಹೆಚ್ಚಾಗಿರುವುದರಿಂದ ಕಬ್ಬನ್ನು ಮೂಲ ಬೆಳೆ ಬೆಳೆಯುವಂಥ ಪ್ರದೇಶವಾಗಿದೆ. ಆದರೆ, ಅಲ್ಲಿಯ ಮೂಲ ಸಮಸ್ಯೆ ಏನೆಂದರೆ, ಅಲ್ಲಿಯ ಹೊಲಗಳಲ್ಲಿ ರಸ್ತೆ ಇಲ್ಲದಿರುವುದು. ನಮ್ಮ ರೈತರ ಅಭಿವೃದ್ಧಿಗೆ ಹೊಲಗಳ ಪಕ್ಕದಲ್ಲಿಯೇ ರಸ್ತೆ ಇರುವುದೂ ಕೂಡ ಅಷ್ಟೇ ಮಹತ್ವದ್ದಾಗಿರುತ್ತದೆ. ಪಟ್ಟಣಗಳಲ್ಲಿ ನಮ್ಮ ಸರ್ಕಾರ ಆದಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದೆ. ಅಷ್ಟೇ ಮಹತ್ವವನ್ನು ನಮ್ಮ ಗ್ರಾಮೀಣ ರಸ್ತೆಗಳಿಗೆ ಕೊಟ್ಟರೆ, ರೈತರಿಗೂ ಸಹ ತಾವು ಬೆಳೆದಂಥ ಬೆಳೆಗಳನ್ನು, ತಾವು ಬೆಳೆದಂಥ ಕಬ್ಬನ್ನು, ಇನ್ನಿತರ ದವಸ ಧಾನ್ಯಗಳನ್ನು ಹೊರಗೆ ತಂದು ಪೇಟೆಗೆ ಅಥವಾ ಕಾರ್ಖಾನೆಗಳಿಗೆ ಸಾಗಿಸಲಿಕ್ಕೆ ಅನುಕೂಲವಾಗುತ್ತದೆ. ಗ್ರಾಮೀಣ ಬದುಕು ಉತ್ತಮಗೊಳ್ಳಬೇಕಾದರೆ ಅಬ್ದುಲ್ ಕಲಾಂರವರ "ಪುರ" ಎನ್ನುವ ಕನಸಿನ ಯೋಜನೆ ಸಾಕಾರಗೊಳ್ಳಬೇಕಾದರೆ ನಾವು ಹಳ್ಳಿಗಳ ರಸ್ತೆಗಳ ಬಗ್ಗೆ ಹೆಚ್ಚು ಗಮನ ಕೊಡುವುದು ಬಹಳ ಅವಶ್ಯವಿದೆ. ಮೊದಲಿನ ಪದ್ಧತಿ ಪ್ರಕಾರ, ನೀವು "ಪುರ" ಕ್ಕೆ ಅನುದಾನವನ್ನು ನೀಡಿದರೆ ಅನುಕೂಲವಾಗುತ್ತದೆ. ನಾನು 5 ವರ್ಷಗಳ ಹಿಂದೆ ಶಾಸಕನಾಗಿ ಇಲ್ಲಿ ಬಂದಾಗ ಅಥವಾ ಈಗಿನ ಪರಿಸ್ಥಿತಿ

ನೋಡಿದರೆ, ಆಗ ನಾವು ಒಂದು ಕಿ.ಮೀ. ರಸ್ತೆಯನ್ನು asphalt ಮಾಡಿಸ ಬೇಕಾದರೆ ಅಥವಾ ಡಾಂಬರೀಕರಣ ಮಾಡಿಸಬೇಕಾದರೆ 5 ಲಕ್ಷ ರೂಪಾಯಿ ಗಳಲ್ಲಾಗುತ್ತಿತ್ತು. ಆದರೆ, ಅದೇ ಒಂದು ಕಿ.ಮೀ. ರಸ್ತೆಯನ್ನು ಈಗ ಮಾಡಿಸ ಬೇಕಾದರೆ 25 ಲಕ್ಷ ರೂಪಾಯಿಗಳಾಗುತ್ತದೆ. ಇನ್ನೊಂದು ಕಡೆ ಹೋದರೆ, 40 ಲಕ್ಷ ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಈ ರೀತಿ ವ್ಯತ್ಯಾಸವಾಗು ವುದರಿಂದ ನೀವು ಅಷ್ಟೇ ಅನುದಾನವನ್ನು ಪೂರೈಕೆ ಮಾಡಿದರೆ ನಮ್ಮಲ್ಲಿ ಯಾವುದೂ ರಸ್ತೆಗಳು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನನ್ನ ಸಲಹೆ ಏನೆಂದರೆ, ನೀವು ಯಾವುದಾದರೂ ಕಡೆಯಿಂದ ಸಾಲ ತೆಗೆದುಕೊಟ್ಟರೂ ಚಿಂತೆ ಇಲ್ಲ, ಹಳ್ಳಿ ರಸ್ತೆಗಳನ್ನು, ದೊಡ್ಡ ದೊಡ್ಡ ಹೊಲದ ರಸ್ತೆಗಳನ್ನು one time ಅನುದಾನ ಕೊಟ್ಟು ಅಭಿವೃದ್ಧಿ ಮಾಡಿಕೊಟ್ಟರೆ ಆ ರೈತರ ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಕೆಲಸ ಮಾಡಿದ ಹಾಗಾಗು ತ್ತದೆನ್ನುವ ಮಾತನ್ನು ಹೇಳುತ್ತೇನೆ. ಇತ್ತೀಚೆಗೆ ಬಹಳ ಕಡೆ ಗ್ರಾಮೀಣ ಜನರು ಪಟ್ಟಣಕ್ಕೆ ದಿನನಿತ್ಯ ಅಲೆದಾಡುವುದು ಹೆಚ್ಚಾಗಿದೆ. ಏಕೆಂದರೆ, ನಮ್ಮ ಅವಶ್ಯಕತೆ ಗಳನ್ನು ನಾವು ಪೂರೈಸಿಕೊಳ್ಳಬೇಕಾದರೆ ಪಟ್ಟಣಕ್ಕೇ ಹೋಗಬೇಕೆನ್ನುವುದು ಒಂದು ಪದ್ಧತಿಯಾಗಿಬಿಟ್ಟಿದೆ. ಅದಕ್ಕೆ ಉದಾಹರಣೆ ಎಂದರೆ, ಆರೋಗ್ಯ ದರ್ಶಿನಿಗೆ ಹೋಗಬೇಕಾದರೆ ತಾಲ್ಲೂಕು ಆಸ್ಪತ್ರೆಗೆ ಹೋಗಬೇಕು. ನಮಗೆ ಉದ್ಧರಿ ಸಿಗಬೇಕಾದರೆ ನಮ್ಮ village accountant ನೋಡಬೇಕಾದರೆ ಅವನು ತಾಲ್ಲೂಕಿನಲ್ಲಿರುತ್ತಾನೆ, ನಾವು ಅಲ್ಲಿಗೆ ಹೋಗಬೇಕು. ನಮಗೆ ಯಾವುದಾದರೂ papers ಬೇಕಾದರೆ ನಾವು ತಾಲ್ಲೂಕಿಗೆ ಹೋಗಬೇಕು, ಒಕ್ಕಲುತನದ ಉಪಕರಣ ಬೇಕಾದರೆ ತಾಲ್ಲೂಕಿಗೆ ಹೋಗಬೇಕು. ಒಕ್ಕಲುತನದ ಬಗ್ಗೆ ಮಾಹಿತಿ ಬೇಕಾದರೆ ತಾಲ್ಲೂಕು ಮಟ್ಟಕ್ಕೆ ಹೋಗಬೇಕು. ಈ ರೀತಿ ಪ್ರತಿಯೊಂದು ಕೆಲಸಕ್ಕೂ ಸಹಿತ ಒಂದು ಕುಟುಂಬದಲ್ಲಿ 4 ಜನ ರೈತರ ಮಕ್ಕಳಿದ್ದರೆ ಅವರಲ್ಲಿ ಇಬ್ಬರು ತಾಲ್ಲೂಕು ಮಟ್ಟಕ್ಕೆ ಅಡ್ಡಾಡುತ್ತಿರುತ್ತಾರೆ, ಅವರಿಲ್ಲಿ ಉದ್ಯೋಗ ಮಾಡುವ ಹಾಗಿಲ್ಲ. ಇದು ಬಹಳ ಹಳ್ಳಿಗಳಲ್ಲಿರುವ ಪದ್ಧತಿಯಾಗಿದೆ. ಒಬ್ಬ ಅಂತೂ permanent ಆಗಿ ಹೋಗುತ್ತಿರುತ್ತಾನೆ. ಆಕಸ್ಮಾತ್ ದೊಡ್ಡ ಕುಟುಂಬವಿದ್ದರೆ ಇಬ್ಬರು ಹೋಗಿ ಬರುತ್ತಿರುತ್ತಾರೆ. ಅವರಿಬ್ಬರು motor cycle ನಲ್ಲಿ ಹೋಗಿ ಬರುತ್ತಾರೆ, ಸ್ವಲ್ಪ ಶ್ರೀಮಂತರಿದ್ದರೆ ಒಂದು ಸಣ್ಣ ಜೀಪ್ ಇಟ್ಟುಕೊಂಡಿರುತ್ತಾರೆ. ಅವರು ಮುಂಜಾನೆ ಸ್ನಾನ ಮಾಡಿ ನಾಷ್ಟ ಮಾಡುವುದಕ್ಕೆ ತಾಲ್ಲೂಕಿನ ಬಸ್ ಸ್ಟ್ಯಾಂಡ್ ಮುಂದಿರುವ

ಹೋಟೆಲ್‌ಗೆ ಹೋಗುತ್ತಾರೆ. ಈ ರೀತಿಯ ಪದ್ಧತಿಯನ್ನು ಪ್ರತಿ ಹಳ್ಳಿಯಲ್ಲಿ ಕಾಣುತ್ತಿರುತ್ತೇವೆ. ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೇ ಎನ್ನುವಂಥದ್ದನ್ನು ಸಹ ನಾವು ಚಿಂತನೆ ಮಾಡಬೇಕು. ಇದನ್ನು ಸ್ವಲ್ಪ ಮಟ್ಟಿಗಾದರೂ ನಿಲ್ಲಿಸಲಿಕ್ಕೆ ಸಾಧ್ಯವಿದೆ. ಸರ್ಕಾರದ ಅನೇಕ ಆದೇಶಗಳಿವೆ, ಅವ್ಯಾವೂ ಜಾರಿಯಾಗುತ್ತಿಲ್ಲ. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಆಯಾ ಗ್ರಾಮದಲ್ಲಿಯೇ ವಾಸ್ತವ್ಯ ಹೂಡಬೇಕೆನ್ನುವ ಆದೇಶವಿದೆ. ಆದರೆ, ಯಾವೊಬ್ಬ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯೂ ಆಯಾ ಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲ. ಎಲ್ಲರೂ ಪಟ್ಟಣದಲ್ಲಿಯೇ ವಾಸ ಮಾಡುತ್ತಾರೆ. ಹಳ್ಳಿಯಿಂದ 30–40 ಕಿ.ಮೀ. ದೂರದಲ್ಲಿ ವಾಸವಿರುತ್ತಾರೆ. ಅವರು ಮುಂಜಾನೆ ಎದ್ದು ಆಯಾ ಹಳ್ಳಿಗೆ ಬರುವ ವೇಳೆಗೆ ಸಂಜೆಯಾಗಿರುತ್ತದೆ. ಸಂಜೆ ಮತ್ತೆ ತನ್ನ ಮನೆಯಿರುವ ಪಟ್ಟಣಕ್ಕೆ ಹೋಗುತ್ತಾನೆ. ಇದರಿಂದ ಗ್ರಾಮೀಣ ರೈತ ಉದ್ಧರಿ ತೆಗೆದುಕೊಳ್ಳುವುದಕ್ಕೋಸ್ಕರ ಗ್ರಾಮ ಪಂಚಾಯಿತಿಯ ಪತ್ರ ತೆಗೆದುಕೊಳ್ಳಲು ಆ ಕಾರ್ಯದರ್ಶಿ ಹತ್ತಿರ ಹೋಗಬೇಕಾದರೆ ನಾವು ತಾಲ್ಲೂಕು ಪ್ಲೇಸ್‌ಗೆ ಹೋಗಬೇಕಾದಂಥ ಪದ್ಧತಿ ಇದೆ. Village Accountant ಗ್ರಾಮೀಣ ಪ್ರದೇಶದಲ್ಲಿ ಸಿಗುವುದೇ ಇಲ್ಲ. ಗ್ರಾಮ ಸಹಾಯಕ ಸಿಗುವ ಹಾಗೇ ಇಲ್ಲ. ಆರೋಗ್ಯ ಸಹಾಯಕಿ (ANM) ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಇರುವುದೇ ಇಲ್ಲ. ಇಂಥ ಸಣ್ಣಪುಟ್ಟ ವಿಷಯಗಳ ಬಗ್ಗೆ ಸಹ ಸರ್ಕಾರ ಕಡ್ಡಾಯವಾಗಿ ಆದೇಶ ಹೊರಡಿಸುವುದರ ಮುಖಾಂತರ ಅವರುಗಳು ಅಲ್ಲಿಯೇ ವಾಸ್ತವ್ಯ ಇರುವ ಹಾಗೆ ಮಾಡಬೇಕು. ಇಲ್ಲವೆಂದರೆ, ಅವರನ್ನು ನೌಕರಿಯಿಂದ ಬಿಡುಗಡೆ ಮಾಡಿ. ಆ ಸ್ಥಳಕ್ಕೆ ಬರುವುದಕ್ಕೆ ಸಾಕಷ್ಟು ನಿರುದ್ಯೋಗಿ ಯುವಕರು ಇದ್ದಾರೆ. ಕೆಲಸ ಸಿಗಲಿಲ್ಲವೆಂದು ಹಾಗೆಯೇ ತಿರುಗಾಡುತ್ತಿರುತ್ತಾರೆ. ಅಂಥ ಸಾಕಷ್ಟು ಜನ ನಮ್ಮಲ್ಲಿದ್ದಾರೆ. ಅದಕ್ಕಾಗಿ ಅವರಿಗೆ ಕಡ್ಡಾಯವಾಗಿ ಆದೇಶ ಮಾಡಬೇಕು, ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗಬೇಕಾಗಿದ್ದರೆ ನಿಮ್ಮ ಮಕ್ಕಳನ್ನು ಹಾಸ್ಟೆಲ್‌ಗೆ ಸೇರಿಸಿ, ನಿಮ್ಮ ಮಕ್ಕಳ ಯೋಗಕ್ಷೇಮದ ಸಲುವಾಗಿ ಗ್ರಾಮೀಣ ಜನರ ಯೋಗಕ್ಷೇಮವನ್ನು ಹಾಳು ಮಾಡಬೇಡಿ ಎಂಬ ಆದೇಶವನ್ನು ಸರ್ಕಾರ ಕಟ್ಟುನಿಟ್ಟಾಗಿ ಕೊಟ್ಟರೆ ಶೇಕಡಾ ವಾರು ಇನ್ನೂ ಸ್ವಲ್ಪ ಜನ ಪಟ್ಟಣಕ್ಕೆ ಅಡ್ಡಾಡುವುದು ಕಡಿಮೆಯಾಗುತ್ತದೆ. ಸರ್ಕಾರದ ಕಡೆಯಿಂದ ಸಾಕಷ್ಟು ಆದೇಶಗಳು ಆಗಿವೆ. ಸರ್ಕಾರದ ನಿಯಮಾವಳಿಗಳು ಸಾಕಷ್ಟು ಇವೆ. ಆದರೆ, 1% ಸಹಿತ ಬಹುಶಃ ನಾನು

ನೋಡಿದ ಹಾಗೆ ಒಬ್ಬ ಕಾರ್ಯದರ್ಶಿ, ಒಬ್ಬ Village Accountant ಸಹಿತ ಹಳ್ಳಿಯಲ್ಲಿ ಮನೆ ಮಾಡಿ ವಾಸ ಮಾಡತಕ್ಕಂಥ ಸಂಗತಿ ನಮ್ಮ ಭಾಗದಲ್ಲಂತೂ ನಾನು ನೋಡಿಲ್ಲ. ಬೇರೆ ಬೇರೆ ಭಾಗದಲ್ಲಿ ಏನಾಗಿದೆ ಎನ್ನುವುದು ಗೊತ್ತಿಲ್ಲ. ಅವರು ಆಯಾ ಗ್ರಾಮದಲ್ಲಿಯೇ ವಾಸ್ತವ್ಯವಿರುವ ಹಾಗೆ ನೋಡಿಕೊಳ್ಳಬೇಕು. ಹಳ್ಳಿಗಳಲ್ಲಿ ಆಸ್ಪತ್ರೆ ಇದ್ದರೆ ಅಲ್ಲಿ ಡಾಕ್ಟರುಗಳು ಇರುವುದಿಲ್ಲ. ಡಾಕ್ಟರ್‌ಗಳು ಅವರಿಗೆ ಬೇಕಾದ ಹಾಗೆ ಯಾವಾಗಲಾದರೂ ಬರುತ್ತಾರೆ. ಗ್ರಾಮೀಣ ಭಾಗದಲ್ಲಿ ಆಸ್ಪತ್ರೆ ಇದ್ದರೂ ಸಹ ತಾಲ್ಲೂಕು placeಗೆ ನಾವು ಅಡ್ಡಾಡುವಂಥ ದಯನೀಯ ಸ್ಥಿತಿ ಅಲ್ಲಿರುವುದರಿಂದ ಅದನ್ನು ಸರಿಪಡಿಸಬೇಕು. ನಮ್ಮ ಹುಡುಗರು ಗ್ರಾಮೀಣ ಪ್ರದೇಶದಿಂದ ತಾಲ್ಲೂಕು ಸ್ಥಳಗಳಿಗೆ ಅಡ್ಡಾಡಿ ಅವರಿಗೆ ಪಟ್ಟಣದ ಚಟ ಬಂದುಬಿಡುತ್ತದೆ. ಹಳ್ಳಿಯಲ್ಲಿ ಎಲ್ಲ ವ್ಯವಸ್ಥೆ ಮಾಡಿದರೂ ಸಹ ಅವರು ಪಟ್ಟಣಕ್ಕೆ ಹೋಗುವುದನ್ನು ಬಿಡುವುದಿಲ್ಲ. ಅವರು ಪಟ್ಟಣಕ್ಕೆ ಹೋಗಿ ಅಲ್ಲಿ ವಸತಿ ವ್ಯವಸ್ಥೆ ಮಾಡಿಕೊಂಡು ಜೀವನ ಮಾಡುವಂಥ ಪ್ರಸಂಗ ಇದೆ. ಆದ್ದರಿಂದ, ಆಯಾ ಅಧಿಕಾರಿಗಳು ಆಯಾ ಗ್ರಾಮಗಳಲ್ಲಿ ವಾಸ್ತವ್ಯ ಮಾಡುವ ಹಾಗೆ ಕಡ್ಡಾಯ ಆದೇಶ ಮಾಡಿದರೆ ಇನ್ನೂ ಸಹ ಗ್ರಾಮೀಣ ಭಾಗಕ್ಕೆ ಸ್ವಲ್ಪ ಒಳ್ಳೆಯದಾಗುತ್ತದೆ ಮತ್ತು ಪಟ್ಟಣಗಳಿಗೆ ಅಡ್ಡಾಡುವುದು ಕಡಿಮೆಯಾಗುತ್ತದೆ. ಇನ್ನು, ಇತ್ತೀಚಿನ ಪರಿಸ್ಥಿತಿ ಏನಾಗಿದೆ ಎಂದರೆ, ಮೊದಲು ಒಂದು ಕಾಲವಿತ್ತು, ಒಕ್ಕಲುತನ ಮಾಡುತ್ತಿದ್ದೇವೆಂದರೆ ಹುಡುಕಿಕೊಂಡು ಬಂದು ಹೆಣ್ಣು ಕೊಡುತ್ತಿದ್ದರು ಎಂದು ನಮ್ಮ ಹಿರಿಯರು ಹೇಳುತ್ತಾರೆ. ಅಂದರೆ ಒಕ್ಕಲುತನ ಮಾಡುವುದೆಂದರೆ ಅದು ಗೌರವಸ್ಥರ ಮನೆಯಾಗಿತ್ತು. ಆದರೆ, ಈಗ ಒಕ್ಕಲುತನ ಮಾಡುತ್ತಿದ್ದೇವೆಂದರೆ ಯಾರೂ ಕನ್ಯೆ, ಹೆಣ್ಣು ಕೊಡುವುದಿಲ್ಲ. ಕಚೇರಿಯಲ್ಲಿ peon ಆಗಿದ್ದಾನೆ. ಎಂದರೆ ಪರವಾಗಿಲ್ಲ ಅವನಿಗೇ ಹೆಣ್ಣು ಕೊಡುತ್ತೇವೆಂದು ಈಗ ಹೇಳುತ್ತಾರೆ. ಆದರೆ, ಒಕ್ಕಲುತನ ಮಾಡುವ ರೈತನಿಗೆ 20 ಎಕರೆ ಜಮೀನು ಇದ್ದರೂ ಸಹ ಅವನಿಗೆ ಕನ್ಯೆ ಕೊಡುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಕಸ ಹೊಡೆಯುವವನಾಗಿರಲಿ ಅಥವಾ ದಿನಗೂಲಿ ನೌಕರನಾಗಿರಲಿ ಅವನಿಗೆ ಕನ್ಯೆ ಕೊಡುತ್ತಾರೆಯೇ ವಿನಃ ಈ ಒಕ್ಕಲುತನ ಮಾಡುವವರಿಗೆ ಯಾರೂ ಹೆಣ್ಣು ಕೊಡುವುದಿಲ್ಲ. ಈ ರೀತಿ ಎಲ್ಲಾ ಕಡೆ ಇದೆಯೆಂದು ಭಾವಿಸಿದ್ದೇನೆ. ಆದ್ದರಿಂದ, ಒಕ್ಕಲುತನವನ್ನು ಗೌರವಯುತ ಉದ್ಯೋಗವನ್ನಾಗಿ ನಾವು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಯಾವ ರೀತಿ

ಮಾಡಬೇಕೆಂದರೆ ನಮ್ಮ ಶಿಕ್ಷಣ ಮಟ್ಟದಲ್ಲಿ ಅದನ್ನು ಜಾರಿಗೆ ತರುವಂಥ ವ್ಯವಸ್ಥೆಯಾಗಬೇಕು. ನಮ್ಮ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢ ಶಾಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆಯೇ ಒಂದು ಪಾಠವನ್ನು ಇಡಬೇಕು. ಪಾಠ practical ಆಗಿ ಇರಬೇಕು. ಏನು ಮಾಡಬೇಕೆಂದರೆ, ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಹಾಗೆ ಹಳ್ಳಿಯೊಳಗೆ 40–50 ಎಕರೆ ಜಮೀನನ್ನು ತೆಗೆದುಕೊಳ್ಳಬೇಕು. ನಮ್ಮ High School ನೊಳಗೆ ಸುಮಾರು 500 ಹುಡುಗರು ಇರುತ್ತಾರೆ. ಕ್ಲಾಸ್ ನಡೆಯುವ ಸಂದರ್ಭದಲ್ಲಿ 1 ಗಂಟೆ ಹೋಗಿ ಹೊಲದಲ್ಲಿ ಕಳೆ ಕೀಳುವುದು, ಬೀಜ ನಾಟಿ ಮಾಡುವುದು ಅಥವಾ ನೀರು ಹಾಕುವುದು ಇಂಥದ್ದರ ಬಗ್ಗೆ ಅವರಿಗೆ ಪಾಠ ಮಾಡಬೇಕು. ಅದರಿಂದೇನು ಪರಿಣಾಮವಾಗುತ್ತದೆ ಎಂದು ನಮ್ಮ ಮಕ್ಕಳಿಗೆ ಅರ್ಥ ವಾಗಬೇಕು. ಇದರಿಂದ practical ಆಗಿಯಾದರೂ ಬೇಸಾಯವನ್ನು ಅಭಿವೃದ್ಧಿಪಡಿಸುವಂಥ ವ್ಯವಸ್ಥೆಯಾಗಬೇಕು. ಇದರಿಂದ ಲಾಭ ಏನು, ಹಾನಿ ಏನು ಎನ್ನುವುದನ್ನು ಅವರಿಗೆ ಹೇಳಿಕೊಡಬೇಕು. ಇದರಿಂದ ದೊಡ್ಡ ಶಕ್ತಿಯನ್ನು ನಾವು ಉಪಯೋಗ ಮಾಡಿಕೊಂಡ ಹಾಗೆ ಆಗುತ್ತದೆ. ಆ ರೀತಿ ಪದ್ಧತಿಯನ್ನು ನಾವು practical ಆಗಿ ನಮ್ಮ ಮಕ್ಕಳಿಗೆ ಕಲಿಸುವಂಥ ವ್ಯವಸ್ಥೆ ಯಾಗಬೇಕು. ಏಕೆಂದರೆ ಒಂದೊಂದು ದೇಶದಲ್ಲಿ ಜನಸಂಖ್ಯೆ ಕಡಿಮೆಯಿರು ವುದರಿಂದ ಪ್ರತಿಯೊಬ್ಬರೂ ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯುವಂಥ ವ್ಯವಸ್ಥೆ ಇದೆ. ನಮ್ಮಲ್ಲಿ ಒಕ್ಕಲುತನ ಕಡಿಮೆಯಾಗಿರುವುದರಿಂದ ಅದನ್ನು ಮತ್ತೊಮ್ಮೆ ಗೌರವಯುತವಾಗಿ ಅಭಿವೃದ್ಧಿಪಡಿಸಬೇಕಾದರೆ, ಅದರಿಂದ ಉದ್ಯೋಗ ನಿರ್ಮಾಣ ಮಾಡಬೇಕಾದರೆ ನಮ್ಮ ಪ್ರತಿಯೊಬ್ಬ ಮಕ್ಕಳಿಗೂ IAS Officer ಮಗ ಇರಲಿ ಅಥವಾ Minister ಮಗ ಇರಲಿ, ಅವನು ಹೊಲಕ್ಕೆ ಹೋಗಿ ಎಲ್ಲರಂತೆ ಅವನೂ ನೀರು ಹಾಕಬೇಕು ಅಥವಾ ಕಸ ಕೀಳಬೇಕು ಅಥವಾ ನಾಟಿ ಮಾಡಬೇಕು ಅಥವಾ ಕಬ್ಬು ಕಡಿಯಬೇಕು, ಈ ರೀತಿಯ ಪಾಠವನ್ನು ನಾವು ಹಾಕಿಕೊಟ್ಟರೆ ನಮ್ಮ ಮಕ್ಕಳಿಗೂ ಸಹ ಪರಿಶ್ರಮದಾಯಕ ಉದ್ಯೋಗ ನೆನಪಿಸಿಕೊಡಲಿಕ್ಕೆ ಸಾಧ್ಯವಿದೆ ಮತ್ತು ನಮ್ಮ ಪೂರ್ವಜರ ಉದ್ಯೋಗವನ್ನು ಮುಂದೆ ಮಾಡಬಹುದು, ಮಾಡಬೇಕೆನ್ನು ವಂಥ ಕಿಂಚಿತ್ತಾದರೂ ಕಾಳಜಿ ಅವರಿಗೆ ಬರುತ್ತದೆನ್ನುವಂಥ ಮಾತು ಹೇಳಿ ಈ ಸಲಹೆಯನ್ನು ನಾನು ಕೊಡಬಯಸುತ್ತೇನೆ.

ಇನ್ನು, ನಮ್ಮಲ್ಲಿ ಕಾಡು, ಅರಣ್ಯ ಬೆಳೆಸಬೇಕೆನ್ನುವಂಥ ನಿರ್ದೇಶನಗಳು ಸರ್ಕಾರದಿಂದ ಬಂದಿರುವಂಥದ್ದು ಬಹಳಷ್ಟು ಇವೆ. ನಮ್ಮಲ್ಲಿ ಸಾಕಷ್ಟು ಅರಣ್ಯೀಕರಣ ಮಾಡುವಂಥ ವ್ಯವಸ್ಥೆ ಇವೆ. ನಮ್ಮ ಕರ್ನಾಟಕ ರಾಜ್ಯದ ಪ್ರತಿ ಹಳ್ಳಿಗಳಲ್ಲಿ ಸಹಿತ 10–20 ಸಂಘಸಂಸ್ಥೆಗಳಿರುತ್ತವೆ. ಸಣ್ಣ ಹಳ್ಳಿಯಲ್ಲಿ ಸಹಿತ Co-operative Society ಇರುತ್ತದೆ, ಪ್ರಾಥಮಿಕ ಶಾಲೆ ಇರುತ್ತದೆ ಅಥವಾ ಹಿರಿಯ ಪ್ರಾಥಮಿಕ ಶಾಲೆ ಇರುತ್ತದೆ, ಇನ್ನಿತರೆ ಸಂಘಸಂಸ್ಥೆಗಳಿರುತ್ತವೆ. private factory ಗಳಿರುತ್ತವೆ, ಬ್ಯಾಂಕುಗಳು ಇರುತ್ತವೆ. ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಕಚೇರಿಗಳು ಸೇರಿದಂತೆ ಸುಮಾರು 500 ರಷ್ಟು ಸಂಸ್ಥೆಗಳಿರುತ್ತವೆ. ನಮ್ಮಲ್ಲಿ ಗ್ರಾಮ ಪಂಚಾಯಿತಿಗಳಿವೆ. ಇವರಿಗೆ ನಿರ್ದೇಶನ ಮಾಡಬೇಕು. ಒಂದೊಂದು ಸಂಸ್ಥೆಯವರು, ಒಂದೊಂದು ಇಲಾಖೆಯವರು ಒಂದೊಂದು Office ನವರು, ಕೇವಲ ಅರಣ್ಯ ಇಲಾಖೆಯವರು ಮಾತ್ರ ಗಿಡ ನೆಡುವ ಕೆಲಸ ಮಾಡಬೇಕೆಂದರೆ ಈ ಅರಣ್ಯೀಕರಣವಾಗುವುದಕ್ಕೆ ಸಾಧ್ಯವಿಲ್ಲ. ಅವರು ಪ್ರತಿ ವರ್ಷ ಕಾಗದದಲ್ಲಿ 10 ಸಾವಿರ ಗಿಡ ನೆಟ್ಟಿರುತ್ತಾರೆ, ಮುಂದಿನ ವರ್ಷ ಅದರ ಜೊತೆಗೆ ಇನ್ನೂ 10 ಸಾವಿರ ಗಿಡ ನೆಟ್ಟಿರುತ್ತಾರೆ, ಆದರೆ, ಒಂದೂ ಗಿಡ ಸಹಿತ ನಾವು ನೋಡುವ ಹಾಗಿಲ್ಲ. ಅಂಥ ಪರಿಸ್ಥಿತಿ ಅರಣ್ಯ ಇಲಾಖೆಯಿಂದ ಆಗುತ್ತಿದೆ. ಅದಕ್ಕಾಗಿ ಸ್ವಯಂಸ್ಫೂರ್ತಿಯಿಂದ ಆ ಗಿಡಗಳನ್ನು ನೆಡುವಂಥ ಕೆಲಸವಾಗಬೇಕು. ಅದಕ್ಕಾಗಿ ನಾವು ಸಂಘ ಸಂಸ್ಥೆಗಳಿಗೆ ನಿರ್ದೇಶನ ಕೊಡಬೇಕು. ನಿಮ್ಮದು co-operative society ಇದೆಯಾ? ಅಥವಾ co-operative Bank ಇದೆಯಾ ಅಥವಾ ನಿಮ್ಮಲ್ಲಿ ಪ್ರಾಥಮಿಕ ಶಾಲೆ ಇದೆಯಾ ಅಥವಾ ಗ್ರಾಮ ಪಂಚಾಯತಿ ಇದೆಯಾ ಅಥವಾ ನಿಮ್ಮ ಆರೋಗ್ಯ ಇಲಾಖೆ ಇದೆಯಾ, ನಿಮ್ಮ ಆವರಣದಲ್ಲಿ ಇಂತಿಷ್ಟು ಗಿಡಗಳನ್ನು ಪ್ರತಿವರ್ಷ ನೆಡಲೇಬೇಕು, ಅಂಥ ಕಡ್ಡಾಯ ಆದೇಶವನ್ನು ಸರ್ಕಾರ ಹೊರಡಿಸಲೇಬೇಕು. ಅದಲ್ಲದೆ ನಿಮ್ಮ ಆವರಣ ಸಂಪೂರ್ಣ ಅರಣ್ಯೀಕರಣವಾಗಿದ್ದರೆ ಬೇರೆಯವರದು ಗುತ್ತಿಗೆಗೆ ತೆಗೆದುಕೊಂಡು ಇಂತಿಷ್ಟು ಅಂದರ ವರ್ಷಕ್ಕೆ 100 ಗಿಡ ಬೆಳೆಸಿರಿ, ಒಂದು ಸಂಸ್ಥೆಯವರು 100 ಗಿಡ ಬೆಳೆಸಿದರೆ 100 ಸಂಸ್ಥೆಯಾದರೂ ಹತ್ತಾರು ಸಾವಿರ ಗಿಡ ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ, ಇದರಿಂದ ಅರಣ್ಯೀಕರಣವನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಇದನ್ನು

ಕಡ್ಡಾಯಗೊಳಿಸಬೇಕು. ಇನ್ನು, ಹಳ್ಳಿಯೊಳಗೆ ರೈತರ ಪರಿಸ್ಥಿತಿ ಹೇಗಾಗಿದೆ ಎಂದರೆ, ಒಬ್ಬರು ಒಂದು ಬೆಳೆ ಬೆಳೆದು ಒಂದು ವರ್ಷ ಲಾಭ ಬಂದು ಶ್ರೀಮಂತ ಆದನೆಂದರೆ, ಅದೇ ಪ್ರದೇಶದಲ್ಲಿರುವಂಥ ಎಲ್ಲಾ ರೈತರು ಅದೇ ಬೆಳೆ ಬೆಳೆಯುವಂಥ ಪದ್ಧತಿ ಇದೆ. ಇದರಿಂದ ಮುಂದಿನ ವರ್ಷ 1000 ರೂ. ಬೆಲೆ ಇದ್ದದ್ದು 100 ರೂ.ಗೆ ಇಳಿಯುತ್ತದೆ. ಇದರಿಂದ ರೈತರೆಲ್ಲ ಸಾಲಗಾರರಾಗುತ್ತಾರೆ. ಮುಂದೆ ರೈತರೆಲ್ಲ ಒಟ್ಟಿಗೆ ಆ ಬೆಳೆ ಬೆಳೆಯುವುದನ್ನು ಬಿಟ್ಟು ಮತ್ತೊಂದು ಬೆಳೆ ಬೆಳೆಯುತ್ತಾರೆ. ಆಗ ಮೊದಲು ಬೆಳೆದಿದ್ದ ಬೆಳೆಗೆ ಹೆಚ್ಚು ಬೆಲೆ ಬರುತ್ತದೆ. ಇದರಿಂದ ರೈತರಿಗೆ ಮೋಸವಾಗುತ್ತದೆ. ಅದನ್ನು ಯಾವ ರೀತಿ ಮಾಡುತ್ತೀರೋ ಗೊತ್ತಿಲ್ಲ. ಎಲ್ಲಾ ಕಡೆಯೂ ಆ ಪದ್ಧತಿ ಮೊದಲಿನಿಂದಲೂ ಇದೆ. ಯಾರೋ ಒಬ್ಬರು ಒಂದು ಬೆಳೆ ಬೆಳೆದು ಅದರಲ್ಲಿ success ಆದರೆ ಎಲ್ಲರೂ ಅದನ್ನೇ ಬೆಳೆಯುತ್ತಾರೆ. ಇದರಿಂದ ರೈತರು ಬೆಳೆದ ಬೆಳೆಗೆ ಬೆಲೆ ಕುಸಿದು ಕಂಗಾಲಾಗಿ ಹಾನಿಯಾಗುವಂಥ ಸಂದರ್ಭ ಇದೆ. ಉದಾಹಣೆಗಾಗಿ ಎಷ್ಟೋ ಜನ ಕಬ್ಬು ಬೆಳೆದ ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪ್ರಸಂಗ ಸಾಕಷ್ಟು ಆಗಿಹೋಗಿದೆ. ಏಕೆಂದರೆ, ಎಲ್ಲರೂ ಕಬ್ಬು ಬೆಳೆಯುತ್ತಾರೆ. ಇದರಿಂದ ನೀರು ಹಾಳು, ಕರೆಂಟ್ ಹಾಳು, ಆ ಬೆಳೆಯೂ ಹಾಳು ನಾಳೆಯ ದಿವಸ factory ಯವರು ಆ ಕಬ್ಬನ್ನು ತೆಗೆದುಕೊಳ್ಳುವುದಿಲ್ಲ, ಇದರಿಂದ ಗದ್ದೆಗೆ ಬೆಂಕಿ ಹಚ್ಚುವಂಥ ಸಾಕಷ್ಟು ಕೆಲಸಗಳು ಆಗಿವೆ, ಆದರೆ, ಬೆಲೆ ಬಂದಾಗ ಆ ಬೆಲೆಯು ಸಹಿತ ನ್ಯಾಯಯುತವಾಗಿ ಸಿಗುವಂಥ ವ್ಯವಸ್ಥೆ ಇಲ್ಲ. ಉದಾಹರಣೆಗೆ, ಇವತ್ತು ನಮ್ಮ ಭಾಗದಲ್ಲಿ ಕಬ್ಬು ಬೆಳೆದಂಥ ರೈತರು ಲಾಟರಿ ಹೊಡೆಯುತ್ತಿದ್ದಾರೆ. ಏಕೆಂದರೆ, ಕಬ್ಬಿನ, ಬೆಲ್ಲದ ರೇಟು ಕ್ವಿಂಟಲ್‌ಗೆ ಮೂರು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇದೆ. ಆ ರೇಟ್ ನ್ಯಾಯಯುತವಾಗಿ, ವೈಜ್ಞಾನಿಕವಾಗಿ ರೈತರಿಗೆ ಸಿಕ್ಕಿದರೆ ಅವನ ಬದುಕು ಶ್ರೀಮಂತವಾಗಲಿಕ್ಕೆ ಸಾಧ್ಯವಿದೆ. ಆದರೆ, ಆ ರೇಟ್ ಸಿಗುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಏಕೆಂದರೆ, ಸಕ್ಕರೆ ರೇಟ್ ಕ್ವಿಂಟಲ್‌ಗೆ ರೂ.1000, 1100 ಇದ್ದಾಗ ರೈತರಿಗೆ 800 ರೂ. ಆದರೂ ಕೊಟ್ಟಿದ್ದಾರೆ. ಆಗ ಮೊಲ್ಯಾಸಿಸ್ ರೇಟ್ 600–700 ರೂ. ಇತ್ತು, ಬಗಾಸ್ ರೇಟ್ 200 ರೂ. ಇತ್ತು, ಅಂಥ ಸಂದರ್ಭದಲ್ಲಿ ಉತ್ಪಾದನೆ ಮಾಡಿದಂಥ ಕರೆಂಟ್ ರೇಟ್ ಕೂಡ per unit 2.60 ರೂ. ಇತ್ತು. ಅಂಥ ಸಂದರ್ಭದಲ್ಲಿ 1100 ರೂ. ಸಕ್ಕರೆ ರೇಟ್ ಇದ್ದಾಗ ರೈತರಿಗೆ 800 ರೂ. ಕೊಟ್ಟಿದ್ದಾರೆ.

ಅಂದರೆ, ಕಬ್ಬಿಗೆ ಮತ್ತು ಸಕ್ಕರೆ ರೇಟ್‌ಗೆ 300 ರೂ. difference ಇತ್ತು. ಆದರೆ, ಇವತ್ತು ಸಕ್ಕರೆ ರೇಟ್ 3700 ರೂ. ಇದೆ. ರೈತರಿಗೆ 2900 ರೂ. ಕೊಡಲಿಕ್ಕೆ ಸಾಧ್ಯವಿದೆಯೇ? ಯಾರೂ ಕೊಡಲಿಕ್ಕೆ ಮುಂದೆ ಬರುತ್ತಿಲ್ಲ. ಈ ರೀತಿಯ ಸಂದರ್ಭಗಳಲ್ಲಿ ಇಡೀ ದೇಶದಲ್ಲಿ ರೈತರನ್ನು ದುರುಪಯೋಗ ಮಾಡುವಂಥದ್ದು ಜಾಸ್ತಿ ಇದೆ. ಹಾಗಾಗಿ, ಸರ್ಕಾರ ಎಲ್ಲಾ ಕಾರ್ಖಾನೆಗಳ ಮಾಲೀಕರನ್ನು ಕರೆದು ವೈಜ್ಞಾನಿಕ ಬೆಲೆ ನಿಗದಿಪಡಿಸಿದರೆ ಒಳ್ಳೆಯದು. ರೈತರು ಪ್ರತಿ ವರ್ಷ strike ಮಾಡುವುದು ಬೇಡ. ಈಗ ರೈತರಿಗೆ 2,500 ರೂ. ಕೊಟ್ಟರೂ ಸಹ ಅದೂ ಕೂಡ ಕಡಿಮೆ. ಆದರೂ ಇಷ್ಟು ಕೊಟ್ಟಿರುವುದು ಸಂತೋಷ. ಏಕೆಂದರೆ, 3700 ರೂ. ಇದ್ದಾಗ 700 ರೂ. difference ಆಯಿತು. ಏಕೆಂದರೆ, ಈಗ ಮೊಲ್ಯಾಸಿಸ್‌ಗೆ 5000 ರೂ.ಗಳಿಗಿಂತ ಜಾಸ್ತಿ ರೇಟ್ ಇದೆ. ವಿದ್ಯುತ್ ಅನ್ನು per unit 6–8 ರೂ. ಕೊಡುತ್ತಿದ್ದೀರಿ. ಬಗಾಸ್ ರೇಟ್ 2000 ರೂ. ಇದೆ. ಇಷ್ಟೆಲ್ಲಾ ಲಾಭ ಮಾಡಿಕೊಳ್ಳುವುದರ ಜೊತೆಗೆ, ರೈತರಿಗೂ ಆ ಲಾಭವನ್ನು ಹಂಚುವಂಥ ಮನೋಭಾವ ನಮ್ಮ factory ಮಾಲೀಕರಲ್ಲಿ ಬರುವ ಹಾಗೆ ಸರ್ಕಾರ condition ಹಾಕಬೇಕು. ಅದಲ್ಲದೆ, ಪ್ರತಿವರ್ಷ ರೈತರು ಹೋರಾಟ ಮಾಡುವುದು ಬೇಡ. ಪ್ರತಿ ವರ್ಷ ಬೀದಿಗಿಳಿಯುವುದು ಬೇಡ. ವೈಜ್ಞಾನಿಕವಾಗಿ ಮೊಲ್ಯಾಸಿಸ್, ಕರೆಂಟ್, ಬಗಾಸಿಸ್, ಸಕ್ಕರೆ ಇವು ನಾಲ್ಕೂ ಸೇರಿಸಿ ಸರಾಸರಿ ರೇಟ್ ತೆಗೆದುಕೊಂಡು ಇಷ್ಟು ರೇಟ್ ಇದ್ದರೆ ರೈತರಿಗೆ ಇಷ್ಟು ರೇಟ್ ಕೊಡಬೇಕೆಂದು ಮಾಡಿದರೆ ಇದರಿಂದ ರೈತರೂ ಆನಂದವಾಗಿರುತ್ತಾರೆ, ಮಾಲೀಕರಿಗೂ ಸಹ ಲಾಭವಾಗುತ್ತದೆ. ಈ ವ್ಯವಸ್ಥೆಯನ್ನು ಮಧ್ಯವರ್ತಿಯಾಗಿ ಸರ್ಕಾರ ಮಾಡಬೇಕು. ಇದನ್ನು ರೈತರು ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಾಡದಿದ್ದರೆ, ರೈತರ ಏಳಿಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಈ ವರ್ಷ ಏನು ರೇಟ್ ಇದೆ, ಎಲ್ಲರನ್ನೂ ಕರೆದು, ಏಕೆಂದರೆ, ಈ ವರ್ಷ ಕಬ್ಬು ಎಲ್ಲಾ factory ಗಳಿಗೂ ಬೇಕಾಗಿದೆ, ಈಗ ಸರ್ಕಾರದ ಮಾತನ್ನು ಅವರು ಕೇಳುತ್ತಾರೆ, ಕಬ್ಬು ಹೆಚ್ಚಾದಾಗ ಸರ್ಕಾರ ಕರೆದರೆ ಯಾವ factory ಯವರೂ ಬರದೆ, ತಪ್ಪಿಸಿ ಕೊಳ್ಳುತ್ತಾರೆ, ಅದಕ್ಕಾಗಿ, ಈ ರೈತರಿಗೆ ಅನುಕೂಲವಾಗುವಂತೆ ಕಬ್ಬಿಗೆ ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು, ತೋಟಗಾರಿಕೆ ಬೆಳೆಗಳ ಬಗ್ಗೆ ಹೇಳುವುದಾದರೆ, ನಾವು ತೋಟಗಾರಿಕೆ ಬೆಳೆಗಳನ್ನು

ಬೆಳೆಯುತ್ತೇವೆ. ತೋಟಗಾರಿಕೆ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆದಾಗ ಅದು ಮಾರಾಟವಾಗುವುದಿಲ್ಲ. ನಾವು ಬಾಳೆಹಣ್ಣು ಬೆಳೆಯುವಾಗ ಅದು ಕೆ.ಜಿ.ಗೆ 3–4 ರೂ. ಇರುತ್ತದೆ. ಅದನ್ನು ದೊಡ್ಡ ಪ್ರಮಾಣದಲ್ಲಿ ಬೆಳೆದು ಮಾರ್ಕೆಟ್‌ಗೆ ತೆಗೆದುಕೊಂಡು ಹೋದಾಗ ಕೆ.ಜಿ.ಗೆ ಒಂದು ರೂ. ಆಗುತ್ತದೆ. ಈ ರೀತಿ ವ್ಯವಸ್ಥೆ ಇದೆ. ನಾನು ಮೊನ್ನೆ Australia and New zealandಗೆ ಹೋದಾಗ New zealandನ ಒಂದು ಕಡೆ ನಾವು ಕೇಳಿದೆವು, ಇಲ್ಲಿಂದ ಗುಲಾಬಿ ಹೂವನ್ನು import ಮಾಡಿ ಅಲ್ಲಿ ಒಂದು ಹೂವನ್ನು 30–40 ರೂ.ಗಳಿಗೆ ಮಾರುತ್ತಾರೆ. ಅದೇ ಹೂವನ್ನು ನಮ್ಮಲ್ಲಿಂದ ಅವರು ಒಂದು ರೂ.ಗೆ ತೆಗೆದುಕೊಳ್ಳುತ್ತಾರೆ. ಈ ಲಾಭ ರೈತರಿಗೆ ಯಾವ ರೀತಿ ಸಿಗುವಂತೆ ಮಾಡಬೇಕೆನ್ನುವ ಬಗ್ಗೆ ಸರ್ಕಾರ ಯೋಚಿಸಿ ಮಾಡಿಕೊಡಬೇಕು. ಅದರ ಬಗ್ಗೆ ಒಂದು ಇಲಾಖೆಯನ್ನು ರಚಿಸಬೇಕು. ಏಕೆಂದರೆ, ಯಾವ್ಯಾವ ಬೆಳೆಯನ್ನು ಬೆಳೆದ ಸಂದರ್ಭದಲ್ಲಿ ಯಾವ್ಯಾವ ಭಾಗದಲ್ಲಿ ಒಳ್ಳೆಯ ರೇಟ್ ಇರುತ್ತದೆ, ಆ ಬೆಲೆ ಆಯಾ ರೈತರಿಗೆ ಸಿಗುವಂತಾಗಬೇಕು. ಇಲ್ಲವೆಂದರೆ, ನಾವು ಸಾಕಷ್ಟು ಶ್ರಮಪಟ್ಟು 12 ತಿಂಗಳಲ್ಲಿ ಬೆಳೆದ ಬೆಳೆಗೆ ನಾವು 10 ರೂ. ತೆಗೆದುಕೊಂಡರೆ ಮಧ್ಯವರ್ತಿ ಅರ್ಧ ಗಂಟೆಯೊಳಗೆ 20 ರೂ. ಲಾಭ ಮಾಡಿಕೊಳ್ಳುವಂಥ ವ್ಯವಸ್ಥೆ ಇದೆ. ಈ ವ್ಯವಸ್ಥೆ ರೈತರನ್ನು ಸುಲಿಯುವಂಥದ್ದಾಗಿದೆ. ಇದನ್ನು ನಾವು ಕೊನೆಗಾಣಿಸಬೇಕು.

(6-30 PM)

ಅದಕ್ಕಾಗಿ ಯಾವ್ಯಾವ ಭಾಗದಲ್ಲಿ ಯಾವ್ಯಾವ ಟೈಂನಲ್ಲಿ ಯಾವ್ಯಾವ ಬೆಲೆಯಿದೆ ಆ ಬೆಲೆಗನುಗುಣವಾಗಿ ಸ್ವಲ್ಪ ಪರ್ಸೆಂಟ್ ಆದರೂ ರೈತರಿಗೆ ಸಿಗುವಂತಾಗಬೇಕು. ಆದಕ್ಕಾಗಿಯೇ ಒಂದು ಇಲಾಖೆಯನ್ನು ರಚಿಸಿ ಅದರ ಮ್ಯಾನೇಜ್‌ಮೆಂಟ್ ಮಾಡಿದರೂ ಚಿಂತೆಯಿಲ್ಲ, ಅದರ ಲಾಭ ರೈತರಿಗೆ ಸಿಗುವಂತಾಗಬೇಕು. ಬೆಳೆಗಳನ್ನು ಕೂಡ ನಾವು ಲೆಕ್ಕ ಹಾಕಬೇಕು. ಸರಕಾರವೇ ಕುಳಿತು ಇದನ್ನು ಅಕೌಂಟ್ ಮಾಡಬೇಕು. ಒಬ್ಬ ಸಕ್ಕರೆ ಕಾರ್ಖಾನೆಯ ಮಾಲೀಕ ಒಂದು ತಾಲ್ಲೂಕಿನೊಳಗೆ ಎಷ್ಟು ಎಕರೆ ಕಬ್ಬು ಇದೆ, ಎಷ್ಟು ಕಾರ್ಖಾನೆಗಳಿವೆ, ನಮ್ಮ ಕಾರ್ಖಾನೆ ಎಷ್ಟು ತಿಂಗಳು ನಡೆಯುತ್ತದೆ, ನಾವು ಯಾವ ರೇಟ್ ಕೊಡಬೇಕು, ಕಬ್ಬು ಹೆಚ್ಚು ಇದ್ದಾಗ ರೈತನ ಜೊತೆಗೆ ನಾವು ಹೇಗೆ ವರ್ತನೆ ಮಾಡಬೇಕು, ಕಬ್ಬು ಕಡಿಮೆ ಇದ್ದಾಗ ಹೇಗೆ ವರ್ತನೆ ಮಾಡಬೇಕು ಎನ್ನುವ ಪದ್ಧತಿ ಅವರು ಕಲಿತಿರುತ್ತಾರೆ. ಕೇವಲ ಒಬ್ಬ

ಕಾರ್ಖಾನೆಯ ಮಾಲೀಕ ಕಬ್ಬು ಕಡಿಮೆ ಇದ್ದಾಗ ರೈತನ ಮನೆಗೆ ಹೋಗಿ ಸೆಲ್ಯೂಟ್ ಹೊಡೆಯುತ್ತಾನೆ. ಕಬ್ಬು ಹೆಚ್ಚು ಇದ್ದಾಗ ನಮಸ್ಕಾರ ಎಂದರೂ ಅವನು ಮುಖ ಎತ್ತಿ ನೋಡುವುದಿಲ್ಲ, ಅವನು ಮಾತನಾಡಿಸದೇ ಕ್ಯಾರೆ ಎನ್ನುವುದಿಲ್ಲ, ಆ ರೀತಿಯ ವರ್ತನೆ ಅವರು ಮಾಡುತ್ತಾರೆ. ಹೀಗಾಗಿ ಸರ್ಕಾರ ಆ ಬಗ್ಗೆ ಯೋಚಿಸಿ, ಈ ರಾಜ್ಯದಲ್ಲಿ ಎಷ್ಟೆಷ್ಟು ಅವಶ್ಯಕತೆಗಳಿವೆ, ಗೋವಿನ ಜೋಳದ ಅವಶ್ಯಕತೆ ಎಷ್ಟು ಇದೆ, ಸಕ್ಕರೆ ಎಷ್ಟು ಅವಶ್ಯಕತೆ ಇದೆ, ಇನ್ನಿತರ ಬೆಳೆಗಳಾದ ಎಣ್ಣೆಕಾಳು ಬೆಳೆಗಳು ಎಷ್ಟು ಅವಶ್ಯಕತೆ ಇದೆ, ಯಾವ್ಯಾವ ಭಾಗದಲ್ಲಿ ಯಾವ್ಯಾವ ಬೆಳೆಗಳು ಫಲವತ್ತಾಗಿ ಬೆಳೆಯುತ್ತವೆಂದು ಈ ರೀತಿಯಾಗಿ ನಾವು ಲೆಕ್ಕ ಹಾಕಿ ಆಯಾಯ ಭಾಗದಲ್ಲಿ ಇದನ್ನೇ ಬೆಳೆಯಬೇಕೆಂದು ಕಡ್ಡಾಯಗೊಳಿಸಿದರೆ ರೈತರು ಸಾಲಗಾರನಾಗುವುದಿಲ್ಲ, ಬೆಲೆ ಬಿದ್ದು ಹೋಗುವಂಥ ಪರಿಸ್ಥಿತಿ ಬರುವುದಿಲ್ಲ. ನಾವು ಎರಡು ವರ್ಷಗಳ ಹಿಂದೆ ಚೀನಾ ದೇಶಕ್ಕೆ ಹೋದಾಗ ಅಲ್ಲಿನ ಗೈಡ್ ನಮಗೆ ವಿವರಿಸಿದರು. ಅಲ್ಲಿ ಒಂದು ಸಾರಿ ಹೆಚ್ಚಿನ ಪ್ರಮಾಣದಲ್ಲಿ ಸೇಬು ಹಣ್ಣುಗಳನ್ನು ಬೆಳೆದಾಗ, ಚೀನಾ ಸರ್ಕಾರವೇ ಪ್ರತಿಯೊಂದು ಕುಟುಂಬದವರು ಐದೈದು ಕೆ.ಜಿ.ಸೇಬು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿತ್ತಂತೆ. ಇದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಏನು ರೈತರು ಬೆಳೆದಿದ್ದರು ಅವೆಲ್ಲವೂ ಆದೇ ದೇಶದಲ್ಲಿಯೇ ಮಾರಾಟ ಆಗಿ ಹೋಯಿತು. ರೈತರಿಗೆ ಲುಕ್ಸಾನು ಆಗಲಿಲ್ಲ. ರೈತರು ಸಾಲಗಾರನಾಗಲಿಲ್ಲ. ಆ ರೀತಿಯಾಗಿ ಏನಾದರೂ ಪ್ಲಾನಿಂಗ್ ಹಾಕುವುದರ ಮೂಲಕ ರೈತರ ನೆರವಿಗೆ ಬರಬೇಕು. ಅಥವಾ ಒಂದು ಕೋಟಾ ಪದ್ಧತಿ ಅಳವಡಿಸಬೇಕು. ನಾವು ಒಂದು ಸರ್ಕಾರವಾಗಿ, ನಮ್ಮಲ್ಲಿ ಎಷ್ಟು ಜಮೀನು ಗಳಿವೆ, ನಮ್ಮಲ್ಲಿ ಎಷ್ಟು ಅವಶ್ಯಕತೆಗಳಿವೆ, ಯಾವ್ಯಾವುದಕ್ಕೆ ಬೆಲೆ ಬರಬಹುದು, ಎಂದು ಲೆಕ್ಕ ಹಾಕಬೇಕಾಗುತ್ತದೆ. ಏಕೆಂದರೆ, ಷೇರು ಮಾರುಕಟ್ಟೆಯಲ್ಲಿ ಷೇರು ಏರಬಹುದು ಎಂದು ಯಾವ ರೀತಿ ಹೇಳುತ್ತಾರೆ, ಆ ರೀತಿಯಾಗಿ ಮುಂದಾಲೋಚನೆಯಿಂದ ಅವರು ಬ್ಯುಸಿನೆಸ್ ಮಾಡುತ್ತಾರೆ. ನಾವು ಸಹಿತ ಈ ದೇಶದ ವ್ಯಾಪ್ತಿಯೊಳಗೆ ಇಟ್ಟುಕೊಂಡು ಯಾವ್ಯಾವ ಬೆಳೆಗಳಿಗೆ ಬೆಲೆ ಬರಬಹುದು, ಯಾವ ಬೆಳೆ ಬೆಳೆದರೆ ರೈತರಿಗೆ ಉಪಯೋಗವಾಗಬಹುದು, ಲಾಭದಾಯಕವಾಗಬಹುದು ಎನ್ನುವುದನ್ನು ನೀವು ಕಾಲ ಕಾಲಕ್ಕೆ ಮಾಹಿತಿ ಕೊಡುವಂಥ ವ್ಯವಸ್ಥೆ ಸರಕಾರದ ಮಟ್ಟದಲ್ಲಿ ಆದರೆ ರೈತರು ಸಾಲಗಾರರಾಗುವುದಕ್ಕೆ ಸಾಧ್ಯವಿಲ್ಲ. ರೈತರು ಲಾಭದಾಯಕ ಬೆಳೆಗಳನ್ನು ಬೆಳೆಯಬಹುದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ರೈತರಿಗೆ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ಮುಖಾಂತರ ಸಹಾಯ ಮತ್ತು ಸೌಲಭ್ಯಗಳನ್ನು ಕೊಡುವಂಥ ವ್ಯವಸ್ಥೆ ಮೊದಲಿನಿಂದಲೂ ಇದೆ. ಈಗಲೂ ಕೂಡ ನಮ್ಮ ಸರ್ಕಾರ ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಕೊಡುತ್ತಿದೆ. ಅದು ಒಕ್ಕಲುತನದ ಉಪಕರಣಗಳು ಇರಬಹುದು, ಔಷಧಿಗಳು ಇರಬಹುದು, ಗೊಬ್ಬರ ಇರಬಹುದು, ಬೀಜ ಇರಬಹುದು. ಆದರೆ, ನಮ್ಮ ರೈತರನ್ನು ಕಾಡುವಂಥ ಒಂದು ಸಂಶಯ ಏನೆಂದರೆ, ಉದಾಹರಣೆಗಾಗಿ ಹೇಳುವುದಾದರೆ, ನಾವು ಒಕ್ಕಲುತನದ ಉಪಕರಣವಾದ ಸ್ಪ್ರೇ ಪಂಪ್‌ನ್ನು ಸಬ್ಸಿಡಿಯೊಳಗೆ ನಾವು ತೆಗೆದುಕೊಳ್ಳುತ್ತೇವೆ, ಇದಕ್ಕೆ 50% ಪರ್ಸೆಂಟ್ ಸಬ್ಸಿಡಿ ಇಟ್ಟಿದ್ದಾರೆ. 50% ಹಣ ಸಂದಾಯ ಮಾಡಿ ಆ ಸ್ಪ್ರೇ ಪಂಪ್ ನಾವು ತೆಗೆದು ಕೊಂಡಿದ್ದೇವೆಂದರೆ, ಬಜಾರ್‌ನಲ್ಲಿ ಸೇಮ್ ಕಂಪನಿಯದು ಅಷ್ಟೇ ರೇಟ್ ಇರುತ್ತದೆ. ನಾವು ಸಬ್ಸಿಡಿಯಲ್ಲಿ ಒಂದು ಸ್ಪ್ರೇ ಪಂಪ್‌ನ್ನು ಐದು ಸಾವಿರ ರೂಪಾಯಿ ಕೊಟ್ಟು ತೆಗೆದುಕೊಂಡರೆ ಅದರ ಮೂಲ ವ್ಯಾಲ್ಯೂ ಹತ್ತು ಸಾವಿರ ಇರುತ್ತದೆ, ನಾವು ಐದು ಸಾವಿರ ಕಟ್ಟಿ ಆ ಪಂಪ್ ತೆಗೆದುಕೊಂಡು ಮನೆಗೆ ಹೋದರೆ ಬಜಾರ್‌ನಲ್ಲಿ ಅದೇ ಪಂಪ್‌ನ್ನು ಚೌಕಾಸಿ ಮಾಡಿ ಐದು ಸಾವಿರ ರೂಪಾಯಿಗೆ ಸೇಮ್ ಕಂಪನಿಯ ಪಂಪ್‌ನ್ನು ತಂದಿರುತ್ತಾರೆ. ನಮ್ಮ ಸಬ್ಸಿಡಿ ಕೇವಲ ಮಧ್ಯವರ್ತಿಗಳ ಪಾಲಾಗುತ್ತದೆ ವಿನಃ ಯಾವ ರೈತರಿಗೂ ಮುಟ್ಟುವಂಥ ವ್ಯವಸ್ಥೆಯಿಲ್ಲ. ಈ ಸಂದರ್ಭದಲ್ಲಿ ಎಲ್ಲಾ ಕಡೆ ಬರುತ್ತವೆ. ಔಷಧಿಯ ಕತೆಯೂ ಅಷ್ಟೆ. ನಾವು ದ್ರಾಕ್ಷಿಗಾಗಿ ಔಷಧಿ ತೆಗೆದುಕೊಂಡರೂ ಇದೇ ಕಥೆ. ರೈತರು ಅಲ್ಲಿ ಏನು ಮಾತನಾಡುತ್ತಾರೆಂದರೆ, ಏನು ಮಾರಾಯ ಪಾಳಿ ಹಚ್ಚಿ ಔಷಧಿಯನ್ನು ಸಬ್ಸಿಡಿ ರೇಟ್‌ನಲ್ಲಿ ತೆಗೆದುಕೊಳ್ಳುವ ಅವಶ್ಯಕತೆ ಯಿಲ್ಲ, ನೇರವಾಗಿ ಔಷಧಿ ಅಂಗಡಿಯಲ್ಲಿ ತೆಗೆದುಕೊಳ್ಳಿ ಅಷ್ಟೇ ರೇಟ್‌ನಲ್ಲಿ ನಿಮಗೆ ಔಷಧಿ ಸಿಗುತ್ತವೆ ಎಂದು ಹೇಳುತ್ತಾರೆ. ಸಬ್ಸಿಡಿ ರೇಟ್‌ನಲ್ಲಿ ಏನು ಕೊಡುತ್ತಾನೆ ಅಷ್ಟೇ ರೇಟ್‌ನಲ್ಲಿ ಅಂಗಡಿಗಳಲ್ಲಿ ಸಿಗುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ. ಹಾಗಾದರೆ ನೂರಾರು ಕೋಟಿ ರೂಪಾಯಿ ಸಬ್ಸಿಡಿ ಎಲ್ಲಿಗೆ ಹೋಗುತ್ತದೆ? ಯಾರ ಕಿಸೆಗೆ ಹೋಗುತ್ತದೆ? ಇದರ ಬಗ್ಗೆಯೂ ಸರ್ಕಾರ ಪರಿಶೀಲಿಸಿ ನೇರವಾಗಿ ಹಣ ರೈತರಿಗೆ ಸಿಗುವಂಥ ವ್ಯವಸ್ಥೆಯಾಗಬೇಕು. ಹಾಗಾದಾಗ ಮಾತ್ರ ನಾವು ಸಬ್ಸಿಡಿ ಕೊಟ್ಟಿದ್ದು ಸಾರ್ಥಕವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಇನ್ನು ಶೌಚಾಲಯದ ಬಗ್ಗೆ ವಿಶೇಷವಾಗಿ ಚರ್ಚೆಯಾಯಿತು. ನಾವು ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಮತ್ತು ಸಿಂಗಾಪುರ ದೇಶದಲ್ಲಿ ಪ್ರವಾಸಕ್ಕೆ ಹೋಗಿದ್ದೆವು. ಬೇರೆ ದೇಶಗಳಿಗೆ ವೈಯುಕ್ತಿಕವಾಗಿ ಪ್ರವಾಸಕ್ಕೆ ಹೋಗಿ ನೋಡಿದಾಗ, ಯಾವ ದೇಶದಲ್ಲೂ ಸಹಿತ ನಮ್ಮ ದೇಶದಲ್ಲಿರುವಂಥ ಅನಿಷ್ಟ ಪದ್ಧತಿಯನ್ನು ನಿಜವಾಗಿಯೂ ನೋಡಲಿಲ್ಲ. ನಾವು ಎರಡು ದಿವಸಗಳ ಕಾಲ ಬಸ್‌ನ ಮೂಲಕ ನ್ಯೂಜಿಲ್ಯಾಂಡ್‌ನಲ್ಲಿ ತಿರುಗಾಡಿದೆವು. ರಸ್ತೆಯ ಮಧ್ಯದಲ್ಲಿ ನಾವು ಮೂತ್ರವಿಸರ್ಜನೆಗಾಗಿ ಹೋಗಬೇಕಾದರೆ ಅಲ್ಲಿ ಕಾಡಿದ್ದರೂ ಹೊರಗಡೆ ಹೋಗುವುದಕ್ಕೆ ಅವಕಾಶವೇ ಇಲ್ಲ. ಸಾರ್ವಜನಿಕ ಶೌಚಾಲಯ ಎಲ್ಲಿ ಇರುತ್ತದೆಯೋ ಅಲ್ಲಿ ಗಾಡಿ ನಿಲ್ಲಿಸಬೇಕು ಆಗ ಮಾತ್ರ ನಾವು ಶೌಚಾಲಯಕ್ಕೆ ಹೋಗಬೇಕು. ಅಲ್ಲಿಯ ಸಾರ್ವಜನಿಕ ಶೌಚಾಲಯ ನಮ್ಮ ಮನೆಯ ಶೌಚಾಲಯದ ರೀತಿ ಮತ್ತು ಫೈವ್‌ಸ್ಟಾರ್ ಹೋಟೆಲ್‌ಗಿಂತಲೂ ಚೆನ್ನಾಗಿರುವಂಥ ರೀತಿಯಲ್ಲಿ ಇರುವುದನ್ನು ನಾವು ಕಂಡಿದ್ದೇವೆ. ಆ ವ್ಯವಸ್ಥೆಯನ್ನು ನಾವು ಏಕೆ ತರಲಿಕ್ಕೆ ಸಾಧ್ಯವಿಲ್ಲ? ಈ ರೀತಿಯ ಅನಿಷ್ಟ ಪದ್ಧತಿಯಿಂದ ನಮ್ಮ ನಾಡಿನ ಹಾಗೂ ನಮ್ಮ ದೇಶದ ಜನರಿಗೆ ನೂರಾರು ರೋಗರುಜಿನಗಳನ್ನು ತಂದು ಕೊಡುವಂಥ ವ್ಯವಸ್ಥೆಯಿದೆ. ಅದಕ್ಕಾಗಿ ಅದರ ಬಗ್ಗೆ ಪರಿಣಾಮಕಾರಿಯಾಗಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಹಳ್ಳಿಗಾಡಿನಲ್ಲಿ ಬಹಿರ್ದಶೆಗೆ ಬಯಲಿಗೆ ಹೋಗುವಂಥ ಈ ಅನಿಷ್ಟ ಪದ್ದತಿ ಏನು ಇದೆ, ಇದನ್ನು ನಿಲ್ಲಿಸುವಂಥ ಪ್ರಯತ್ನ ನಾವು ಮಾಡಬೇಕು. ಈಗಾಗಲೇ ನಮ್ಮ ಸರ್ಕಾರದ ವತಿಯಿಂದ 2200 ರೂಪಾಯಿಗಳನ್ನು ಇದಕ್ಕಾಗಿ ಸಹಾಯಧನವನ್ನಾಗಿ ಕೊಡುತ್ತೇವೆ. ಇದು ಯಾವುದಕ್ಕೂ ಸಾಲುವುದಿಲ್ಲ. ಆದರೆ ರೈತರಿಗೆ ಅದನ್ನು ಕಟ್ಟಿಕೊಳ್ಳಬೇಕು, ಅದನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವ ಜಾಗೃತಿಯೂ ಇಲ್ಲ. ನಾವು ಅದರ ಬಗ್ಗೆ ಎಷ್ಟೇ ಜಾಗೃತಿ ಮಾಡಿದರೂ ಸಹ ಅದರ ಬಗ್ಗೆ ಯಾರು ಗಮನಹರಿಸುತ್ತಿಲ್ಲ. ಅದಕ್ಕೆ ಸರ್ಕಾರದ ಕಡೆಯಿಂದ ಇದು ಕಡ್ಡಾಯವಾಗಿ ಆಗಬೇಕು ಎನ್ನುವ ಕಾನೂನು ಆಗಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಸರಕಾರದ ಕಡೆಯಿಂದ ಸಾಕಷ್ಟು ಸಹಾಯ, ಸೌಲಭ್ಯಗಳು ಸಿಗುತ್ತವೆ. ಕೂಲಿಕಾರರಿಗಾಗಲಿ, ಬಡವರಿಗಾಗಲಿ, ರೈತರಿಗಾಗಲಿ ನಾವು ರೇಷನ್ ಕಾರ್ಡುಗಳನ್ನು ಕೊಡುತ್ತೇವೆ. ಒಕ್ಕಲುತನದ ಉಪಕರಣಗಳನ್ನು ಸಬ್ಸಿಡಿ ದರದಲ್ಲಿ ಕೊಡುತ್ತೇವೆ, ಉತಾರಕ್ಕೆ ಸಬ್ಸಿಡಿ ಕೊಡುತ್ತೇವೆ, ವಿದ್ಯುತ್ ಸೌಲಭ್ಯ ಕೊಡುತ್ತೇವೆ, ಉಚಿತ ವಿದ್ಯುತ್ ಕೊಡುತ್ತೇವೆ, ಇಷ್ಟು ಹಲವಾರು

ಸೌಲಭ್ಯಗಳನ್ನು ಕೊಡುತ್ತೇವೆ. ಹೀಗಾಗಿ ಇಲ್ಲಿ ನಾವು ಒಂದು ಕಂಡೀಷನ್ ಹಾಕಬೇಕು. ಇದೇನು ದೊಡ್ಡದಲ್ಲ. ಐದು ಸಾವಿರ ರೂಪಾಯಿ ಕೊಟ್ಟು ಶೌಚಾಲಯ ಕಟ್ಟುವ ವಿಷಯ ದೊಡ್ಡದಲ್ಲ. ಇದರಲ್ಲಿ ಅರ್ಧ ಹಣ ನಮ್ಮ ಸರ್ಕಾರ ಕೊಡುತ್ತದೆ. ಉಳಿದ ಹಣವನ್ನು ತಾವು ಖರ್ಚು ಮಾಡಿ ಶೌಚಾಲಯ ಕಟ್ಟಿಸಬಹುದು. ಈ ರಾಜ್ಯದೊಳಗೆ ಇಷ್ಟು ಮಾಡಲು ಯಾರಿಗೂ ಅಸಾಧ್ಯವಾದ ಮಾತು ಎಂದು ನನಗೆ ಅನ್ನಿಸುವುದಿಲ್ಲ. ಅದಕ್ಕಾಗಿ ಇದರ ಬಗ್ಗೆ ಕಡ್ಡಾಯವಾಗಿ ಕಾನೂನು ಮಾಡಬೇಕು. ನಿಮಗೆ ರೇಷನ್ ಕಾರ್ಡು ಬೇಕೆ? ನಿಮ್ಮ ಮನೆಯಲ್ಲಿ ಶೌಚಾಲಯ ಇರಬೇಕು, ಅದನ್ನು ಪರಿಶೀಲಿಸಿ ನಿಮಗೆ ರೇಷನ್ ಕಾರ್ಡು ಕೊಡುತ್ತೇವೆ. ನಿಮ್ಮಗೆ ಒಕ್ಕಲುತನ ಉಪಕರಣ ಬೇಕೆ? ನಿಮ್ಮ ಮನೆಯಲ್ಲಿ ಶೌಚಾಲಯ ಇದ್ದರೆ ನಿಮಗೆ ಒಕ್ಕಲುತನದ ಉಪಕರಣ ಕೊಡುತ್ತೇವೆ. ಅಥವಾ ನಿಮಗೆ ಗೊಬ್ಬರ, ಬೀಜ ಬೇಕೆ, ನಿಮ್ಮ ಮನೆಯಲ್ಲಿ ಶೌಚಾಲಯ ಇರಬೇಕು, ಈ ರೀತಿ ಕಡ್ಡಾಯವಾಗಿ ಕಾನೂನನ್ನು ಜಾರಿಗೆ ತರಬೇಕು. ಇದು ಬಹಳ ಸೂಕ್ತವಾಗುತ್ತದೆ. ಆರೋಗ್ಯದ ದೃಷ್ಟಿಯಿಂದಾಗಲಿ, ಸ್ವಚ್ಛತೆ ದೃಷ್ಟಿಯಿಂದಾಗಲಿ, ಇದು ಬಹಳ ಅವಶ್ಯವಿದೆ, ಇದನ್ನು ಕಡ್ಡಾಯ ಮಾಡಿದರೆ ಯಾರು ನಿಮ್ಮನ್ನು ಬಯ್ಯುವುದಿಲ್ಲ. ಸರಕಾರಕ್ಕೆ ಮತ್ತಷ್ಟು ಕೀರ್ತಿ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯವಿಟ್ಟು ಮುಂಬರುವ ದಿವಸಗಳಲ್ಲಿ ಇದಕ್ಕೊಂದು ಕಾನೂನು ರಚನೆ ಮಾಡಿ, ಯಾರಿಗೆ ಸರಕಾರದ ಸೌಲಭ್ಯ ಕೊಡಬೇಕಾದರೆ ಕಡ್ಡಾಯವಾಗಿ ಅವರ ಮನೆಗಳಲ್ಲಿ ಶೌಚಾಲಯ ಹೊಂದಿರಬೇಕೆನ್ನುವ ಕಾನೂನು ಮಾಡಿ ಪರಿಣಾಮಕಾರಿಯಾಗಿ ನಾವು ಜಾರಿಗೆ ತಂದರೆ, ಸ್ವಚ್ಛತೆಯ ದೃಷ್ಟಿಯಿಂದ ಉಪಯೋಗವಾಗಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಬಯಸುತ್ತೇನೆ.

ಇನ್ನು ಸರ್ಕಾರ ಹತ್ತಾರು ಸಾವಿರ ಕೋಟಿ ರೂಪಾಯಿಗಳನ್ನು ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಮಂಡನೆ ಮಾಡುವ ಮುನ್ನ ಒಂದು ಮಾತು ಹೇಳಿದರು. ದಿಲ್ಲಿಯಿಂದ ಒಂದು ರೂಪಾಯಿ ಬಿಡುಗಡೆ ಮಾಡಿದರೆ ಅದು ಹಳ್ಳಿಗಳಿಗೆ ಹೋಗಿ ಹದಿನೈದು ಪೈಸೆ ಮುಟ್ಟುತ್ತದೆಂದು ಮಾನ್ಯ ರಾಜೀವಗಾಂಧಿಯವರು ಹೇಳಿದಂಥ ಮಾತನ್ನು ಹೇಳಿದರು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಇನ್ನೊಂದು ವಿಷಯ ಇದೆ. ಸರ್ವ ಶಿಕ್ಷಣ ಅಭಿಯಾನ ಯೋಜನೆ. ಇದು ಬಹಳ ಒಳ್ಳೆಯ ಯೋಜನೆ. ಜೊತೆಗೆ ಇದರ ಅನುಷ್ಠಾನ ಪದ್ಧತಿ ಕೂಡ ಬಹಳ ಚೆನ್ನಾಗಿದೆ.

ಎಲ್ಲೋ 5–10% ಲ್ಯಾಪ್ಸ್ ಆಗಬಹುದು ಅಥವಾ ಅವ್ಯವಹಾರ ಆಗಬಹುದು. ಆದರೆ ನಿರ್ಧಿಷ್ಟವಾಗಿ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ವಾಗುವುದಕ್ಕೆ ಸಾಧ್ಯವಿಲ್ಲ. ಕೇಂದ್ರದಿಂದ ಡೈರೆಕ್ಟ್ ಆಗಿ ಎಸ್.ಡಿ.ಎಮ್.ಸಿ. ಗೆ ಬಂದು ಜಮಾ ಆಗುತ್ತದೆ. ಒಂದು ಲಕ್ಷ ರೂಪಾಯಿ ಬಿಡುಗಡೆ ಮಾಡಿದರೆ ಆ ಹಣ ಪೂರ್ತಿ ಯಾಗಿ ಎಸ್.ಡಿ.ಎಂ.ಸಿ.ಯ ಖಾತೆಗೆ ಜಮಾ ಆಗುತ್ತದೆ. ಎಸ್.ಡಿ.ಎಂ.ಸಿ. ಯಲ್ಲಿ ಹತ್ತಾರು ಜನ ಕುಳಿತು ಚರ್ಚಿಸುತ್ತಾರೆ. ಅಲ್ಲಿನ ಮುಖ್ಯ ಶಿಕ್ಷಕರ ನೇತೃತ್ವದಲ್ಲಿ ಬಿಲ್ಡಿಂಗ್ ಕಟ್ಟುತ್ತಾರೆ. ಯಾವ ಶಾಲೆಯಲ್ಲೂ ಒಂದು ಹತ್ತು ಪೈಸೆಯೂ ಅವ್ಯವಹಾರ ಆಗುವುದಿಲ್ಲ. ಈ ಪದ್ಧತಿ ಬಹಳ ಒಳ್ಳೆಯದು. ನೂರಕ್ಕೆ ನೂರು ಅನುದಾನ ಖರ್ಚು ಆಗುತ್ತದೆ. ಅಂಥ ಪದ್ಧತಿಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ತರಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಎಲ್ಲಾ ಸರಕಾರದ ಮಟ್ಟದಲ್ಲಿ ತರಬೇಕು. ಇದರಿಂದ ಸಾಕಷ್ಟು ಅವ್ಯವಹಾರವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ನೀವು ಸಮೂಹಗಳನ್ನು ರಚನೆ ಮಾಡಿ, ಗ್ರಾಮ ಪಂಚಾಯಿತಿಗೆ ನೇರವಾಗಿ ಜಮಾ ಮಾಡಿ. ನೀವು ಮಧ್ಯವರ್ತಿಗಳನ್ನು ಇಡಬೇಡಿ. ನಮ್ಮಲ್ಲಿ ಬಹಳ ಅಧಿಕಾರಿಗಳು ಹೇಳುವ ಹಾಗೆ, ಮಧ್ಯವರ್ತಿಗಳು ಎಷ್ಟು ಹೆಚ್ಚಿಗೆ ಆಗುತ್ತಾರೆ ಅಷ್ಟು ಹೆಚ್ಚು ಅನುದಾನ ಕಟ್ ಆಗುತ್ತದೆ. ಏಕೆಂದರೆ, CE, AEE, EE, AE, SE, SO, ಇವರೆಲ್ಲರಿಂದ ಪಾರಾಗಿ ಅನುದಾನ ಖರ್ಚು ಆಗಬೇಕಾದರೆ, ನಮ್ಮ ಅನುಭವದ ಪ್ರಕಾರ ಹೇಳುವುದಾದರೆ, ನಮ್ಮಲ್ಲಿ ನೂರು ರೂಪಾಯಿ ಹಾಕಿದ್ದೇವೆಂದರೆ 20 ರೂಪಾಯಿ ಬಿಲ್ಡಿಂಗ್‌ಗಳಿಗಾಗಲಿ, ರಸ್ತೆಗಳಿಗಾಗಲಿ, ಖರ್ಚು ಮಾಡುವಂಥ ವ್ಯವಸ್ಥೆಯಿಲ್ಲ. ಇದು ಅಕ್ಷರಶಃ ಸಹ ಸತ್ಯವಿದೆ. ಕೆಲವು ಭಾಗದಲ್ಲಿ ಇದು ಹೆಚ್ಚು ಕಡಿಮೆ ಇರಬಹುದು. ಈ ಮಧ್ಯವರ್ತಿಗಳ ಜೊತೆಗೆ ಥರ್ಡ್‌ಪಾರ್ಟಿ ಇನ್ಸ್‌ಫೆಕ್ಷನ್ ಎಂದು ಹೇಳುತ್ತಾರೆ, ಇದರಲ್ಲಿ ಮತ್ತೆ ಪರ್ಸೆಂಟೇಜ್. ಇದರಿಂದ ಏನು ನಮ್ಮ ಕೆಲಸಗಳು ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ನಾವು ರಸ್ತೆಗಳಿಗಾಗಲಿ, ಇತರೆ ಅಭಿವೃದ್ಧಿಗಾಗಿ ನಾವು ಹಾಕುವ ದುಡ್ಡು ನೋಡಿದರೆ ಬಂಗಾದರದ ರಸ್ತೆಯನ್ನಾಗಿ ಮಾಡಬಹುದು ಎಂದು ಜನ ಮಾತನಾಡುತ್ತಾರೆ. ಬಂಗಾರದ ಪ್ಲೇಟ್ ಬಡಿಯಬಹುದು ಅಷ್ಟು ದುಡ್ಡು ಖರ್ಚಾಗುತ್ತದೆ. ಆದರೆ ಅಲ್ಲಿ ಏನೂ ಇರುವುದಿಲ್ಲ. ಈ ವರ್ಷ ರಸ್ತೆ ಮಾಡಿಸಿದ್ದರೆ ಮುಂದಿನ ವರ್ಷದಲ್ಲಿ ಅದರಲ್ಲಿ ತಗ್ಗು ಬಿದ್ದಿರುತ್ತವೆ. ಇದನ್ನು ಏನಾದರೂ ಬದಲಾವಣೆ ಮಾಡಿ. ಪಾರದರ್ಶಕವಾದ ಕಾನೂನು ತನ್ನಿ. ಆ ಪಾರದರ್ಶಕವಾದ ಕಾನೂನು ಯಾರಿಗೂ ಉಪಯೋಗವಾಗುತ್ತದೆಯೋ ನಮಗೇನೂ ಗೊತ್ತಿಲ್ಲ.

ಏಕೆಂದರೆ ಏನು ಮಾಡಿದರೂ ಅಷ್ಟೆ ಪರಿಸ್ಥಿತಿ ಇದೆ. ಅಷ್ಟು ಖರ್ಚು ಆಗುತ್ತದೆ. ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ನಾವು ಹೆಮ್ಮೆ ಪಡುತ್ತೇವೆ. ಅದು ಅಲ್ಲಿ ನಾಲ್ಕು ಮಂದಿಯೊಳಗೆ ಯಶ್ವಸಿಯಾಗಿ ಹಣ ಖರ್ಚು ಆಗಿ ಒಳ್ಳೆಯ ರೀತಿಯಲ್ಲಿ ಅನುಷ್ಠಾನಗೊಳ್ಳುತ್ತದೆ ಎನ್ನುವ ಸಂಗತಿ ಇದೆ. ಆ ಪದ್ದತಿಗೆ ಅನುಗುಣವಾಗಿ ಯಾವುದು ಸಾಧ್ಯವೋ ಆ ಇಲಾಖೆಗೆ ಹಣವನ್ನು ಆ ಹಳ್ಳಿಯ ಸ್ವಸಹಾಯ ಗುಂಪು ಮಾಡಿ ಅಲ್ಲಿ ಒಬ್ಬ ಅಧಿಕಾರಿಯ ಮೂಲಕ ಅದನ್ನು ನೋಡಿ ಖರ್ಚು ಮಾಡುವಂಥ ವ್ಯವಸ್ಥೆಯಾಗಬೇಕು. ಇದರಿಂದ ಎರಡು–ಮೂರು ಪಟ್ಟು ರಸ್ತೆಗಳನ್ನು ನಾವು ಅಭಿವೃದ್ಧಿ ಮಾಡಬಹುದು. ಅದಕ್ಕಾಗಿ ಈ ಪದ್ಧತಿಯನ್ನು ನಮ್ಮ ಸರ್ಕಾರ ಅನುಷ್ಠಾನಕ್ಕೆ ತಂದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಕನ್‌ಕ್ಲೂಡ್ ಮಾಡಿ.

ಶ್ರೀ ಸಿದ್ದು ಸವದಿ : ಆಯಿತು ಸರ್, ಪಟ್ಟಣಗಳಿಗೆ ಏಕೆ ಜನ ವಲಸೆ ಹೋಗುತ್ತಾರೆಂದರೆ, ನಮ್ಮ ಹಳ್ಳಿಗಳು ಕೂಡ ಹಾಗೆ ಆಗಿವೆ. ಹಳ್ಳಿಗಳಲ್ಲಿ ನಮಗೆ ಆಶ್ರಯಸಿಗುವುದಿಲ್ಲ. ನಾವು ಬಡ ಜನರಿಗೆ ಆಶ್ರಯ ಇಲಾಖೆಯೊಳಗೆ ಅಥವಾ ಯಾವುದೇ ಇಲಾಖೆಯೊಳಗೆ ನಾವು ಮನೆಗಳನ್ನು ಕೊಡಬೇಕಾದರೆ, ನಮಗೆ ಅಲ್ಲಿ ಜಮೀನು ಸಿಗುವುದಿಲ್ಲ. ಸೈಟ್ ತೊಂದರೆ ಬಹಳ ಇದೆ. ಅದಕ್ಕೋಸ್ಕರ ಎಷ್ಟೋ ಜನ ಕೂಲಿಗಾರರು ಅಲ್ಲಿ ಇರುವುದಕ್ಕೆ ಮನೆ ಇಲ್ಲವೆಂದು ಹೇಳಿ ಪಟ್ಟಣ ಪ್ರದೇಶ, ಗುಡ್ಡಗಾಡು ಅಥವಾ ಫಾರೆಸ್ಟ್‌ದೊಳಗಡೆ ಜೀವನ ಮಾಡುವ ಪದ್ಧತಿ ಇದೆ. ಅದಕ್ಕಾಗಿ ನಮ್ಮ ವಿನಂತಿ ಇದೆ. ಹಳ್ಳಿಗಳಲ್ಲಿ ಎಲ್ಲಿ ಆಶ್ರಯ ಮನೆ ಕಟ್ಟುವುದಕ್ಕೆ, ಶಾಲೆಗಳನ್ನು ಕಟ್ಟುವುದಕ್ಕೆ, ಸ್ಮಶಾನ ಭೂಮಿಗಾಗಿ ಅಥವಾ ಆಟದ ಮೈದಾನಕ್ಕೆ ಎಷ್ಟು ಅವಶ್ಯಕತೆ ಇದೆ ಅಷ್ಟು ಜಮೀನನ್ನು ನೀವು ಬೆಂಗಳೂರು ಪಟ್ಟಣಕ್ಕೆ ಹೇಗೆ acquire ಮಾಡಿ ಕೊಳ್ಳುತ್ತೀರಿ ಅದೇ ರೀತಿ ನೀವು ಬೆಂಗಳೂರಿನ ಜನರಿಗೆ ಹೇಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥ ಒಂದು ವ್ಯವಸ್ಥೆ ಇದೆ. ಆ ರೀತಿ ಹಳ್ಳಿಗಳಿಗೆ ಏಕೆ ಇಲ್ಲ. ಹಳ್ಳಿಗಳಲ್ಲಿ ಕೂಡ ಜನಸಂಖ್ಯೆ ಹೆಚ್ಚು ಇದೆ. 20–30 ವರ್ಷದಿಂದ ಎಷ್ಟು ಹಳ್ಳಿಗಳು ಇವೆ ಅಲ್ಲಿ ಎಷ್ಟು ಜಾಗ ಇತ್ತು ಇವತ್ತು ಅಷ್ಟೆ ಜಾಗ ಇದೆ. ಅವರಿಗೆ ಎಲ್ಲಿಯಾದರೂ ಸ್ವಲ್ಪ ವಿಸ್ತರಣೆ ಮಾಡಬೇಕಾದರೆ ಎಲ್ಲಿಯೂ ಸ್ವಲ್ಪ ಜಾಗ ಸಿಗುವುದಿಲ್ಲ. ಅದಕ್ಕಾಗಿ ಆಶ್ರಯ ಮನೆಗಳು ಇದ್ದರೆ ಮನೆಯ ಮೇಲೆ ಮನೆ ಕಟ್ಟುವ ವ್ಯವಸ್ಥೆ ಇದೆ, ಅವರಿಗೆ ಅಲ್ಲಿ ಜಾಗ ಸಿಗುವುದಿಲ್ಲ. ಅಂತಹ ಹಳ್ಳಿಗಳು ಬಹಳ ಆಗಿರುತ್ತವೆ. ನೀರಾವರಿ ಪ್ರದೇಶದಲ್ಲಿ ಮತ್ತಷ್ಟು ಹೆಚ್ಚಿಗೆ ಇವೆ,

ಅದಕ್ಕಾಗಿ ಸರ್ಕಾರ ಅದಕ್ಕೂ ಒಂದು ಕಾನೂನನ್ನು ಜಾರಿ ಮಾಡಿ. ಎಲ್ಲಿ ಅವಶ್ಯಕತೆ ಇದೆ ಅಷ್ಟು ಜಮೀನನ್ನು ವಶಪಡಿಸಿಕೊಂಡು ಅಲ್ಲಿರುವ ಹಳ್ಳಿಯ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಹಳ್ಳಿಯಲ್ಲಿರುವ ಜನರಿಗೆ ಅಲ್ಲಿ ಬದುಕುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂಥ ಮಾತನ್ನು ಸಹ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಯಾವ ರೀತಿಯಾಗಿ ರೈಲ್ವೆ ಸಲುವಾಗಿ ಕೇಂದ್ರ ಸರ್ಕಾರ ಬಜೆಟ್‌ನ್ನು ಕೊಡುತ್ತದೆಯೋ ಕೃಷಿಯ ಸಲುವಾಗಿ ಒಂದು ಪ್ರತ್ಯೇಕವಾದಂಥ ಒಂದು ಬಜೆಟ್‌ನ್ನು ಘೋಷಣೆ ಮಾಡಿದರೆ ಇನ್ನಷ್ಟು ಪರಿಣಾಮಕಾರಿಯಾಗಿ ಈ ಇಲಾಖೆಯನ್ನು ಬಲಪಡಿಸುವುದಕ್ಕೆ ಸಹಕಾರಿಯಾ ಗುತ್ತದೆನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೂಲಭೂತ ಸೌಲಭ್ಯಗಳಾದ ಸಾರಿಗೆಯ ಬಗ್ಗೆ ನಾವು ಬಹಳ ದಿವಸಗಳಿಂದ ಹೇಳುತ್ತಿದ್ದೇವೆ. ನಮ್ಮಲ್ಲಿ ರೈಲ್ವೆ ಲೈನ್ ಬಗ್ಗೆ ಬೇಡಿಕೆ ಇದೆ. ರೈಲ್ವೆ ಲೈನ್‌ದಿಂದ ನಮ್ಮ ಕೃಷಿಗೆ ಬಹಳಷ್ಟು ಅನುಕೂಲವಾಗಲಿದೆ. ಎಲ್ಲೆಲ್ಲಿ ರೈಲ್ವೆ ಲೈನ್ ಅವಶ್ಯಕತೆ ಇದೆಯೋ ಅದರ ಬಗ್ಗೆ ಸಹಿತ ಹೆಚ್ಚಿನ ಒಂದು ಒತ್ತನ್ನು ಕೊಟ್ಟು ಹೊಸ ಹೊಸ ಲೈನ್ ಮಾಡುವಂಥ ಒಂದು ಕೆಲಸ ಕಾರ್ಯಗಳು ಸಹಿತ ಸರಕಾರ ಕೊಡಬೇಕು ಎನ್ನುವಂಥ ಮಾತನ್ನು ಸಹಿತ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆಗಳನ್ನು ಕೊಡಬಯಸುತ್ತೇನೆ. ಈ ರೀತಿಯಾಗಿ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರುವುದರ ಮುಖಾಂತರ ರೈತರಿಗೆ ಹಳ್ಳಿಯಲ್ಲಿರತಕ್ಕಂಥ ಬಡ ಕೂಲಿ ಕಾರ್ಮಿಕರಿಗೆ ಈ ವ್ಯವಸ್ಥೆಗಳನ್ನು ಒದಗಿಸುವುದರ ಮುಖಾಂತರ ಸರ್ಕಾರ ಅವರ ನೆರವಿಗೆ ಬಂದರೆ ಬಹುಶ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಹೋಗುವಂಥ ಜನಸಂಖ್ಯೆ ಕಡಿಮೆ ಆಗುತ್ತದೆ. ಸನ್ಮಾನ್ಯ ಅಬ್ದುಲ್ ಕಲಾಂರವರ ಕನಸಿನ ಪ್ರಕಾರ ಪಟ್ಟಣಗಳಲ್ಲಿ ಕೊಡುವಂಥ ಮೂಲಭೂತ ಸೌಲಭ್ಯಗಳನ್ನು ಆ ಗ್ರಾಮೀಣ ಪ್ರದೇಶದಲ್ಲಿ ಕೊಡುವಂಥ ಒಂದು ವ್ಯವಸ್ಥೆಯನ್ನು ನಾವು ಮಾಡಿದರೆ ಗ್ರಾಮದಿಂದ ಬಹುಶಃ ಯಾರು ರೈತರು, ಬಡ ಕೂಲಿ ಕಾರ್ಮಿಕರು, ಶ್ರೀಮಂತರು ವಲಸೆ ಪಟ್ಟಣಕ್ಕೆ ಹೋಗುವುದಿಲ್ಲ. ತಮ್ಮ ಮುಂದಿನ ಮಕ್ಕಳ ಭವಿಷ್ಯಕ್ಕೆ ಬೇಕಾಗುವಂಥ ಮೂಲಭೂತ ಸೌಲಭ್ಯಗಳು ಸಿಗದಿರುವ ಕಾರಣಕ್ಕಾಗಿ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವ ಪರಿಸ್ಥಿತಿ ಇದೆ ವಿನಹ ಬೇಕಾಗಿ ಯಾರೂ ಪಟ್ಟಣಕ್ಕೆ ಹೋಗುವುದಿಲ್ಲ. ಅದಕ್ಕಾಗಿ ಆ ಸೌಲಭ್ಯಗಳನ್ನು ನಾವು ಗ್ರಾಮ ಮಟ್ಟದಲ್ಲಿ ಒದಗಿಸಿದ ಕೊಟ್ಟರೆ ಬಹುಶಃ ಆ ಗ್ರಾಮಗಳು ಅಭಿವೃದ್ಧಿ

ಆಗುತ್ತದೆನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ, ನನಗೆ ಈ ಸಂದರ್ಭದಲ್ಲಿ ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ : 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 6 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 10.9.2009ರ ಬೆಳಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು)